ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಸ್ವಾತಂತ್ರ್ಯ ಅಮೃತ ಮಹೋತ್ಸವ ಪುಸ್ತಕ ಮಾಲೆ

ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ

# ಪೊನ್ನಂಪೇಟೆ

ಪ್ರಧಾನ ಸಂಪಾದಕರು
**ಡಾ. ಬಿ.ವಿ. ವಸಂತಕುಮಾರ್**

ಸಂಪಾದಕರು
**ಕೋಡಿಬೆಟ್ಟು ರಾಜಲಕ್ಷ್ಮಿ**

ಲೇಖಕರು
**ಸೋಮೆಯಂಡ ಕೌಸಲ್ಯ ಸತೀಶ್**

**ಕರ್ನಾಟಕ ಸಾಹಿತ್ಯ ಅಕಾಡೆಮಿ**
ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು–೫೬೦ ೦೦೨
ದೂರವಾಣಿ: ೦೮೦–೨೨೨೧೧೭೩೦ / ೨೨೧೦೬೪೬೦
www.karnatakasahithyaacademy.org
ಇ–ಮೇಲ್: sahithya.academy@gmail.com

**PONNAMPETE:** An Introducing Book on the Places in Karnataka that Played a Major Role in the Freedom Struggle, Written by Someyanda Kausalya Sathish, Published by Kariyappa N., Registrar, Karnataka Sahithya Academy, Kannada Bhavana, J.C. Road, Bengaluru-560002

ಹಕ್ಕು: ಕರ್ನಾಟಕ ಸಾಹಿತ್ಯ ಅಕಾಡೆಮಿ

**ಪ್ರಧಾನ ಸಂಪಾದಕರು**
ಡಾ. ಬಿ.ವಿ. ವಸಂತಕುಮಾರ್
ಅಧ್ಯಕ್ಷರು, ಕರ್ನಾಟಕ ಸಾಹಿತ್ಯ ಅಕಾಡೆಮಿ

**ಸಂಪಾದಕ ಮಂಡಳಿ**
ಡಾ. ಎಸ್. ಜಿ. ರಾಮದಾಸ ರೆಡ್ಡಿ
ಡಾ. ಮೃತ್ಯುಂಜಯ ರುಮಾಲೆ
ಶ್ರೀ ನರೇಂದ್ರಕುಮಾರ್ ಎಸ್.ಎಸ್.
ಡಾ. ಪ್ರಕಾಶ ಗ. ಖಾಡೆ
ಶ್ರೀಮತಿ ಕೋಡಿಬೆಟ್ಟು ರಾಜಲಕ್ಷ್ಮಿ

**ಲೇಖಕರು**
ಸೋಮೆಯಂಡ ಕೌಸಲ್ಯ ಸತೀಶ್

ಮೊದಲ ಮುದ್ರಣ: ೨೦೨೨
ಪ್ರತಿಗಳು: ೧೦೦೦
ಬೆಲೆ: ರೂ. ೩೦/–
ಪುಟ: ೬೪

ಮುಖಪುಟ ಚಿತ್ರ: ಮುರಳೀಧರ ವಿ. ರಾಥೋಡ್


ಪ್ರಕಾಶಕರು:
ಕರಿಯಪ್ಪ ಎನ್., ರಿಜಿಸ್ಟ್ರಾರ್
ಕರ್ನಾಟಕ ಸಾಹಿತ್ಯ ಅಕಾಡೆಮಿ

ಮುದ್ರಕರು
**ರಶ್ಮಿ ಪ್ರಿಂಟರ್ಸ್**
ಸುಧಾಮನಗರ, ಬೆಂಗಳೂರು
ಮೊ: ೯೯೦೧೯೧೬೫೪೧

**ಬಸವರಾಜ ಬೊಮ್ಮಾಯಿ**
ಮುಖ್ಯಮಂತ್ರಿ

ಸ್ವಾತಂತ್ರ್ಯದ ಅಮೃತಮಹೋತ್ಸವ

ವಿಧಾನಸೌಧ
ಬೆಂಗಳೂರು–560 001



## ಶುಭ ಸಂದೇಶ

ಭಾರತ ಸ್ವಾತಂತ್ರ್ಯದ ಅಮೃತ ಮಹೋತ್ಸವ ಸಂದರ್ಭದಲ್ಲಿ ದೇಶದಾದ್ಯಂತ ದೇಶಪ್ರೇಮವನ್ನು ಬೆಳೆಸುವ ಸಾವಿರಾರು ಕಾರ್ಯಕ್ರಮಗಳು ನಡೆಯುತ್ತಿರುವ ಹೊತ್ತಿನಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಕರ್ನಾಟಕದ ೩೧ ಜಿಲ್ಲೆಗಳಲ್ಲಿ ಭಾರತ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಾಕ್ಷಿಯಾಗಿರುವ ೭೫ ಸ್ಥಳಗಳನ್ನು ಗುರುತಿಸಿ, ೭೫ ಪುಸ್ತಕಗಳನ್ನು ಹೊರತರುತ್ತಿರುವುದು ಸಂತೋಷದ ವಿಚಾರ.

ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ಕರ್ನಾಟಕದ ಕೊಡುಗೆ ಬಹಳ ಮಹತ್ವದ್ದು. ಕರ್ನಾಟಕದ ಹಲವು ಮಹನೀಯರು ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕಾಗಿ ನಡೆಸಿದ ತ್ಯಾಗ ಬಲಿದಾನಗಳು ಅಪಾರ. ಅಂತೆಯೇ ಕರ್ನಾಟಕದ ಸಾವಿರಾರು ಸ್ಥಳಗಳು ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಾಕ್ಷಿಯಾಗಿ ನಿಂತಿವೆ. ವಿದುರಾಶ್ವತ್ಥ, ಈಸೂರು, ಶಿವಪುರಗಳನ್ನೂ ಒಳಗೊಂಡಂತೆ ಕರ್ನಾಟಕದ ೩೧ ಜಿಲ್ಲೆಗಳ ಸಾವಿರಾರು ಸ್ಥಳಗಳಲ್ಲಿ ಭಾರತದ ಸ್ವಾತಂತ್ರ್ಯ ಸಂಗ್ರಾಮವು ನಡೆದುದಕ್ಕೆ ಸಾಕ್ಷಿಯಾಗಿ ಹಲವಾರು ಕುರುಹುಗಳು, ಅವಶೇಷಗಳು, ಸ್ಮಾರಕಗಳು ಇತಿಹಾಸದ ಪುಟಗಳಲ್ಲಿ ದಾಖಲಾಗಿವೆ. ಆದಾಗ್ಯೂ ಇನ್ನೂ ದಾಖಲಾಗಬೇಕಾದ ಸಂಗತಿಗಳು ಉಳಿದಿವೆ. ಭಾರತ ಸ್ವಾತಂತ್ರ್ಯದ ಅಮೃತೋತ್ಸವದ ಸಂದರ್ಭದಲ್ಲಿ ಈ ಎಲ್ಲ ಅಂಶಗಳನ್ನು ದಾಖಲಿಸುವ ಕೆಲಸ ತುರ್ತಾಗಿ ಆಗಬೇಕಾಗಿದೆ.

ಭಾರತ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಾಕ್ಷಿಯಾಗಿರುವ ಕರ್ನಾಟಕದ ವಿವಿಧ ಸ್ಥಳದಲ್ಲಿ ನಡೆದ ಘಟನೆಗಳು, ತ್ಯಾಗ, ಬಲಿದಾನಗಳು, ಹೋರಾಟಗಳು ಇತ್ಯಾದಿ

ವಿವರಗಳೆಲ್ಲವನ್ನೂ ಪುಸ್ತಕ ರೂಪದಲ್ಲಿ ದಾಖಲಿಸುವ ಮೂಲಕ, ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕರ್ನಾಟಕದ ಕೊಡುಗೆಯ ಮೇಲೆ ಬೆಳಕು ಚೆಲ್ಲುವ ಪ್ರಯತ್ನವನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿ ಮಾಡಿದೆ. ಇದು ನಿಜಕ್ಕೂ ಒಂದು ಸಂಶೋಧನಾತ್ಮಕ ಪ್ರಯತ್ನವೇ ಸರಿ.

ಈ ಸಾರ್ಥಕ ಕಾರ್ಯವನ್ನು ಯಶಸ್ವಿಗೊಳಿಸಿದ ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷರು ಹಾಗೂ ಬಳಗದವರನ್ನು ನಾನು ಮನಃಪೂರ್ವಕವಾಗಿ ಅಭಿನಂದಿಸುತ್ತೇನೆ.

ಎಲ್ಲರಿಗೂ ಭಾರತ ಸ್ವಾತಂತ್ರ್ಯ ಅಮೃತ ಮಹೋತ್ಸವದ ಶುಭಾಶಯಗಳು.

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ
ಕರ್ನಾಟಕ ಸರ್ಕಾರ

ಸ್ವಾತಂತ್ರ್ಯದ ಅಮೃತಮಹೋತ್ಸವ

**ವಿ ಸುನಿಲ್ ಕುಮಾರ್**
ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು



## ಶುಭ ಸಂದೇಶ

**'ಜಯ ಭಾರತ ಜನನಿಯ ತನುಜಾತೆ, ಜಯ ಹೇ ಕರ್ನಾಟಕ ಮಾತೆ'**

ಜಗತ್ತಿನಲ್ಲಿ ಭಾರತ ಒಂದು ವಿಶಿಷ್ಟವಾದ ಮಹತ್ವದ ರಾಷ್ಟ್ರ. ವಿಶ್ವಕ್ಕೆ ವಿಶ್ವಮಾನವನನ್ನು, ವಿಶ್ವಕುಟುಂಬವನ್ನು, ವಿಶ್ವನಾಥನನ್ನು, ಜಗನ್ಮಾತೆಯನ್ನು ನೀಡಿರುವ ಆಧ್ಯಾತ್ಮದ ಪುಣ್ಯಭೂಮಿ. ವೇದ, ಉಪನಿಷತ್ತುಗಳ ಕಾಲದಿಂದ ಹಿಡಿದು, ರಾಮ, ಕೃಷ್ಣ, ಶಿವ, ಬುದ್ಧ, ಬಸವ, ಗಾಂಧಿ, ಅಂಬೇಡ್ಕರ್, ಮೈತ್ರೇಯಿ, ಗಾರ್ಗಿ, ಅರುಂಧತಿ, ಸೀತೆ, ಮಂಡೋದರಿ, ಮೀರಾ, ಅಕ್ಕಮಹಾದೇವಿ ಮೊದಲಾದ ಪೌರಾಣಿಕ, ಐತಿಹಾಸಿಕ ವ್ಯಕ್ತಿತ್ವಗಳ ಅಂತಃಶಕ್ತಿಯಿಂದ ಜಗತ್ತನ್ನು ಬೆಳಗಿದ ದೇಶ ಭಾರತ. ಇಂಥ ದೇಶದ ಮೇಲೆ ಅಲೆಗ್ಸಾಂಡರನಿಂದ ಹಿಡಿದು ಮೊಘಲರಾದಿಯಾಗಿ ಬ್ರಿಟಿಷರವರೆಗೆ ಆಕ್ರಮಣ ಮಾಡಲು ಪ್ರಯತ್ನಿಸಿ, ಸೋತು ಭಾರತೀಯ ಸಂಸ್ಕೃತಿಯ ಅಗಾಧತೆಗೆ ಶರಣಾಗಿ ಭಾರತೀಯರೇ ಆಗಿಹೋಗಿದ್ದಾರೆ. ಹಾಗೇ ಭಾರತವನ್ನು ಭಾರತವನ್ನಾಗಿ ಉಳಿಸಿರುವ ಮಹಾನ್ ಶಕ್ತಿಯೇ ಸ್ವಾತಂತ್ರ್ಯದ ತೀವ್ರ ತುಡಿತ.

ಭಾರತದ ಸ್ವಾತಂತ್ರ್ಯ ಸಂಗ್ರಾಮ ಸುಮಾರು ಮುನ್ನೂರು ವರ್ಷಗಳಿಗೂ ಹಳೆಯದು. ಇಡೀ ಭಾರತವೇ ಬ್ರಿಟಿಷರ ವಿರುದ್ಧ ಹೋರಾಡಿ ದಾಸ್ಯದಿಂದ ಮುಕ್ತವಾಗಿ ಸ್ವಾತಂತ್ರ್ಯವನ್ನು ಪಡೆದುಕೊಂಡು ಈಗ ೭೫ ವರ್ಷಗಳಾಗಿವೆ. ಈ ಸ್ವಾತಂತ್ರ್ಯದ ಅಮೃತ ಮಹೋತ್ಸವ ಸಂದರ್ಭವನ್ನು ಅರ್ಥಪೂರ್ಣವಾಗಿ ಆಚರಿಸಬೇಕಾದ್ದು ನಮ್ಮೆಲ್ಲರ ಕರ್ತವ್ಯ.

ಇಡೀ ದೇಶವನ್ನೇ ಜಾಗೃತಗೊಳಿಸಿದ ಭಾರತದ ಸ್ವಾತಂತ್ರ್ಯ ಸಂಗ್ರಾಮ,

ನಮ್ಮ ಕರ್ನಾಟಕದಲ್ಲಿಯೂ ಸಹ ಸ್ವಾತಂತ್ರ್ಯ ಸಂಗ್ರಾಮದ ಪಾಂಚಜನ್ಯವನ್ನು ಮೊಳಗಿಸಿತು. ಕರ್ನಾಟಕದ ಕಲಿಗಳು ಸ್ವಾತಂತ್ರ್ಯ ಹೋರಾಟಕ್ಕೆ ಧುಮುಕಿ, ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ವಿಶಿಷ್ಟ ಕೊಡುಗೆ ನೀಡಿರುವುದನ್ನು ಸ್ಮರಿಸಬೇಕಿದೆ. ಕರ್ನಾಟಕದಲ್ಲಿ ಸಾವಿರಾರು ಸ್ವಾತಂತ್ರ್ಯ ಹೋರಾಟದ ಘಟನೆಗಳನ್ನು ಸಾರುವ ಐತಿಹಾಸಿಕ ಸ್ಥಳಗಳಿವೆ. ಅಂಥ ಸ್ಥಳಗಳು ಅರಿವಿಗೆ ಬಾರದೆ ಮರೆಯಾಗಿ ಹೋಗುತ್ತಿವೆ. ಸ್ವಾತಂತ್ರ್ಯದ ಹಣತೆ ಹೊತ್ತಿಸಿದ ಪ್ರಮುಖ ಸ್ಥಳಗಳಲ್ಲಿ ತ್ಯಾಗ, ಬಲಿದಾನಗಳನ್ನು ನೆನಪಿಸುವ ನಿಟ್ಟಿನಲ್ಲಿ ಮತ್ತು ಇಂದಿನ ಪೀಳಿಗೆಗೆ ತಿಳಿಸಿಕೊಡುವ ಕೆಲಸ ಈ ಅಮೃತ ಮಹೋತ್ಸವದ ಸಂದರ್ಭದಲ್ಲಿ ಆಗುತ್ತಿರುವುದು ಸಂತಸದ ವಿಷಯ. ಈ ನಿಟ್ಟಿನಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಒಂದು ಬೃಹತ್ ಆಂದೋಲನವನ್ನು ಹಮ್ಮಿಕೊಂಡಿದೆ. ಅದರ ಅಂಗವಾಗಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕರ್ನಾಟಕದ ಐತಿಹಾಸಿಕ ಮಹತ್ವಗಳನ್ನು ತಿಳಿಸಿಕೊಡುವ ೭೫ ಸ್ಥಳಗಳ ಬಗ್ಗೆ ೭೫ ವಿವಿಧ ಲೇಖಕರಿಂದ ಒಟ್ಟು ೭೫ ಪುಸ್ತಕಗಳನ್ನು, ಅದರ ತಲಾ ೧೦೦೦ ಪ್ರತಿಯಂತೆ ೭೫೦೦೦ ಪ್ರತಿಗಳನ್ನು ಎರಡು ತಿಂಗಳಲ್ಲಿ ಬರೆಯಿಸಿ, ಮುದ್ರಿಸಿ ಓದುಗರಿಗೆ ತಲುಪಿಸುತ್ತಿರುವುದು ನಿಜಕ್ಕೂ ಹೆಮ್ಮೆಯ ವಿಷಯ. ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪ್ರತಿಯೊಬ್ಬರನ್ನೂ ಈ ಸಂದರ್ಭದಲ್ಲಿ ಅಭಿನಂದಿಸುತ್ತೇನೆ.

ನಾವೆಲ್ಲರೂ ಕೂಡಿ ನಮ್ಮ ನಮ್ಮ ಮನೆಮನಗಳಿಂದ ನಾಡು, ನುಡಿ, ಸಾಹಿತ್ಯ, ಸಂಸ್ಕೃತಿ, ಪರಂಪರೆಗಳನ್ನು ಬೆಳೆಸೋಣ. ರಸಋಷಿ ಕುವೆಂಪು ಅವರು ಹೇಳಿರುವ 'ಜಯ ಭಾರತ ಜನನಿಯ ತನುಜಾತೆ, ಜಯ ಹೇ ಕರ್ನಾಟಕ ಮಾತೆ' ಎಂಬ ಆದರ್ಶದೊಂದಿಗೆ ಕರ್ನಾಟಕದ ಮೂಲಕ ಭಾರತವನ್ನೂ, ಭಾರತದ ಮೂಲಕ ಕರ್ನಾಟಕವನ್ನೂ ಅಭಿನ್ನಗೊಳಿಸೋಣ, ಬಲಿಷ್ಠಗೊಳಿಸೋಣ. ಭವ್ಯ ಕರ್ನಾಟಕ, ಭವ್ಯ ಭಾರತ ನಿರ್ಮಿಸೋಣ.

**(ವಿ ಸುನಿಲ್ ಕುಮಾರ್)**
ಇಂಧನ, ಕನ್ನಡ ಮತ್ತು ಸಂಸ್ಕೃತಿ
ಇಲಾಖೆ ಸಚಿವರು

## ಪ್ರಧಾನ ಸಂಪಾದಕರ ಮಾತು

ಸ್ವಾತಂತ್ರ್ಯ ಎಂಬುದು ಲೌಕಿಕವಾಗಿಯೂ ಲೋಕೋತ್ತರವಾಗಿಯೂ ಮಹೋನ್ನತವಾದ ಮೌಲ್ಯ. ಭಾರತೀಯ ಸಂಸ್ಕೃತಿಯು ಧರ್ಮ, ಅರ್ಥ, ಕಾಮ, ಮೋಕ್ಷಗಳನ್ನು ಪುರುಷಾರ್ಥವೆಂದು ಕರೆದಿದೆ. ಮೋಕ್ಷವೆಂದರೆ ಬಿಡುಗಡೆ, ಸ್ವಾತಂತ್ರ್ಯ ಎಂದರ್ಥ. ಹುಟ್ಟು ಸಾವುಗಳಿಂದ ಬಿಡುಗಡೆ ಎಂಬುದು ಲೋಕೋತ್ತರವಾದ ಅರ್ಥವಾದರೆ, ಸಾವಿಲ್ಲದ, ನೋವಿಲ್ಲದ ಸ್ಥಿತಿಗಾಗಿ ಕಲ್ಯಾಣ ನಾಡಿನ ನಿರ್ಮಾಣಕ್ಕಾಗಿ ನಾವು ಗಳಿಸುವ ನಮ್ಮ ಸ್ವಯಂ ನಿಯಂತ್ರಣದ ಸ್ವಾತಂತ್ರ್ಯ ಎಂಬುದು ಲೌಕಿಕವಾದ ಅರ್ಥ. ಲೌಕಿಕ ಹಾಗೂ ಅಲೌಕಿಕಗಳು ಪರಸ್ಪರ ವಿರೋಧಿಗಳಲ್ಲ; ಅವು ಪರಸ್ಪರ ಪೂರಕವಾದವು. ಲೋಕವನ್ನು ಲೋಕೋತ್ತರದ ಔನ್ನತ್ಯಕ್ಕೆ ಏರಿಸುವ ದರ್ಶನವೇ ಭಾರತೀಯ ದರ್ಶನ. ಸ್ವಾತಂತ್ರ್ಯ ನಮ್ಮ ಧರ್ಮ, ನಮ್ಮ ಆತ್ಮ, ನಮ್ಮ ಜೀವನದ ಪರಮ ಪುರುಷಾರ್ಥ. ಅದನ್ನು ಬಯಲು ಎಂದೂ ಕರೆದಿದ್ದಾರೆ. ಅಂತಹ ಸ್ವಾತಂತ್ರ್ಯಕ್ಕಾಗಿ ಭಾರತವು ತನ್ನ ಪುರಾತನ ಕಾಲದಿಂದಲೂ ಬದುಕುತ್ತಾ ಬಂದಿದೆ. ಸ್ವಾತಂತ್ರ್ಯಕ್ಕೆ ಚ್ಯುತಿ ಬಂದಾಗಲೆಲ್ಲ ಭಾರತೀಯರು ಭರತಮಾತೆಯ ಪದತಲದಲ್ಲಿ ತಮ್ಮ ತನು–ಮನ–ಧನಗಳನ್ನು ಅರ್ಪಿಸಿದ್ದಾರೆ. ಅದನ್ನು ರಸಋಷಿ ಕುವೆಂಪು ಅವರು "ಇಂದು ರಕ್ತದ ಬಿಂದು ನಾಳೆ ಸೌಖ್ಯದ ಸಿಂಧು" ಎಂದು ಕರೆದಿದ್ದಾರೆ.

ನಮ್ಮ ದೇಶದ ಸ್ವಾತಂತ್ರ್ಯ ಎಂದರೆ ಅದು ತ್ಯಾಗ, ಬಲಿದಾನಗಳ ಫಲ. ಭಾರತದ ಮೇಲೆ ದಾಳಿ ಮಾಡಲು ಬಂದ ಅಲೆಗ್ಸಾಂಡರನಿಂದ ಹಿಡಿದು ಮೊಘಲರಾದಿಯಾಗಿ ಬ್ರಿಟಿಷರವರೆಗಿನ ಎಲ್ಲ ದಾಳಿಕೋರರ ಕ್ರೌರ್ಯವನ್ನು ಮೆಟ್ಟಿ ನಿಂತು ಭಾರತೀಯರು ಭಾರತಾಂಬೆಯ ಆತ್ಮಗೌರವವನ್ನು ಎತ್ತಿಹಿಡಿದಿರುವುದರ ಪ್ರತೀಕ ನಮ್ಮ ಸ್ವಾತಂತ್ರ್ಯ.

ಪ್ರಸ್ತುತ ೧೫.೦೮.೧೯೪೭ ರಂದು ನಾವು ಗಳಿಸಿದ ಸ್ವಾತಂತ್ರ್ಯದ ಅಮೃತಘಳಿಗೆಗೆ ಇದೀಗ ೧೫.೦೮.೨೦೨೧ಕ್ಕೆ ೭೫ನೆಯ ಸ್ವಾತಂತ್ರ್ಯ ಅಮೃತ ಮಹೋತ್ಸವ ಸಂಭ್ರಮ. ೧೫.೦೮.೨೦೨೨ಕ್ಕೆ ೭೫ ವರ್ಷಗಳನ್ನು ಪೂರೈಸಿ ೭೬ನೆಯ ಸ್ವಾತಂತ್ರ್ಯೋತ್ಸವದ ಆತ್ಮನಿರ್ಭರ ಭಾರತದ ನವನಿರ್ಮಾಣದ ಅವಕಾಶಗಳ ಸಂಭ್ರಮ. ಈ ಒಂದು ವರ್ಷ ಕಾಲ ಭಾರತ ಸರ್ಕಾರ, ಕರ್ನಾಟಕ ಸರ್ಕಾರ "ಸ್ವಾತಂತ್ರ್ಯದ ಅಮೃತ ಮಹೋತ್ಸವ"ವನ್ನು ಆಚರಿಸುತ್ತಿದೆ. ಅದರ ಅಂಗವಾಗಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಆಗಸ್ಟ್– ೨೦೨೧ರ ತಿಂಗಳು ಪೂರ್ತಿ "ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ" ಎಂಬ ಹೆಸರಿನಲ್ಲಿ ಕರ್ನಾಟಕದ ಎಲ್ಲ ಜಿಲ್ಲೆಗಳಲ್ಲಿ ನಡೆದಿರುವ ಸ್ವಾತಂತ್ರ್ಯ ಹೋರಾಟ ಕುರಿತ ಆನ್ಲೈನ್ ಉಪನ್ಯಾಸಗಳನ್ನು ನಡೆಸಿದೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮಾನ್ಯ ಸಚಿವರಾದ ಶ್ರೀ ಸುನಿಲ್ ಕುಮಾರ್ ಅವರು ಸ್ವಾತಂತ್ರ್ಯದ ಅಮೃತ ಮಹೋತ್ಸವವನ್ನು ರಾಜ್ಯಾದ್ಯಂತ ಬೃಹತ್ ಸ್ವರೂಪದಲ್ಲಿ ಅರ್ಥಪೂರ್ಣವಾಗಿ ಆಚರಿಸಬೇಕೆಂದು ತೀರ್ಮಾನಿಸಿದ್ದಾರೆ. ಅವರಿಗೆ ರಾಜ್ಯದ ೭೫ ಸ್ಥಳಗಳಲ್ಲಿ ೭೫ ಸ್ವಾತಂತ್ರ್ಯ ಜಾಥಾಗಳು ನಡೆಯಬೇಕು, ಎಲ್ಲ ಜಿಲ್ಲೆಗಳಿಂದ ರಥಯಾತ್ರೆ ಆಗಬೇಕು, ಬೆಂಗಳೂರು ಮಹಾನಗರದಲ್ಲಿ ಮೂರು ದಿನಗಳ ಸಮಾವೇಶ, ಪ್ರದರ್ಶನಿ, ಪುಸ್ತಕ ಮಾರಾಟ ಮೊದಲಾದ ಹತ್ತು ಹಲವು ಚಟುವಟಿಕೆಗಳನ್ನು ನಡೆಸುವ ಮೂಲಕ ಹೊಸ ತಲೆಮಾರಿಗೆ ಸ್ವಾತಂತ್ರ್ಯದ ಅಮೃತವನ್ನುಣಿಸಬೇಕೆಂಬ ಕನಸಿದೆ. ಅದರ ಭಾಗವಾಗಿ ಅವರು ರಾಜ್ಯದ ೭೫ ಸ್ವಾತಂತ್ರ್ಯ ಹೋರಾಟದ ಸ್ಥಳಗಳನ್ನು ಗುರುತಿಸಿ ೭೫ ಕಿರುಹೊತ್ತಿಗೆಗಳನ್ನು ಬರೆಸಿ ಪ್ರಕಟಿಸುವ ಜವಾಬ್ದಾರಿಯನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿಗೆ ವಹಿಸಿದ್ದಾರೆ. ನಮಗೆ ಜವಾಬ್ದಾರಿ ವಹಿಸಿದ್ದು ದಿನಾಂಕ: ೩೦.೧೧.೨೦೨೧ರಂದು ಮಾನ್ಯ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ. ಅಂದಿನಿಂದಲೇ ಕಾರ್ಯಪ್ರವೃತ್ತರಾದ ನಾವು ರಾಜ್ಯದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಎಲ್ಲ ಜಿಲ್ಲಾ ಸಹಾಯಕ ನಿರ್ದೇಶಕರಿಂದ ಸ್ಥಳಗಳ ಮಾಹಿತಿ ಪಡೆದೆವು. ಜೊತೆಗೆ ರಾಜ್ಯದ ಐದು ಜನರನ್ನು ಸಂಪಾದಕರನ್ನಾಗಿ ನಿಯೋಜಿಸಿ ದಿನಾಂಕ: ೦೩.೧೨.೨೦೨೧ರಂದು ಅಕಾಡೆಮಿಯಲ್ಲಿ ಸಂಪಾದಕರ ಸಭೆ ನಡೆಸಿದೆವು. ಸಂಪಾದಕರಾಗಿ ಡಾ. ಮೃತ್ಯುಂಜಯ ರುಮಾಲೆ, ಹೊಸಪೇಟೆ, ಡಾ. ಎಸ್. ಜಿ. ರಾಮದಾಸ ರೆಡ್ಡಿ, ಮೈಸೂರು, ಡಾ. ಪ್ರಕಾಶ ಗ. ಖಾಡೆ, ಬಾಗಲಕೋಟೆ,



ಶ್ರೀ ನರೇಂದ್ರಕುಮಾರ್ ಎಸ್.ಎಸ್., ಬೆಂಗಳೂರು ಹಾಗೂ ಶ್ರೀಮತಿ ರಾಜಲಕ್ಷ್ಮಿ ಕೋಡಿಬೆಟ್ಟು, ಮಂಗಳೂರು ಇವರೊಂದಿಗೆ ಎಲ್ಲ ಸ್ಥಳಗಳ ಬಗ್ಗೆ ಚರ್ಚಿಸಿ ೭೫ ಸ್ಥಳಗಳನ್ನು ಆಯ್ಕೆ ಮಾಡಿದೆವು. ಒಬ್ಬೊಬ್ಬ ಸಂಪಾದಕರಿಗೆ ೧೫ ಸ್ಥಳಗಳನ್ನು ಹಂಚಿ, ೧೫ ಲೇಖಕರಿಂದ ೧೫ ಕಿರುಪುಸ್ತಕಗಳನ್ನು ಬರೆಯಿಸಿಕೊಡುವ ಜವಾಬ್ದಾರಿ ನೀಡಿದೆವು. ಎರಡು ತಿಂಗಳ ಅವಧಿಯಲ್ಲಿ ಈ ೭೫ ಪುಸ್ತಕಗಳು ಪ್ರಕಟವಾಗುತ್ತಿವೆ. ಈ ಕೃತಿಗಳು ಇತಿಹಾಸದ ಶಾಸ್ತ್ರೀಯ ಮಾದರಿ, ವರದಿಯ ಕಥನ ಮಾದರಿ ಹಾಗೂ ಸೃಜನಶೀಲ ಅಭಿವ್ಯಕ್ತಿಯ ಸಾಹಿತ್ಯ ಮಾದರಿಗಳಿಂದ ಕೂಡಿರುವುದು ಗಮನಾರ್ಹ. ಅತೀ ಕಡಿಮೆ ಅವಧಿಯಲ್ಲಿ ಕ್ಷೇತ್ರಕಾರ್ಯ ಮತ್ತು ಅಧ್ಯಯನ ಮಾಡಿ ಮೌಲಿಕವಾದ ಕೃತಿಗಳನ್ನು ಬರೆದುಕೊಟ್ಟಿರುವ ಎಲ್ಲಾ ಲೇಖಕರ, ಸಂಪಾದಕರ ಶ್ರಮ ಸಾರ್ಥಕತೆ ಪಡೆದಿದೆ. ಈ ನಿಟ್ಟಿನ ಅಧ್ಯಯನಗಳಿಗೆ ಈ ಕೃತಿಗಳು ಪ್ರೇರೇಪಿಸುತ್ತವೆ. ಇದೊಂದು ತುರ್ತಾದ ಆಂದೋಲನಾತ್ಮಕವಾದ ಪ್ರಯತ್ನ. ಇದಕ್ಕೆ ಸಂಪೂರ್ಣ ಸಹಕಾರ ನೀಡಿದ ಮಾನ್ಯ ಸಚಿವರಾದ ಶ್ರೀ ವಿ ಸುನಿಲ್ ಕುಮಾರ್ ಅವರಿಗೆ, ಎಲ್ಲಾ ಸಂಪಾದಕರಿಗೆ, ಎಲ್ಲಾ ಲೇಖಕರಿಗೆ, ಇಲಾಖೆಯ ಕಾರ್ಯದರ್ಶಿಗಳಾದ ಡಾ. ಎನ್. ಮಂಜುಳಾ ಅವರಿಗೆ, ನಿರ್ದೇಶಕರಾದ ಶ್ರೀ ಎಸ್. ರಂಗಪ್ಪ ಅವರಿಗೆ, ಜಂಟಿ ನಿರ್ದೇಶಕರಾದ ಶ್ರೀ ಅಶೋಕ್ ಎನ್. ಚಲವಾದಿ ಅವರಿಗೆ ಹಾಗೂ ಎಲ್ಲಾ ಅಧಿಕಾರಿ ವರ್ಗಕ್ಕೆ ಸಾಹಿತ್ಯ ಅಕಾಡೆಮಿಯ ಸರ್ವ ಸದಸ್ಯರಿಗೆ ಪ್ರೀತಿಯಿಂದ ವಂದಿಸುತ್ತೇನೆ. ಯೋಜನೆ ಪೂರ್ಣಗೊಳ್ಳಲು ವಿಶೇಷವಾಗಿ ನೆರವಾದ ಮಿತ್ರರಾದ ಶ್ರೀ ಮಾಲತೀಶ್ ಭಟ್, ಶ್ರೀ ಹರ್ಷ ನಾರಾಯಣ, ಶ್ರೀಮತಿ ನಯನಾ ಎಸ್. ಅವರನ್ನು ನೆನೆಯುತ್ತಾ ವಂದಿಸುತ್ತೇನೆ. ಕಡಿಮೆ ಅವಧಿಯಲ್ಲಿ ಹಗಲಿರುಳು ಶ್ರಮಿಸಿದ ದಣಿವರಿಯದ ದುಡಿಮೆಗಾರರಾದ ರಿಜಿಸ್ಟ್ರಾರ್ ಎನ್. ಕರಿಯಪ್ಪ, ನಮ್ಮ ಬಳಗ ವಿ. ಹರೀಶ್‌ಕುಮಾರ್, ಹರೀಶ್, ಸೈಯದ್ ಜಾವೀದ್, ಸುಚಿತ್ರ ಎಸ್. ಜಿ., ಗೋಪಾಲ ಎನ್., ಸುನೀಲ್ ಅವರಿಗೆ ಹಾಗೂ ಸುಂದರವಾಗಿ ಮುದ್ರಿಸಿದ ರಶ್ಮಿ ಪ್ರಿಂಟರ್ಸ್ ಬಳಗಕ್ಕೆ, ಮುಖಪುಟ ರಚಿಸಿಕೊಟ್ಟ ಶ್ರೀ ಮುರಳೀಧರ ವಿ. ರಾಥೋಡ್ ಅವರಿಗೆ ವಂದಿಸುತ್ತೇನೆ.

**ಬಿ. ವಿ. ವಸಂತಕುಮಾರ್**
ಅಧ್ಯಕ್ಷರು

# ಲೇಖಕರ ಮಾತು

ಸ್ವಾತಂತ್ರ್ಯ ಅಮೃತ ಮಹೋತ್ಸವದ ಈ ಸಂದರ್ಭದಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿಯವರು ೭೫ ಕಿರುಹೊತ್ತಿಗೆಗಳನ್ನು ಹೊರತರುತ್ತಿರುವುದು ಶ್ಲಾಘನೀಯ. ಅದರಲ್ಲೂ ಮುಖ್ಯವಾಗಿ ಕೊಡಗಿನ ಸ್ವಾತಂತ್ರ್ಯ ಚಳುವಳಿಯನ್ನು ಜಗತ್ತಿನ ಎದುರು ಅನಾವರಣಪಡಿಸಲು ನೀಡಿದ ಆಯ್ಕೆ 'ಪೊನ್ನಂಪೇಟೆ'ಯ ಹೋರಾಟದ ಚಿತ್ರಣ ನಿಜಕ್ಕೂ ಹೊಸತನದ ಪ್ರಯತ್ನವೇ ಸರಿ. ಏಕೆಂದರೆ ಸಣ್ಣ ಜಿಲ್ಲೆ ಕೊಡಗಿನ ಕೆಲವೊಂದು ಸ್ವಾತಂತ್ರ್ಯ ಚಳುವಳಿಗಳು ಮಾತ್ರ ಪುಸ್ತಕಗಳಲ್ಲಿ ದಾಖಲಾಗಿವೆ. ಕೆಲವೊಂದು ಸ್ಥಳ ಮಹಿಮೆ, ಬಲಿದಾನ–ತ್ಯಾಗ ಕೊಡವರ ಮನೆಗಳಲ್ಲಿ ಇರುವ ಫೋಟೋಗಳ ಫ್ರೇಮ್‌ಗಳಲ್ಲಿ ಕೇವಲ ಸ್ನೇಹಿತರು, ಬಂಧುಗಳಿಗೆ ಮಾತ್ರ ನೆನಪಿಗಾಗಿ ಉಳಿದಿವೆ. ಅದೆಷ್ಟೋ ತ್ಯಾಗ–ಬಲಿದಾನಗಳು ಸ್ವಾತಂತ್ರ್ಯ ಚಳುವಳಿಯ ನೈಜ ಚಿತ್ರಣವನ್ನು ಸಾರಿ ಹೇಳುತ್ತವೆಯೇ ಹೊರತು ಹೊರಜಗತ್ತಿಗೆ ತಿಳಿದಿಲ್ಲ. ಇತಿಹಾಸ ಪುಟಗಳಲ್ಲಿ ಎಲ್ಲಿಯೂ ದಾಖಲಾಗದ ಬಹಳಷ್ಟು ತ್ಯಾಗ–ಬಲಿದಾನಗಳ ಕಥೆಯನ್ನು ಜಗತ್ತಿನೆದುರು ಅನಾವರಣ ಗೊಳಿಸಲು ಸಾಹಿತ್ಯ ಅಕಾಡೆಮಿಯ ಈ ಪ್ರಯತ್ನ ಬಹುದೊಡ್ಡ ಕೈಂಕರ್ಯ ಎಂದೇ ನಾನು ಭಾವಿಸುತ್ತೇನೆ.

ಈ ನಾಡಿಗಾಗಿ ಪ್ರಾಣಾರ್ಪಣೆ ಮಾಡಿದ ಮಹಾನ್ ಚೇತನಗಳನ್ನು ನೆನೆಯುವುದು ಎಂದೆಂದಿಗೂ ನಮ್ಮ ಆದ್ಯ ಕರ್ತವ್ಯ. ಈ ಅವಕಾಶವನ್ನು ಕೊಡಗಿನ ಕ್‌ಗ್ಗಟ್ಟ್‌ನಾಡಿನ ಪಾಲಿಗೆ ನೀಡಿದ ಕರ್ನಾಟಕ ಸಾಹಿತ್ಯ ಅಕಾಡೆಮಿಗೆ, ಮಾಹಿತಿಗೆ ಸಹಕರಿಸಿ ಬರವಣಿಗೆಗೆ ಪ್ರೋತ್ಸಾಹಿಸಿದ ಸ್ನೇಹಿತ ಮತ್ತು ಪತ್ರಕರ್ತರು ಹಾಗೂ ಅಕಾಡೆಮಿಯ ಸದಸ್ಯರಾದ ಮಾಣಿಪಂಡ ಸಂತೋಷ್ ತಮ್ಮಯ್ಯನವರಿಗೆ, ನನ್ನ ಕರಡುಪ್ರತಿಯನ್ನು ತಿದ್ದಿ–ತೀಡಿ ಒಂದು ರೂಪಕ್ಕೆ ಬರಲು ಶ್ರಮಿಸಿದ ಸಂಪಾದಕರಾದ ರಾಜಲಕ್ಷ್ಮಿಯವರಿಗೆ ಮತ್ತು ಕೆಲವು ಪುಸ್ತಕಗಳ ಮಾಹಿತಿಯನ್ನು

ಒದಗಿಸಿದ ಸೋಮೆಯಂಡ ಬೋಸ್‌ವರಿಗೆ ಮತ್ತು ಸದಾ ನನ್ನ ಬೆನ್ನೆಲುಬಾಗಿ ನಿಂತ ನನ್ನ ಕುಟುಂಬದವರಿಗೆ ನನ್ನ ಹೃತ್ಪೂರ್ವಕ ಧನ್ಯವಾದಗಳನ್ನು ಅರ್ಪಿಸುತ್ತೇನೆ.

**– ಸೋಮೆಯಂಡ ಕೌಸಲ್ಯ ಸತೀಶ್**

ಚಂಬೆಬೆಳಿಯೂರು

## ಪರಿವಿಡಿ


| | | |
|---|---|---|
| ಶುಭ ಸಂದೇಶ | | ೩ |
| ಶುಭ ಸಂದೇಶ | | ೫ |
| ಪ್ರಧಾನ ಸಂಪಾದಕರ ಮಾತು | | ೭ |
| ಲೇಖಕರ ಮಾತು | | ೧೧ |
| ೧. | ಪಂಜೆ ಮಂಗೇಶರಾಯರ ಹುತ್ತರಿಹಾಡು | ೧೫ |
| ೨. | ಆಶುನುಡಿ | ೧೫ |
| ೩. | ಪೀಠಿಕೆ | ೧೭ |
| ೪. | ಕೊಡಗಿನ ಭೌಗೋಳಿಕ ಪಕ್ಷಿನೋಟ | ೧೯ |
| ೫. | ನಾಡು ವಿಭಜನೆ | ೨೦ |
| ೬. | ಬ್ರಿಟಿಷರ ಆಳ್ವಿಕೆಗೆ ಮುನ್ನ ಇದ್ದ ಕೊಡಗು | ೨೦ |
| ೭. | ಪೊನ್ನಂಪೇಟೆ (ಅಂಜಿಗೇರಿ ನಾಡು) | ೨೧ |
| ೮. | ಕೊಡಗನ್ನು ಆಳಿದ ರಾಜವಂಶಜರು ಮತ್ತು ದಿವಾನರು | ೨೨ |
| ೯. | ಕೊಡಗಿನ ಮೇಲಾದ ದಾಳಿ ಮತ್ತು ಯುದ್ಧ | ೨೪ |
| ೧೦. | ಬ್ರಿಟಿಷರ ಆಳ್ವಿಕೆಗೆ ಮುನ್ನ ಇದ್ದ ಕೊಡಗಿನ ಪರಿಸ್ಥಿತಿ | ೨೫ |
| ೧೧. | ಬ್ರಿಟಿಷರ ವಿರುದ್ಧ ಹೋರಾಟ | ೨೬ |
| ೧೨. | ಬ್ರಿಟಿಷರ ಆಡಳಿತಾವಧಿಯಲ್ಲಿ ಕೊಡಗಿನಲ್ಲಾದ ಸುಧಾರಣೆಗಳು | ೨೯ |
| ೧೩. | ಬ್ರಿಟಿಷ್ ಸರಕಾರದ ವಿರುದ್ಧ ಧ್ವನಿ | ೩೨ |
| ೧೪. | ಲೆಜಿಸ್ಲೇಟಿವ್ ಕೌನ್ಸಿಲ್ ಜಾರಿ | ೩೪ |
| ೧೫. | ಕೊಡಗು ಕಂಪೆನಿಯ ಸ್ಥಾಪನೆ | ೩೪ |

| | | |
|---|---|---|
| ೧೬. | ಕೊಡಗು ಪತ್ರಿಕೆ | ೩೫ |
| ೧೭. | ಅಖಿಲ ಭಾರತ ಕಾಂಗ್ರೆಸ್ ಅಧಿವೇಶನ – ಬೆಳಗಾವಿ | ೩೭ |
| ೧೮. | ಕಲ್ಕತ್ತದಲ್ಲಿ ಅಖಿಲ ಭಾರತ ಕಾಂಗ್ರೆಸ್ಸಿನ ಅಧಿವೇಶನ | ೩೮ |
| ೧೯. | ಕುಶಾಲಪುರದಲ್ಲಿ ರಾಷ್ಟ್ರಧ್ವಜ ವಂದನೆ | ೩೯ |
| ೨೦. | ಜಮೀನ್ದಾರರ ಸಂಘದ ಸಮಾವೇಶ | ೪೦ |
| ೨೧. | ಹುತ್ತರಿ ಹಬ್ಬ ಆಚರಣೆ ನಿಲ್ಲಿಸಿದ್ದು | ೪೧ |
| ೨೨. | ಮದ್ಯಪಾನ ನಿಷೇಧ ಸತ್ಯಾಗ್ರಹ | ೪೧ |
| ೨೩. | ಹುದಿಕೇರಿ ಸತ್ಯಾಗ್ರಹ | ೪೪ |
| ೨೪. | ಕೋಳೇರ ಕಾವೇರಿಯ ತ್ಯಾಗ | ೪೬ |
| ೨೫. | ಪೋಡಮಡ ಜಾನಕಿಯ ತ್ಯಾಗ | ೪೮ |
| ೨೬. | ಮಹನೀಯರ ದಂಡು ಕೊಡಗಿನೆಡೆಗೆ | ೪೯ |
| ೨೭. | ಕರಾಚಿಯಲ್ಲಿ ಕಾನೂನು ಭಂಗ ಚಳುವಳಿ | ೫೦ |
| ೨೮. | ಕೊಡಗಿಗೆ ಮಹಾತ್ಮ ಗಾಂಧೀಜಿ | ೫೦ |
| ೨೯. | ಸ್ವಾತಂತ್ರ್ಯ ಹೋರಾಟದ ರೂವಾರಿಗಳು | ೫೨ |
| ೩೦. | ವಿದ್ಯಾರ್ಥಿಗಳ ಚಳುವಳಿ | ೫೨ |
| ೩೧. | ಸರ್ಪಾಸ್ತ್ರ ಪತ್ರಿಕೆ | ೫೩ |
| ೩೨. | ಕ್ವಿಟ್ ಇಂಡಿಯಾ ಚಳುವಳಿ | ೫೩ |
| ೩೩. | ಸ್ವಾತಂತ್ರ್ಯ ಹಬ್ಬ | ೫೫ |
| ೩೪. | ವ್ಯಕ್ತಿ ಪರಿಚಯ | ೫೫ |
| ೩೫. | ಉಲ್ಲೇಖ | ೬೦ |
| | ಅಮೃತ ಮಹೋತ್ಸವ ಪ್ರಕಟಣೆ – ೭೫ ಕಿರುಪುಸ್ತಕಗಳ ಪಟ್ಟಿ | ೬೧ |


---

# ಸ್ವಾತಂತ್ರ್ಯದ ಸುವರ್ಣ ಮಹೋತ್ಸವ– ಸ್ವಾತಂತ್ರ್ಯ ಚಳುವಳಿಯಲ್ಲಿ ಪೊನ್ನಂಪೇಟೆ (ಕ್ಗಟ್ಟ್‌ನಾಡ್)

## ಹುತ್ತರಿಹಾಡು

ಎಲ್ಲಿ ಭೂರಮೆ ದೇವ ಸನ್ನಿಧಿ ಬಯಸಿ ಬಿಮ್ಮನೆ ಬಂದಳೋ?
ಎಲ್ಲಿ ಮೋಹನಗಿರಿಯ ಬೆರಗಿನ ರೂಪಿನಿಂದಲಿ ನಿಂದಳೋ?
ಎಲ್ಲಿ ಮುಗಿಲಲಿ ಮಿಂಚಿನೋಲ್ ಕಾವೇರಿ ಹೊಳೆ ಹೊಳೆ ಹೊಳೆವಳೋ
ಎಲ್ಲಿ ನೆಲವನು ತಣಿಸಿ ಜನಮನ ಹೊಲದ ಕಳೆ ಕಳೆ ಕಳೆವಳೋ

ಅಲ್ಲೇ ಆ ಕಡೆ ನೋಡಲಾ
ಅಲ್ಲೇ ಕೊಡಗರ ನಾಡಲಾ
ಅಲ್ಲೇ ಕೊಡವರ ಬೀಡಲಾ

ಸವಿದು ಮೆದ್ದರೊ ಯಾರು ಪೂರ್ವದಿ ಹುಲಿಯ ಹಾಲಿನ ಮೇವನು
ಕವಣೆ ತಿರಿಕಲ್ಲಾಟ ಹಗ್ಗಕೆ ಸೆಳೆದರೋ ಹೆಬ್ಬಾವನು
ಸವರಿ ಆನೆಯ ಸೊಂಡಲಿನ ರಣ ಕೊಂಬನಾರ್ ಭೋರ್ಗರೆದರೋ
ಸವೆದು ಸವೆಯದ ಸಾಹಸತ್ವದ ಕ್ಷಾತ್ರ ಬೇಟೆಯ ಮೆರೆದರೋ

ಅವರು ಸೋಲ್ ಸಾವರಿಯರು
ಅವರು ಕಡುಗಲಿ ಗರಿಯರು
ಅವರೆ ಕೊಡಗಿನ ಹಿರಿಯರು

ತಮ್ಮ ನಾಡಿನ ಕೊರಳ್ ದಾಸ್ಯದ ನೊಗದ ಭಾರಕೆ ಬಗ್ಗದೋಲ್
ಹೆಮ್ಮೆ ಹಗೆಗಳ ಹೊಡೆದು ಹಿರಿಯರು ಹಸಿದು ಹಾರುವ ಬಗ್ಗದೋಲ್

ಬೊಮ್ಮಗಿರಿಯಂ ಪುಷ್ಪಗಿರಿ ಪರ್ಯಂತ ಬೆಳದೀ ದೇಶವು
ಧರ್ಮದಾನವ ಕಟ್ಟುಕಟ್ಟಳೆ ರೀತಿ ನೀತಿಯ ಕೋಶವು

ನಮ್ಮ ಕೊಡಗಿದು ಜಮ್ಮದು
ನಮ್ಮ ಕೊಡಗಿದು ನಮ್ಮದು
ನಮ್ಮೊಡೆಲ್ ಬಿಡಲಮ್ಮದು

ಇದು ಅಗಸ್ತ್ಯನ ತಪದ ಮಣೆ, ಕಾವೇರಿತಾಯ ತವರ್ಮನೆ,
ಕವನ ಸಿರಿಗುಯ್ಯಾಲೆ ತೂಗಿದನಲ್ಲಿ ಚಂದಿರ ಮರ್ಮನೆ!
ಇದಕೊ! ಚೆಂಗಾಳ್ವರಸರಾಡಂಬರವು ಕುಣಿದ ಶ್ರೀರಂಗವು
ಇದೋ! ಇದೋ ಇಲ್ಲುರುಳ್ದ ಹಾಲೇರಿಯರ ಬಲಗಿರಿ ಶೃಂಗವು!

ವಿಧಿಯ ಮಾಟದ ಕೊಡಗಿದು
ಮೊದಲೆ ನಮ್ಮದು: ಕಡೆಗಿದು
ಕದಲದೆಮ್ಮನು: ಬೆಡಗಿದು

ಒಮ್ಮತವು ಒಗ್ಗಟ್ಟು ಒಂದೇ ಮನವು ಎಲ್ಲಿದೆ ಹೇಳಿರಿ?
ಸುಮ್ಮನಿತ್ತರೊ ದಟ್ಟಿಕುಪ್ಪಸ? ಪಾಟ್ ಪುತ್ತರಿಗೇಳಿರಿ!
ಚಿಮ್ಮಿಪಾತುರೆ ಕೋಲ ಹೊಯ್ಲಿಗೆ ಕುಣಿವ ಪದ ಹೊರ ಹೊಮ್ಮಲಿ!
ಅಮ್ಮೆ ಹರಸಿದ ಸೀಮೆ ನಮಗಿದು ಇರಲಿ ನಮ್ಮದೆ ನಮ್ಮಲಿ

ನೆಮ್ಮದಿಯನಿದು ತಾಳಲಿ
ಅಮ್ಮೆಯಾ ಬಲ ತೋಳಲಿ
ನಮ್ಮ ಕೊಡಗಿದು, ಬಾಳಲಿ

– ಪಂಜೆ ಮಂಗೇಶರಾಯರು

## ಪೀಠಿಕೆ

ಕರ್ನಾಟಕ ರಾಜ್ಯದ ಸಣ್ಣ ಜಿಲ್ಲೆ ಕೊಡಗು. ಕನ್ನಡ ಮತ್ತು ತಮಿಳಿನ ಪೂರ್ವ ಕವಲು ಸೆಂದಮಿಳಿನ ಜೊತೆಜೊತೆಗೆ ಟಿಸಿಲೊಡೆದು ಬೆಳೆದುಬಂದ ಭಾಷೆ. ಕೊಡವ ಭಾಷೆಗೆ ಸುಮಾರು ೨೫೦೦ ವರ್ಷಕ್ಕಿಂತ ಹಿಂದಿನ ಇತಿಹಾಸವಿದೆ. ಲಿಪಿಯ ಪ್ರಯತ್ನಗಳು ನಡೆದರೂ ಅದು ವಾಡಿಕೆಯಲ್ಲಿ ಇಲ್ಲ. ಕೊಡಗಿನ ಅಸ್ತಿತ್ವವನ್ನು ನೋಡಿದಾಗ ಸುಮಾರು ೨ನೇ ಶತಮಾನಕ್ಕೂ ಹಿಂದಿನ ಇತಿಹಾಸವಿರುವ ತಮಿಳು ಕವಿ ತಿರುವಳ್ಳುವರ್ ವಿರಚಿತ 'ಶಿಲಪ್ಪದಿಗಾರಂ' ಕೃತಿಯಲ್ಲಿ 'ಕುಡುಮಲೈ' ಎಂಬ ಉಲ್ಲೇಖ ಕೊಡಗಿಗೆ ಸಂಬಂಧಪಟ್ಟಿದ್ದಾಗಿದೆ. ದಟ್ಟ ಅರಣ್ಯಗಳಲ್ಲಿ ವಾಸಿಸುತ್ತಿದ್ದ ಕಾಡಿನ ನಿವಾಸಿಗಳು ಕ್ಷಾತ್ರಧರ್ಮದ ಪರಿಪಾಲಕರು. ಹಾಗಾಗಿಯೇ ತಮಿಳು ಪ್ರಾಚೀನ ನಾಣ್ಣುಡಿಯೊಂದು ಕೊಡವರ ಆಹಾರದ ಬಗ್ಗೆ ಹೀಗೆ ಹೇಳುತ್ತದೆ. "ಕೊರವನ್ ತಿಂಬವನ್ ಕೊಡವನ್" (ಗುಡ್ಡಗಾಡಿನಲ್ಲಿ ವಾಸಿಸುವ ಜನರು ಕಾಡುಪ್ರಾಣಿ ಸೇವಿಸುವವರು ಎಂದರ್ಥ). ಪುರಾಣ ಪ್ರಸಿದ್ಧವಾದ ಮತ್ತು ಸಪ್ತನದಿಗಳಲ್ಲಿ ಒಂದಾದ ಕಾವೇರಿ ನದಿಯನ್ನು ಕುಲದೇವತೆಯಾಗಿ ಪೂಜಿಪ ಕೊಡವರ ಮೂಲಸ್ಥಳವೇ ಕೊಡಗು. ಪ್ರತೀ ನಾಗರಿಕತೆ ನದಿಬಯಲಿನಲ್ಲಿ ಬೆಳೆದುಬಂದಿದೆ ಎಂಬುದಕ್ಕೆ ನಮ್ಮಲ್ಲಿ ಸಾಕಷ್ಟು ಪುರಾವೆಗಳು ಸಿಗುತ್ತವೆ. ಕೊಡಗಿನಲ್ಲಿ ದೊರೆತ ಶಿಲಾಯುಗದ ಕೊಡಲಿ, ಬೆಣಚುಕಲ್ಲು ಕೊಡವರ ಮೂಲವನ್ನು ಶಿಲಾಯುಗದ ಕಾಲಕ್ಕೆ ಕೊಂಡೊಯ್ಯುತ್ತದೆ. ಎಷ್ಟೋ ರಾಜವಂಶಜರ ಆಳ್ವಿಕೆ, ದಾಳಿಯಿಂದಲೂ ಲಿಪಿ ಇಲ್ಲದೇ ಬೆಳೆದು ಬಂದಿರುವ ಕೊಡವ ಭಾಷೆಯ ಮೂಲ ಸ್ವರೂಪ ಬದಲಾಗದೇ ಉಳಿದು, ಇನ್ನೂ ಜೀವಂತವಾಗಿ ಉಳಿದಿದೆ ಎಂದರೆ ಅದೊಂದು ಹೆಮ್ಮೆಯೇ ಸರಿ.

ಕೊಡವ ಬುಡಕಟ್ಟು ಜನಾಂಗದ ಹುಟ್ಟಿನ ಬಗ್ಗೆ ಅನೇಕ ರೀತಿಯ ಕಲ್ಪಿತ ಊಹಾಪೋಹಗಳು ಸೃಷ್ಟಿಯಾಗಿವೆ. ಬಹಳಷ್ಟು ಲೇಖಕರು ಇತಿಹಾಸವನ್ನು ತಿರುಚಿ ತಮ್ಮ ಪುಸ್ತಕದಲ್ಲಿ ಬರೆದಿದ್ದಾರೆ. ಕುಡುಮಲೆನಾಡು, ಕಾವೇರಿ ನಾಡು, ಕ್ರೋಢದೇಶ ಎಂದು ಕರೆಯಲ್ಪಡುವ ಕೊಡಗಿನಲ್ಲಿ ನಾಗರಿಕತೆಯ ಕುರುಹುಗಳನ್ನು ಯಾವುದೋ ದಂತಕಥೆ, ಪುರಾಣಕಥೆ, ಅಜ್ಜಿಕಥೆಗಳಿಗೆ ಸೀಮಿತಗೊಳಿಸಲಾಗಿದೆ. ಅನಾದಿಕಾಲದಿಂದಲೂ ಪ್ರತ್ಯೇಕ ಪಾಳೇಗಾರಿಕೆ, ಸಾಮ್ರಾಜ್ಯವಾಗಿ ತನ್ನ ವೀರತ್ವವನ್ನು ಮೆರೆದ ಕೊಡಗು ಮೈಸೂರು ಸಂಸ್ಥಾನದ ಜೊತೆಗೆ ವಿಲೀನಗೊಳ್ಳುವ ಮೊದಲು ಪ್ರತ್ಯೇಕ 'ಸಿ' ರಾಜ್ಯವಾಗಿತ್ತು.

ಕವಿ ಪಂಜೆ ಮಂಗೇಶರಾಯರ ಹುತ್ತರಿಹಾಡಿನಂತೆ ಕ್ಷಾತ್ರ ರಕ್ತದ ಜಾಡು ಹಿಡಿದು ನಡೆದಾಗ, ನಾಡಿನ ರಕ್ಷಣೆಗೆ ತಮ್ಮ ಪ್ರಾಣವನ್ನು ತ್ಯಾಗ ಮಾಡಿದ ಅದೆಷ್ಟೋ ವೀರರ–ಶೂರರ ಸಾಹಸಗಾಥೆಯ ಪುಟ ತೆರೆದುಕೊಳ್ಳುತ್ತದೆ. ಕೊಡಗಿನ ವೀರತ್ವದ ಸಂಗತಿಗಳು ಕವಿ ನಾಗವರ್ಮ, ಪಿರಿಯಾಪಟ್ಟಣ ಶಾಸನ, ಕೊಡಗಿನ ಹಿರಿಯ ಸಾಹಿತಿಗಳ ಪುಸ್ತಕದಿಂದ, ಬ್ರಿಟಿಷ್ ಅಧಿಕಾರಿಗಳು ಬರೆದ ಗೆಜೆಟಿಯರ್‌ನಿಂದ ನಮಗೆ ವಿದಿತವಾಗಿವೆ. ಕೆಲವು ಪ್ರಮುಖ ದಾಖಲೆಗಳು ಕೊಡವರ ಮನೆತನಗಳ ಐನ್‌ಮನೆಗಳಲ್ಲಿ ಫೋಟೋ ಫ್ರೇಮ್‌ಗಳಾಗಿ ಗೋಡೆಯನ್ನು ಅಲಂಕರಿಸಿದ್ದು ಇಂದಿಗೂ ಕಾಣಸಿಗುತ್ತವೆ. ಚಂಗಾಳ್ವರು, ಕೊಂಗಾಳ್ವರು, ಹೊಯ್ಸಳರು, ಗಂಗರು, ಕದಂಬರು ಇನ್ನೂ ಅನೇಕ ರಾಜವಂಶಜರು ಮತ್ತು ಬ್ರಿಟಿಷರು ಕೊಡಗಿನ ಮಣ್ಣಿನಲ್ಲಿ ಆಳ್ವಿಕೆ ನಡೆಸಿದ್ದಾರೆ. ಇವರೆಲ್ಲಾ ಕೊಡಗಿನ ವೀರತ್ವದ ಮುಂದೆ ಶರಣಾದವರೇ. ಏಕೆಂದರೆ ಸಾಮ್ರಾಜ್ಯ ವಿಸ್ತರಿಸಿಕೊಂಡು ಬಂದ ರಾಜವಂಶಜರು ಇಲ್ಲಿ ನೇರವಾಗಿ ಆಳ್ವಿಕೆ ನಡೆಸದೇ ಪಾಳೇಗಾರರಿಗೆ ಆಳ್ವಿಕೆಯ ನಿರ್ವಹಣೆ ನೀಡಿದಂತೆ ಕಾಣುತ್ತದೆ.

ಇಂಥಾ ಈ ನಾಡಿನ ಸ್ವಾತಂತ್ರ್ಯ ಚಳವಳಿ ಕಡಿದಾದ ಬೆಟ್ಟಪ್ರದೇಶದಲ್ಲಿ ಮಳೆ ಗಾಳಿಗೂ ಅಂಜದೆ ನಡೆದ ಮಹಾನ್ ಸತ್ಯಾಗ್ರಹ ಎಲ್ಲವೂ ಕೇಳಿದಾಗ ಮೈನವಿರೇಳುತ್ತದೆ. ಬಲಿದಾನವನ್ನು ನೆನೆದಾಗ ಕಣ್ಣಂಚಲ್ಲಿ ಕಂಬನಿ ಮಿಡಿಯುತ್ತದೆ. ಉಪವಾಸ–ಜೈಲುವಾಸ, ಕಷ್ಟಕಾರ್ಪಣ್ಯಗಳ ನಡುವೆ ಶಸ್ತ್ರಸಜ್ಜಿತ ಬ್ರಿಟಿಷರ ವಿರುದ್ಧ ಮೊಳಗಿದ 'ವಂದೇ ಮಾತರಂ' ಘೋಷಣೆಗಳು ಪ್ರತಿಯೊಬ್ಬನ ಹೃದಯವನ್ನು ಬಡಿದು ನಿಲ್ಲಿಸದಿರದು. ಕೊಡವರು, ಟಿಪ್ಪುವಿನ ೩೫ ಬಾರಿಯ ದಾಳಿಯನ್ನು ಬಹಳ ಚಾಕಚಕ್ಯತೆಯಿಂದ ಹಿಮ್ಮೆಟ್ಟಿಸಿದವರು. ಬ್ರಿಟಿಷರನ್ನು ಕೊಡಗಿನೊಳಕ್ಕೆ ಬರದಂತೆ ತಡೆದವರು. ಇಲ್ಲಿಯ ಸ್ವಾತಂತ್ರ್ಯ ಚಳುವಳಿ ಎಲ್ಲವೂ ಐತಿಹಾಸಿಕ ದಾಖಲೆಗಳು. ಅಖಂಡ ಕೊಡಗಿನ ಚಿತ್ರಣಕ್ಕೆ ಸಾಕ್ಷಿಯಾದ ಚಳುವಳಿ ಬಹುಭಾಗ ದಕ್ಷಿಣ ಕೊಡಗಿನ ಕಗ್ಗಟ್ಟ್‌ನಾಡಿನಿಂದ ಆರಂಭವಾಗಿದೆ. ಹೋರಾಟದ ಕಿಚ್ಚು ಹೊತ್ತಿಸಿದ ಮುಖಂಡರು ದಕ್ಷಿಣ ಕೊಡಗಿನವರು. ಅಖಂಡ ಕೊಡಗಿನ ಸ್ವಾತಂತ್ರ್ಯ ಚಳುವಳಿಗೆ ರೂಪ ಕೊಟ್ಟಿದ್ದೇ ಈ ಕಗ್ಗಟ್ಟ್‌ನಾಡ್! ಈ ಕಗ್ಗಟ್ಟ್‌ನಾಡಿಗೆ ಸೇರಿದ ಒಂದು ಪುಟ್ಟ ನಾಡು ಪೊನ್ನಂಪೇಟೆ (ಅಂಜಿಗೇರಿ ನಾಡು), ಹುದಿಕೇರಿ, ಬಾಳೆಲೆ, ನಡಿಕೇರಿ, ತಾವಳಗೇರಿ ಮುಂತಾದವು. ಈ ಕಗ್ಗಟ್ಟ್‌ನಾಡಿನ ಸ್ವಾತಂತ್ರ್ಯ ಹೋರಾಟದ ಚಿತ್ರಣವನ್ನು ನಾನು ನಿಮ್ಮ ಮುಂದಿಡಲು ಬಯಸುತ್ತೇನೆ.

ಇತಿಹಾಸವನ್ನು ಸುಳ್ಳಾಡಲು ಸಾಧ್ಯವಿಲ್ಲ ಎಂಬ ಮಾತಿನಂತೆ ಸತ್ಯಾಸತ್ಯತೆಯ ದರ್ಶನದೊಂದಿಗೆ ಪೊನ್ನಂಪೇಟೆ ಮತ್ತು ಇತರ ಭಾಗದ ಸ್ವಾತಂತ್ರ್ಯ ಹೋರಾಟದ ಸ್ಫೂರ್ತಿ, ಅದಮ್ಯ ಚೇತನಗಳನ್ನು ಸ್ಮರಿಸುವುದು ಬಹು ಮುಖ್ಯ.

**ಕೊಡಗಿನ ಭೌಗೋಳಿಕ ಪಕ್ಷಿನೋಟ**

ಕೊಡಗು ಜಿಲ್ಲೆಯು ಪಶ್ಚಿಮಘಟ್ಟಗಳ ಮೇಲ್ಭಾಗದಿಂದ ಪೂರ್ವಕ್ಕೆ ಮೈಚಾಚಿರುವ ಸಹ್ಯಾದ್ರಿಯ ಬೆಟ್ಟಗಳನ್ನು ಮಾಲೆಯ ಹಾಗೆ ಪೋಣಿಸಿದಂತೆ ಕಾಣುವ ಸುಂದರ ಜಿಲ್ಲೆ. ಸಮಭಾಜಕ ವೃತ್ತದಿಂದ ಉತ್ತರಕ್ಕೆ ೧೧.೫೬ ಮತ್ತು ೧೨.೫೦ರ ಅಕ್ಷಾಂಶ ರೇಖೆಯ ಮಧ್ಯೆ, ಮಧ್ಯ ರೇಖೆಯಿಂದ ಪೂರ್ವಕ್ಕೆ ೭೫.೨೨ ಮತ್ತು ೭೬.೧೨ ಅಕ್ಷಾಂಶ ರೇಖೆಯ ನಡುವೆ ಇದೆ. ಹಾಗಾಗಿ ಕೊಡಗಿನ ವಾತಾವರಣ ನಿತ್ಯಹರಿದ್ವರ್ಣ ಕಾಡುಗಳಂತೆ ಸದಾ ಹಸಿರಾಗಿಯೇ ಇದೆ. ಇಲ್ಲಿನ ಕಾಡುಗಳು ಜೀವವೈವಿಧ್ಯತೆಯ ಕೇಂದ್ರಬಿಂದು. ಕೊಡಗು ಜಿಲ್ಲೆಯ ವಿಸ್ತೀರ್ಣವು ೧೫೮೨ ಚದರ ಮೈಲುಗಳಿವೆ. ಕೊಡಗಿನ ಮೇರೆಯನ್ನು ಉತ್ತರ ಮತ್ತು ಪೂರ್ವಕ್ಕೆ ಹಾಸನ ಮತ್ತು ಮೈಸೂರು ಜಿಲ್ಲೆಗಳು, ದಕ್ಷಿಣ ಮತ್ತು ಪಶ್ಚಿಮಕ್ಕೆ ಕೇರಳ ರಾಜ್ಯ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳು ಸುತ್ತುವರಿದಿವೆ.

**ಎತ್ತರ:** ಕೊಡಗು ಸಮುದ್ರಮಟ್ಟದಿಂದ ೩೮೯ ಅಡಿ ಎತ್ತರವಿದೆ. ಸೋಮವಾರಪೇಟೆಗೆ ೩೫೦೦ ಅಡಿ ಎತ್ತರವಿದ್ದು, ಕುಶಾಲನಗರದ ಕಡೆಗೆ ಪೂರ್ವಕ್ಕೆ ಕಾವೇರಿ ನದಿಯು ಹರಿಯುವಾಗ ಇಳಿಜಾರಿನಲ್ಲಿ ಹರಿಯುತ್ತಾಳೆ.

**ತಾಲ್ಲೂಕುಗಳು:** ಒಟ್ಟು ಐದು ತಾಲ್ಲೂಕುಗಳು. ಮಡಿಕೇರಿ, ವೀರಾಜಪೇಟೆ,

ಸೋಮವಾರಪೇಟೆ; ಇತ್ತೀಚೆಗೆ ಕುಶಾಲನಗರ ಮತ್ತು ಪೊನ್ನಂಪೇಟೆ ತಾಲ್ಲೂಕುಗಳು ಸೇರಿವೆ.

**ಭಾಷೆ:** ಆಡಳಿತ ಭಾಷೆಯಾಗಿ ಕನ್ನಡ. ಆಡುಭಾಷೆಯಾಗಿ ಕೊಡವ ಭಾಷೆ, ಅರೆಭಾಷೆ, ಮಲಯಾಳಂ, ತಮಿಳು, ತುಳು, ತೆಲುಗು, ಕೊಂಕಣಿ, ಬ್ಯಾರಿ ಭಾಷೆಗಳು ಅಸ್ತಿತ್ವದಲ್ಲಿದೆ.

## ನಾಡು ವಿಭಜನೆ

ಕೊಡಗಿನ ಭೂಪ್ರದೇಶದ ಆಧಿಪತ್ಯವನ್ನು ಸ್ವಾತಂತ್ರ್ಯಪೂರ್ವಕ್ಕೆ ಹೋಲಿಸಿದರೆ 'ಕೊಂಬು'ಗಳಾಗಿ ನಂತರ 'ನಾಡು'ಗಳಾಗಿ ವಿಂಗಡಿಸಲಾಗಿತ್ತು. ಇದರ ಉಸ್ತುವಾರಿಯನ್ನು ಆಯಾ ಪ್ರದೇಶದ ಮುಖ್ಯ ಕೊಡವ ಮನೆತನಗಳ 'ತಕ್ಕ'ರು ನಿರ್ವಹಿಸುತ್ತಿದ್ದರು. ೩೫ ನಾಡುಗಳಾಗಿ ಅಸ್ತಿತ್ವದಲ್ಲಿದ್ದ ಕೊಡಗು, 'ತಕ್ಕಾಮೆ' ಎಂಬ ಗ್ರಾಮ ಕಲ್ಪನೆಯ ನಿರ್ದೇಶನದಲ್ಲಿ ನಡೆಯುತ್ತಿತ್ತು. ಊರಿನ ತಕ್ಕಾಮೆಯನ್ನು ಕೊಡವ ಕುಟುಂಬದ ಮುಖ್ಯಸ್ಥನು ವಹಿಸಿದ್ದ. ಹಾಲೇರಿ ಅರಸರ ಕಾಲದಲ್ಲಿ ಬಹುಪಾಲು ನಾಡತಕ್ಕರು, ದೇಶತಕ್ಕರು, ಆಸ್ಥಾನತಕ್ಕರು ಕೊಡವರು ಇರುತ್ತಿದ್ದರು. ರಾಜರ ಆಡಳಿತ ಇದರಿಂದ ಸುಗಮವಾಗಿ ಇದ್ದಿದ್ದು ಕಂಡುಬರುತ್ತದೆ.

## ಬ್ರಿಟಿಷರ ಆಳ್ವಿಕೆಗೆ ಮುನ್ನ ಇದ್ದ ಕೊಡಗಿನ ನಕ್ಷೆ ಮತ್ತು ನಾಡು

**ಏಳುಸಾವಿರ ಸೀಮೆ:** ಕೊಡ್ಲಿ ಹೋಬ್ಳಿ, ಏಳುಸಾವಿರ ಸೀಮೆ, ನಿಡ್ತಾ ಹೋಬ್ಳಿ, ಬಿಲ್ಹಾಡ ಹೋಬ್ಳಿ, ರಾಮಸ್ವಾಮಿ ಕಣಿವೆ ಮತ್ತು ನಂಜರಾಜಪಟ್ಟಣ.

**ಯಡವನಾಡ್:** ಸೂರ್ಲಬಿ ಮುತ್ತ್‌ನಾಡ್, ಗಡಿನಾಡ್, ಹಾಲೇರಿನಾಡ್, ಉಳುಗುಳಿ ಮಡಿಕೇರಿ ಮತ್ತು ನಂಜರಾಜಪೇಟೆ ಹೋಬ್ಳಿ.


**ಕಿಗ್ಗಟ್ಟ್‌ನಾಡ್:** ಬೆಟ್ಯತ್ತ್‌ನಾಡ್, ಅಂಜಿಗೇರಿನಾಡ್, ತಾವಳಗೇರಿ–ಮೂರ್ನಾಡ್, ಹತ್ತ್‌ಗಟ್ಟ್‌ನಾಡ್.

**ಮಡಿಕೇರಿ:** ಹೊರಮಲೆನಾಡ್, ಹೊರೂರ್ ನೂರೊಕ್ಕಲ್‌ನಾಡ್, ಕುಯ್ಯಂಗೇರಿನಾಡ್, ಬೆಂಗ್‌ನಾಡ್, ಕಗ್ಗೊಡ್ಲುನಾಡ್, ಕಾಂತಮೂರ್ನಾಡ್, ಹುದಿಕೇರಿ–ಮಂದಪ್ಪನಾಡ್, ಪದಿನಾಲ್ಕ್‌ನಾಡ್, ತಾವುನಾಡ್, ಕಡ್ಯತ್‌ನಾಡ್.

**ಎಡೆನಾಲ್‌ನಾಡ್:** ಬೆಪ್ಪುನಾಡ್, ಎಡೆನಾಲ್‌ನಾಡ್, ಅಮ್ಮತ್ತಿನಾಡ್



## ಪೊನ್ನಂಪೇಟೆ (ಅಂಜಿಗೇರಿ ನಾಡು)




ಪೊನ್ನಂಪೇಟೆಯು ಕಗ್ಗಟ್ಟ್‌ನಾಡಿನ ಮೇರೆಯಲ್ಲಿದೆ. ಹಾಲೇರಿ ಅರಸರ ಆಸ್ಥಾನದಲ್ಲಿದ್ದ ದಿವಾನ್ ಪೊನ್ನಪ್ಪನವರ ಜ್ಞಾಪಕಾರ್ಥ ಅಂಜಿಗೇರಿನಾಡಿಗೆ

೧೮೨೧ರಲ್ಲಿ 'ಪೊನ್ನಂಪೇಟೆ' ಎಂಬ ನಾಮಕರಣ ಮಾಡಲಾಯಿತು. ಸ್ವಾತಂತ್ರ್ಯದ ನಂತರದ ದಿನಗಳಲ್ಲಿ ಪೊನ್ನಂಪೇಟೆ ಒಂದು ಹೋಬಳಿಯಾಗಿ ಬದಲಾಯಿತು. ಅಂದು ಪೊನ್ನಂಪೇಟೆ, ವೀರಾಜಪೇಟೆ, ಹುದಿಕೇರಿ ಪ್ರಧಾನ ಕಾರ್ಯಕ್ಷೇತ್ರವಾಗಿತ್ತು. ಪಾಳೇಗಾರರ ಆಳ್ವಿಕೆಯಂತೆ ನಡೆದುಕೊಂಡು ಬರುತ್ತಿದ್ದ ಕೊಡಗಿನ ಭೂಪ್ರದೇಶದ ಸುತ್ತಲೂ ಕಗ್ಗತ್ತಲೆಯ ಕಾಡುಗಳು, ಕಡಿದಾದ ರಹದಾರಿಗಳು ಇರುತ್ತಿದ್ದವು. ಅಂದು ರಾಜರ ಆಳ್ವಿಕೆಯಲ್ಲಿ ಕೊಡಗಿನ ಪಾಳೇಗಾರರು ನಿರ್ಮಿಸಿದ ಕಡಂಗವು ಊರಿನಿಂದ ಊರಿಗೆ ಸೀಮಾರೇಖೆಯಾಗಿತ್ತು. ದಾರಿಹೋಕರಿಗೆ ಅನುಕೂಲವಾಗಲು ಚಪ್ಪಟೆಯ ಕಲ್ಲುಗಳನ್ನು ಉದ್ದಕ್ಕೆ ನೆಟ್ಟು ದಿಕ್ಕು ಸೂಚಿಸುತ್ತಿದ್ದರು. ಇಂದಿಗೂ ಕೂಡ ಆ ಕಲ್ಲುಗಳು, ಕಡಂಗ್‌ಗಳು ಕೊಡಗಿನಾದ್ಯಂತ ಅಸ್ತಿತ್ವದಲ್ಲಿದೆ.

ರಾಜನ ಸೈನ್ಯದಲ್ಲಿ ಇದ್ದಿದ್ದು ಬಹುಪಾಲು ಕೊಡವ ಸಮುದಾಯದವರೇ. ದಿವಾನರು, ದೇಶತಕ್ಕರು ಕೆಲವರು ದಕ್ಷಿಣ ಕೊಡಗಿಗೆ ಸೇರಿದವರು. ಟಿಪ್ಪುವಿನ ಕಪಟ ನಾಟಕದಿಂದ ಹತ್ಯೆಗೊಳಗಾದವರು ಕೊಡವರು. ಮತಾಂತರಕ್ಕೆ ಒಳಗಾದ ಅದೆಷ್ಟೋ ಕೊಡವರು ಇಂದಿಗೂ ದಕ್ಷಿಣ ಕೊಡಗಿನಲ್ಲಿ ಇದ್ದಾರೆ. ಇದೆಲ್ಲಾ ಚರಿತ್ರೆಯ ಪುಟದಲ್ಲಿ ಕೊಡವರ ಮೇಲಾದ ದೌರ್ಜನ್ಯಕ್ಕೆ ಸಾಕ್ಷಿಯಾಗಿದೆ.

ಸ್ವಾಮಿನಿಷ್ಠೆಗೆ ಹೆಸರುವಾಸಿಯಾದ ಕೊಡವರ ಸಾಹಸಗಾಥೆಗೆ ಪೊನ್ನಂಪೇಟೆ ತನ್ನದೇ ಆದ ಛಾಪನ್ನು ಒತ್ತಿದೆ. ಚಳುವಳಿ, ದಂಗೆ, ಪಿಕೆಟಿಂಗ್, ಸತ್ಯಾಗ್ರಹ, ಬಲಿದಾನದಲ್ಲಿ ವಿಶೇಷವಾಗಿ ಪೊನ್ನಂಪೇಟೆ ಇತಿಹಾಸವನ್ನು ಸೃಷ್ಟಿಸಿದೆ. ಒಂದು ಹೆಮ್ಮೆಯ ಸಂಗತಿ ಎಂದರೆ ಸ್ವತಂತ್ರ ಭಾರತದ ಅಸ್ತಿತ್ವದಲ್ಲಿ ಪೊನ್ನಂಪೇಟೆ ತಾಲ್ಲೂಕು ರಚನೆಯಾಗಬೇಕು ಎಂಬ ದಶಕಗಳ ಹೋರಾಟಕ್ಕೆ ಇಂದು ಯಶಸ್ಸು ಸಿಕ್ಕಿದೆ. ಈ ಹೋರಾಟದ ಫಲವಾಗಿ ನವಂಬರ್ ೨೯, ೨೦೨೦ರಂದು ಕರ್ನಾಟಕ ರಾಜ್ಯ ಸರಕಾರ ಪೊನ್ನಂಪೇಟೆಯನ್ನು ತಾಲ್ಲೂಕಾಗಿ ಘೋಷಣೆಯನ್ನು ಮಾಡಿದೆ.

**ಕೊಡಗನ್ನು ಆಳಿದ ರಾಜವಂಶಜರು**

ಕೊಡಗಿನ ಚರಿತ್ರೆಯ ಪುಟಗಳನ್ನು ತಿರುವಿ ಹಾಕಿದಾಗ ಕನ್ನಡ, ತಮಿಳು ರಾಜವಂಶಗಳು ಈ ನೆಲವನ್ನು ಆಳಿದ ನಿದರ್ಶನಗಳಿವೆ. ಚೆಂಗಾಳ್ವರು, ಕೊಂಗಾಳ್ವರು, ಕದಂಬರು, ಗಂಗರು, ಹೊಯ್ಸಳರು, ಹಾಲೇರಿ ಹೀಗೆ ಇತರ



ರಾಜವಂಶಜರು ಕೊಡಗಿನಲ್ಲಿ ಆಳ್ವಿಕೆ ನಡೆಸಿದರು. ದುರ್ಗಮ ಹಾದಿ, ಕಡಿದಾದ ಬೆಟ್ಟಗುಡ್ಡಗಳಲ್ಲಿ ಪಾಳೇಗಾರರಂತೆ ಆಳ್ವಿಕೆಯನ್ನು ಮಾಡುತ್ತಿದ್ದ ಜನಾಂಗದಲ್ಲಿ ಕೊಡವ ಸಮುದಾಯದವರೇ ಇದ್ದರು. ಇದಕ್ಕೆ ಪೂರಕವಾಗಿ ಬಹಳಷ್ಟು ಮಾಹಿತಿಗಳು, ಉಲ್ಲೇಖಗಳು ನಮಗೆ ಸಿಗುತ್ತವೆ. ಸುಮಾರು ೨೫೦ ವರ್ಷಗಳಷ್ಟು ಕಾಲ ಆಳ್ವಿಕೆ ನಡೆಸಿದ ಹಾಲೇರಿ ಅರಸರು ಮೂಲತಃ ಇಕ್ಕೇರಿ ವಂಶಕ್ಕೆ ಸೇರಿದವರು. ಅವರ ಆಳ್ವಿಕೆಯ ಕಾಲದಲ್ಲಿಯೂ ಕೊಂಬುಗಳಾಗಿ ವಿಭಾಗಿಸಲಾದ ನಾಡಿಗೆ, ಕೊಡವರು ಮತ್ತು ಕೊಡವರು ಇಲ್ಲದ ಭಾಗದಲ್ಲಿ (ಟಿಪ್ಪುವಿನ ಕುತಂತ್ರದಿಂದ ನಾಶವಾದ ಕೊಡವರ ಸ್ಥಳದಲ್ಲಿ ಬೇರೆ ಜನಾಂಗದವರು ಇದ್ದರು) ಕೊಡವೇತರ ತಕ್ಕರು, ಗ್ರಾಮದ ಮೇಲ್ವಿಚಾರಣೆಯನ್ನು 'ತಕ್ಕರು' ನೋಡಿಕೊಳ್ಳುತ್ತಿದ್ದರು. ಇಲ್ಲಿ ಕೊಡವ ಭಾಷೆಯಲ್ಲಿ 'ತಕ್ಕ್' ಎಂದರೆ ಭಾಷೆ, ಮಾತು, ಆಣೆಯ ಮಾತಿಗೆ ಸಂಬಂಧಿಸಿದ್ದಾಗಿದೆ. ಕೊಡವ ಮನೆತನಗಳಲ್ಲಿ 'ತಕ್ಕ್'ಗೆ ಬಹಳ ಪ್ರಾಮುಖ್ಯತೆ ಇದೆ. ದೀಪದ ಎದುರು ಹಿಂದೆ ಆಣೆ, ಸುಳ್ಳು, ಸತ್ಯದ ಮಾತುಗಳು ನಡೆಯುತ್ತಿದ್ದವು. ಈ 'ತಕ್ಕ್'ಗೆ ಸೂರ್ಯ–ಚಂದ್ರರಷ್ಟೇ ಸತ್ಯದ ಪ್ರಾಮುಖ್ಯತೆ ಇಂದಿಗೂ ಇದೆ. ಹಾಗಾಗಿ ಅಂದು ನಾಡುತಕ್ಕರು, ದೇಶತಕ್ಕರು ಮತ್ತು ಆಸ್ಥಾನದ ತಕ್ಕರು ಎಂದು ರಾಜರ ಆಸ್ಥಾನದಲ್ಲಿ ಪ್ರತ್ಯೇಕ ಸ್ಥಾನ–ಮಾನಗಳು ಇರುತ್ತಿದ್ದವು.

ಈ ನಾಡನ್ನು ಆಳಿದ ಎಲ್ಲಾ ರಾಜವಂಶಗಳು ಸ್ಥಳೀಯರ ವೀರತ್ವವನ್ನು ಕೊಂಡಾಡಿದವರೆ! ಇಲ್ಲಿಯ ಸಂಸ್ಕೃತಿ ಸಂಪ್ರದಾಯಕ್ಕೆ ಮಾರುಹೋದವರೆ! ಚರಿತ್ರೆಯ ಉದ್ದಕ್ಕೂ ಸಿಗುವ ದಾಖಲೆಗಳು ಇದನ್ನು ಸಾರಿಸಾರಿ ಹೇಳುತ್ತವೆ. ಕೊಡಗನ್ನು ಆಳಿದ ಕಡೆಯ ರಾಜವಂಶ ಹಾಲೇರಿ ವಂಶಜರು. ಇವರು ತಮ್ಮ ಆಳ್ವಿಕೆಯನ್ನು ಸುಮಾರು ೧೬೦೦ರಲ್ಲಿ ಆರಂಭಿಸಿದರು. ಹಾಲೇರಿ ಅರಸರ ಕೊನೆಯ ರಾಜ ಚಿಕ್ಕವೀರರಾಜೇಂದ್ರನ ಆಳ್ವಿಕೆಯ ಸಮಯದಲ್ಲಿ ಕೊಡಗು ಬ್ರಿಟಿಷರ ಸುಪರ್ದಿಗೆ ಹೋಯಿತು. ಚಿಕ್ಕವೀರರಾಜನ ಆಳ್ವಿಕೆಯ ಕಾಲ ೧೮೨೦ ರಿಂದ ೧೮೩೪ರವರೆಗೆ. ಈತನ ಆಳ್ವಿಕೆಯ ಅರಾಜಕತೆಯಿಂದ ಬೇಸತ್ತ ಜನತೆಗೆ ನಾಡಿನ ಏಳಿಗೆ, ಅಭಿವೃದ್ಧಿಯ ಆಡಳಿತ ನಡೆಸುವುದಾಗಿ ಬ್ರಿಟಿಷ್ ಸರಕಾರ ಭರವಸೆಯನ್ನು ನೀಡಿತು. ಇದರ ಫಲವಾಗಿ ಬ್ರಿಟಿಷ್ ಕಂಪೆನಿಯ ಆಳ್ವಿಕೆಗೆ ೧೮೩೪ರಲ್ಲಿ ಕೊಡಗು ಒಳಪಟ್ಟಿತು.

### ಹಾಲೇರಿಯ ಅರಸರ ಕಾಲದಲ್ಲಿದ್ದ (ದಕ್ಷಿಣ ಕೊಡಗು) ದಿವಾನರು :

ಮುಖ್ಯ ದಿವಾನರು ಚೆಪ್ಪುಡಿರ ಪೊನ್ನಪ್ಪ–೧೮೪೭ರಲ್ಲಿ ಮರಣ

ದಿವಾನ್ ಮಂಡೆಪಂಡ ತಿಮ್ಮಯ್ಯ– ೧೮೪೭–೧೮೫೬

ದಿವಾನ್ ಬುಟ್ಟಿಯಂಡ ನಂಜಪ್ಪ– ೧೮೫೬–೧೮೬೨

ದಿವಾನ್ ಪಟ್ಟಮಾಡ ಅಪ್ಪಣ್ಣ– ೧೮೬೨–೧೮೬೭

ದಿವಾನ್ ಮಾತಂಡ ಅಪ್ಪಚ್ಚು– ೧೮೬೭–೧೮೭೬

ಬ್ರಿಟಿಷರ ಆಳ್ವಿಕೆಗೆ ಕೊಡಗು ಒಳಪಟ್ಟ ಮೇಲೆ ದಿವಾನ್ ಪದವಿಯನ್ನು ಕೈಬಿಟ್ಟರು. ಇದರ ಬದಲಾಗಿ ಕಮೀಷನರ್ ಪದವಿಯನ್ನು ಪರಿಚಯಿಸಿದರು. ೧೮೭೬ರಲ್ಲಿ ಕಮೀಷನರ್ ಪದವಿ ಜಾರಿಗೆ ಬಂತು. ಆದರೆ ಬ್ರಿಟಿಷ್ ಸರಕಾರ ಅದುವರೆಗೂ ಕೊಡಗಿನ ತಕ್ಕರಾಗಿದ್ದವರಿಗೆ ಸುಬೇದಾರ್ ಪದವಿಯನ್ನು ನೀಡಿತು. ಇದರ ಫಲವಾಗಿ ಕೊಡಗಿನ ಮೊದಲ ಸುಬೇದಾರರಾಗಿ ಕೋಟೋಳಿರ ಚಂಗಪ್ಪ ಅಧಿಕಾರ ವಹಿಸಿದರು. ಇವರು ಇಂಗ್ಲೆಂಡಿಗೆ ಹೋಗಿ ವಿದ್ಯಾಭ್ಯಾಸ ಮುಗಿಸಿದ ಕೊಡಗಿನ ಮೊಟ್ಟಮೊದಲ ಪದವೀಧರ. ಇವರು ೧೯೦೯ರಲ್ಲಿ ಸುಬೇದಾರರಾದರು. ೧೯೪೮ರಲ್ಲಿ ಕೊಡಗಿನ ಮೊದಲ ಚೀಫ್ ಕಮಿಷನರ್ ಆದರು.

### ಕೊಡಗಿನ ಮೇಲಾದ ದಾಳಿ ಮತ್ತು ಯುದ್ಧ

ಕೊಡವ ನಾಡಿಗೆ ಕೊಡವ ಪಾಳೇಗಾರರ ಹೊರತಾಗಿ ಮಿಕ್ಕ ಎಲ್ಲಾ ರಾಜವಂಶಜರು ಪರಕೀಯರೇ. ಇಲ್ಲಿ ಇದನ್ನು ಉಲ್ಲೇಖಿಸಲೇಬೇಕು. ಈ ನಾಡು ೩೫ ಕೊಂಬುಗಳಾಗಿ ಪಾಳೇಗಾರಿಕೆ ಮಾಡುತ್ತಿದ್ದಾಗ, ಹಾಲೇರಿ ಅರಸರ ಆಳ್ವಿಕೆಯ ಕಾಲದಲ್ಲಿ ಪಾಳೆಗಾರರು ತಮ್ಮ ಗ್ರಾಮದ ಆಗುಹೋಗುಗಳನ್ನು ನೋಡಿಕೊಳ್ಳುತ್ತಿದ್ದರು. ಉಳಿದ ಎಲ್ಲಾ ಮೇಲ್ವಿಚಾರಣೆಯನ್ನು ಆಡಳಿತ ಬಾಚೆಕಾರರು, ನಾಡತಕ್ಕರು ನೋಡಿಕೊಳ್ಳುತ್ತಿದ್ದರು. ಟಿಪ್ಪು ೩೫ ಬಾರಿ ಕೊಡಗಿನ ಮೇಲೆ ದಂಡೆತ್ತಿ ಬಂದರೂ ಕೊಡವರ ವೀರ ಪರಾಕ್ರಮದ ಎದುರು ಸೋತು ಸುಣ್ಣವಾದ. ಹೀಗಾಗಿ ಮೋಸದಿಂದ ಕೊಡವರನ್ನು ಸೋಲಿಸಬೇಕೆಂದು 'ದೇವಾಟ್ ಪರಂಬು' ಎಂಬಲ್ಲಿ ನಿರಾಯುಧ ಕೊಡವರನ್ನು ಔತಣಕ್ಕೆ ಕರೆದು ಸಾಮೂಹಿಕ ಮಾರಣಹೋಮವನ್ನು ಮಾಡಿದ. ೧೭೮೫ರ 'ದೇವಾಟ್‌ಪರಂಬು ಹತ್ಯಾಕಾಂಡ' ಎಂದೇ ಇತಿಹಾಸದಲ್ಲಿ ದಾಖಲಾಗಿವೆ. ಇಂದಿಗೂ ಕೊಡಗಿನ ಸಂಪ್ರದಾಯದಂತೆ ಕೊಡವರು ಪ್ರತಿ ವರ್ಷ ಡಿಸೆಂಬರ್ ತಿಂಗಳಿನಲ್ಲಿ ದೇವಾಟ್‌ಪರಂಬುವಿಗೆ ತೆರಳಿ ಮೀದಿ (ಎಡೆ ಇಡುವ ಸಂಪ್ರದಾಯ) ಇಟ್ಟು ಅಂದು ಹುತಾತ್ಮರಾದ ಆತ್ಮಗಳಿಗೆ ಶಾಂತಿಯನ್ನು ಕೋರಲಾಗುತ್ತದೆ. ಈ ಹತ್ಯಾಕಾಂಡವು ಪ್ರಪಂಚದಲ್ಲಿ ಅತೀ ಘೋರವಾದ ಮಾನವ ಹತ್ಯಾಕಾಂಡವಾಗಿದೆ. ಸುಮಾರು ೮೦,೦೦೦ ಅಧಿಕ ಕೊಡವರು ಇದರಲ್ಲಿ ಹತ್ಯೆಯಾದರು ಎಂಬ ಉಲ್ಲೇಖ ಅಂದಿನ 'ಗೆಜೆಟಿಯರ್'ನಲ್ಲಿ ಮತ್ತು 'ರಾಜೇಂದ್ರ ನಾಮೆ'ಯಲ್ಲಿ ಉಲ್ಲೇಖವಾಗಿದೆ. ಕೊಡಗಿನ ಅಸ್ತಿತ್ವಕ್ಕೆ ಸಂಬಂಧಿಸಿದಂತೆ ಪಾಲ್ಪಾರೆ ಯುದ್ಧ, ಪಿರಿಯಾಪಟ್ಟಣ ಯುದ್ಧ ಹೆಚ್ಚು ಪ್ರಾಮುಖ್ಯತೆಯನ್ನು ಪಡೆದಿವೆ.

### ಬ್ರಿಟಿಷರ ಆಳ್ವಿಕೆಗೆ ಮುನ್ನ ಇದ್ದ ಕೊಡಗಿನ ಪರಿಸ್ಥಿತಿ

ಹಾಲೇರಿ ಅರಸರ ಆಳ್ವಿಕೆಯು ಅರಾಜಕತೆಯಿಂದ ತುಂಬಿತ್ತು. ರಾಜನ ಸ್ತ್ರೀ ಲಂಪಟತನ, ನ್ಯಾಯಪರದ ಆಳ್ವಿಕೆ ಇಲ್ಲದಿರುವಿಕೆ, ಚಾಡಿಕೋರರಿಗೆ ಮಣೆ ಹಾಸಿದ್ದು ಕಂಡು ಬೇಸತ್ತ ಕೊಡವ ದಿವಾನರು ತಮ್ಮ ನಾಡಿನ ರಕ್ಷಣೆಗೆ ಮುಂದಾದರು. ಹಾಲೇರಿ ಅರಸರ ತುಳಿತಕ್ಕೆ ಮತ್ತು ಕ್ರೌರ್ಯಕ್ಕೆ ಒಳಗಾದ ಕೊಡವ ಮುಖಂಡರು ಈ ರಾಜವಂಶದ ಆಳ್ವಿಕೆ ಮುಂದುವರೆಸಲು ವಿರೋಧಿಸಿದರು. ಇವರ ಈ ನಿಲುವನ್ನು ಚರಿತ್ರೆಯಲ್ಲಿ ನಾಡಿನ ವಿರೋಧಿ ಚಟುವಟಿಕೆ ಎಂದು ವಿಕಲ್ಪವನ್ನು ಸೃಷ್ಟಿಸಲಾಗಿದೆ. ಚಾಡಿ ಮಾತು ಕೇಳುತ್ತಿದ್ದ ರಾಜ ದಿನಬೆಳಗಾದರೆ ತಲೆಕಡಿದು ಹಾಕಿ ಜೀವವನ್ನೇ ತೆಗೆಯುತ್ತಿದ್ದ. ಇದರ ಬಗ್ಗೆ ಬ್ರಿಟಿಷ್ ಸರಕಾರ ೧೮೩೪ರಲ್ಲಿ ಕೊಡಗನ್ನು ತಮ್ಮ ಸುಪರ್ದಿಗೆ ತೆಗೆದುಕೊಂಡ ಮೇಲೆ ಹೊರಡಿಸಿದ ಮೊದಲ ಇಸ್ತಿಹಾರ್‌ನಲ್ಲಿ ದಾಖಲಿಸಿದ್ದಾರೆ.

ಹಾಲೇರಿ ಅರಸರ ಕಾಲದಲ್ಲಿ ರಸ್ತೆಗಳು, ಪ್ರಜೆಗಳ ಸೌಕರ್ಯಕ್ಕೆ ಯಾವುದೇ ರೀತಿಯ ಯೋಜನೆಗಳು ರೂಪುಗೊಂಡಿರಲಿಲ್ಲ. ಕೆಲವು ಮಠಗಳನ್ನು ಸ್ಥಾಪಿಸಲಾಯಿತು ಮತ್ತು ಕೆಲವು ದೇವಸ್ಥಾನಗಳಿಗೆ, ಶಕ್ತಿಪೀಠಗಳಿಗೆ ವಾರ್ಷಿಕ ಕಪ್ಪ ಹೋಗುತ್ತಿತ್ತು. ಆದರೆ ಪ್ರಜೆಗಳಿಂದ ತೆರಿಗೆಯನ್ನು ಸಂಗ್ರಹಿಸಲಾಗುತ್ತಿತ್ತು. ಬಹಳಷ್ಟು ಕಾರಣಗಳಿಂದ ಕೊಡಗು ಅಭಿವೃದ್ಧಿಯ ಮುಖವನ್ನು ಕಾಣದೇ ಹಾಗೇ ಉಳಿದಿತ್ತು. ಈ ಅರಾಜಕತೆಗೆ ಕೊನೆ ಎಂಬಂತೆ ಬ್ರಿಟಿಷ್ ಸರಕಾರ

ಮೈಸೂರು ಮತ್ತು ಕೊಡಗನ್ನು ತಮ್ಮ ವಶಕ್ಕೆ ತೆಗೆದುಕೊಳ್ಳಲು ಬಂದಾಗ, ರಾಜನನ್ನು ಬ್ರಿಟಿಷ್ ಸರಕಾರ ತನ್ನ ಸುಪರ್ದಿಗೆ ತೆಗೆದುಕೊಳ್ಳಲು ಮುಂದಾಯಿತು. ಬ್ರಿಟಿಷ್ ಸರಕಾರಕ್ಕೆ ಮಣಿಯದೆ ಕೊಡವ ದಿವಾನರು ರಾಜರ ಪರವಾಗಿ ಹೋರಾಟಕ್ಕೆ ಮುಂದಾದರು. ದಿವಾನರು ಹೋರಾಡುವಾಗ ತಲೆಮರೆಸಿಕೊಂಡು ನಾಲ್ಕುನಾಡು ಅರಮನೆಯಲ್ಲಿ ರಾಜ ತಂಗಿದ್ದ. ಈ ಸಂದರ್ಭ ಬ್ರಿಟಿಷರ ಮುಂದೆ ರಾಜ ಕಪ್ಪವನ್ನು ನೀಡಿ ಶರಣಾದ. ಅಲ್ಲಿಗೆ ಕೊಡಗಿನಲ್ಲಿ ಹಾಲೇರಿ ಅರಸರ ಆಳ್ವಿಕೆ ಅಂತ್ಯವಾಯಿತು. ಕೊಡಗನ್ನು ತಮ್ಮ ಸುಪರ್ದಿಗೆ ತೆಗೆದುಕೊಳ್ಳುವ ಮುನ್ನ ಹಲವಾರು ಭರವಸೆಯ ಮಾತುಗಳನ್ನು ಸ್ಥಳೀಯರಿಗೆ ಬ್ರಿಟಿಷ್ ಸರಕಾರ ನೀಡಿತು. ಕೊಡಗಿನ ರಾಜನನ್ನು ಗಡಿಪಾರು ಮಾಡಿದ ನಂತರ ಒಂದು ನಿರಂಕುಶ ಆಡಳಿತ ಹಾದಿಯನ್ನು ಕೊಡಗಿನವರು ಎದುರು ನೋಡುತ್ತಿದ್ದರು. ಈ ಕಾರಣದಿಂದಾಗಿ ಬ್ರಿಟಿಷರ ಆಳ್ವಿಕೆಯ ಆರಂಭದ ಕಾಲದಲ್ಲಿ ಯಾವುದೇ ರೀತಿಯ ತಕರಾರನ್ನು ಇಬ್ಬಗೆಯವರೂ ಮಾಡಿರಲಿಲ್ಲ.

## ಬ್ರಿಟಿಷರ ವಿರುದ್ಧ ಹೋರಾಟ

೧೮೩೪ರಲ್ಲಿ ಹಾಲೇರಿ ಅರಸರ ಅರಾಜಕತೆಯ ಆಳ್ವಿಕೆಯ ಫಲವಾಗಿ ಕೊಡಗು ಬ್ರಿಟಿಷರ ಕೈವಶವಾಯಿತು. ಕೊಡಗನ್ನು ವಶಪಡಿಸಿಕೊಳ್ಳಲು, ಕೊಡಗಿನ ರಹದಾರಿಯಲ್ಲಿ ಸಾಗಿ ಮಡಿಕೇರಿ ಮುಟ್ಟುವುದು ಕಷ್ಟ ಎಂದು ಅರಿತ ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪೆನಿ, ೭೦೦೦ ಬ್ರಿಟಿಷ್ ಸೈನ್ಯದೊಂದಿಗೆ ರಾಜ ಚಿಕ್ಕವೀರರಾಜೇಂದ್ರನನ್ನು ಮತ್ತು ಕೊಡಗನ್ನು ತಮ್ಮ ಸುಪರ್ದಿಗೆ ತೆಗೆದುಕೊಳ್ಳಲು ಬ್ರಿಗೇಡಿಯರ್ ಜನರಲ್ ಲಿಂಡ್ಸೆ ನೇತೃತ್ವದಲ್ಲಿ ಕಾರ್ಯಯೋಜನೆಯನ್ನು ರೂಪಿಸಿತು. ನಾಲ್ಕು ಅಧಿಕಾರಿಗಳ ಪಡೆಯೊಂದಿಗೆ ಕೊಡಗಿನ ಮುಖ್ಯ ಕೇಂದ್ರ ಮಡಿಕೇರಿಯನ್ನು ಕೈವಶಕ್ಕೆ ತೆಗೆದುಕೊಳ್ಳಲು ವಿವಿಧ ದಿಕ್ಕುಗಳಿಂದ ಮೈಸೂರಿನಿಂದ ಮುನ್ನುಗ್ಗುವ ಯೋಜನೆಯನ್ನು ರೂಪಿಸಿತ್ತು. ದುರ್ಗಮ ಹಾದಿಯಲ್ಲಿ ಸಾಗಿ ವೀರರಾಜನನ್ನು ವಶಕ್ಕೆ ತೆಗೆದುಕೊಳ್ಳುವುದು ಕಷ್ಟಸಾಧ್ಯವಾಗಿತ್ತು. ಬ್ರಿಟಿಷರಿಗೆ ಹೆದರಿ ನಾಲ್ಕುನಾಡು ಅರಮನೆಯಲ್ಲಿ ರಾಜ ಚಿಕ್ಕವೀರರಾಜ ರಕ್ಷಿಸಿಕೊಳ್ಳಲು ಅವಿತುಕೊಂಡಿದ್ದ. ತನ್ನ ಮುಂದಿರುವ ಕೊಡವ ವೀರ ದಿವಾನರು ತನ್ನ ರಕ್ಷಣೆ ಮಾಡುತ್ತಾರೆ ಎಂಬ ನಂಬಿಕೆ ಅವನಲ್ಲಿತ್ತು. ಅಂತೆಯೇ ಅವನ ನಂಬಿಕೆ ಸುಳ್ಳಾಗಲಿಲ್ಲ. ಮಾರ್ಚ್ ೧೧, ೧೮೩೪ರಲ್ಲಿ ಕೊಡಗನ್ನು ತಮ್ಮ ಕೈವಶಕ್ಕೆ






**ಕೊಡಗನ್ನು ವಶಕ್ಕೆ ತೆಗೆದುಕೊಳ್ಳುವಾಗ ದಿವಾನ್ ಮಾತಂಡ ಅಪ್ಪಚ್ಚುನಿಂದ ಹತನಾದ ಬ್ರಿಟಿಷ್ ಅಧಿಕಾರಿಯ ಸ್ಮಾರಕ**

ತೆಗೆದುಕೊಳ್ಳಲು ಬ್ರಿಟಿಷ್ ಸೈನ್ಯದ ಮುಂದಾಳತ್ವವನ್ನು ವಹಿಸಿ ಕರ್ನಲ್ ಗಿಲ್ಬರ್ಟ್ ವ್ಹಾಗ್ ಸೊಮವಾರಪೇಟೆಯ ಕಡೆಯಿಂದ ಮಡಿಕೇರಿಯತ್ತ ಧಾವಿಸಿದ. ಮಾರ್ಚ್ ೩ ರಂದು ದಿವಾನ ಮಾತಂಡ ಅಪ್ಪಚ್ಚು, ಕೊಡಗು ಬ್ರಿಟಿಷರ ಕೈವಶವಾಗುವುದನ್ನು ತಡೆಯಲು ತನ್ನ ಒಂದು ಪಡೆಯ ಜೊತೆಗೆ ಸೋಮವಾರಪೇಟೆಯಲ್ಲಿ ಬ್ರಿಟಿಷ್ ಸೈನ್ಯವನ್ನು ಎದುರಿಸಿದ. ಆಧುನಿಕ ಶಸ್ತ್ರಸಜ್ಜಿತರಾಗಿ ಬಂದಿದ್ದ ಬ್ರಿಟಿಷ್ ಸೈನ್ಯವನ್ನು ದಿವಾನ್ ಮಾತಂಡ ಅಪ್ಪಚ್ಚು ತನ್ನ ಸೈನ್ಯದೊಂದಿಗೆ ಎದುರಿಸಿದ.

ಅಪ್ಪಚ್ಚು, ಕೇರಳದಿಂದ ತಂದ ನಾಡ ತುಪಾಕಿಯಿಂದಲೇ ಬ್ರಿಟಿಷ್ ಸೈನ್ಯವನ್ನು ಹೊಡೆದುರುಳಿಸಿದ. ಈ ಹೋರಾಟದಲ್ಲಿ ೪೮ ಬ್ರಿಟಿಷ್ ಸೈನಿಕರು ಮತ್ತು ಮೂವರು ಬ್ರಿಟಿಷ್ ಅಧಿಕಾರಿಗಳು ಹತರಾದರು. ೧೧೮ ಬ್ರಿಟಿಷ್ ಸೈನಿಕರು ಗಾಯಾಳುಗಳಾದರು. ವೀರಾವೇಶದಿಂದ ಹೋರಾಡಿದ ಮಾತಂಡ ಅಪ್ಪಚ್ಚು ಬ್ರಿಟಿಷರನ್ನು ಕೊಡಗಿನೊಳಗೆ ನುಗ್ಗದಂತೆ ತಡೆದ. ಅಂದು ದಿವಾನ್ ಮಾತಂಡ ಅಪ್ಪಚ್ಚುವಿನ ಎದುರು ಬ್ರಿಟಿಷ್ ಸೈನ್ಯದ ಎರಡು ತುಕಡಿಗಳು ಸೋಲನುಭವಿಸಿದವು.

ನಾಲ್ಕುನಾಡು ಅರಮನೆಯಲ್ಲಿ ಬಚ್ಚಿಟ್ಟುಕೊಂಡಿದ್ದ ರಾಜ ಚಿಕ್ಕವೀರರಾಜನಿಗೆ ಬ್ರಿಟಿಷರ ವಿರುದ್ಧ ಹೋರಾಡುವುದು ಬೇಕಿರಲಿಲ್ಲ. ಕಾಣಿಕೆಯನ್ನು ನೀಡಿ ಸಂಧಾನ ಕಾರ್ಯಕ್ಕೆ ದಿವಾನ ಅಪ್ಪರಂಡ ಬೋಪುವನ್ನು ಕಳುಹಿಸಿದ. ಅಂದು ಏಪ್ರಿಲ್ ೬, ೧೮೩೪ನೇ ಇಸವಿ. ಬ್ರಿಟಿಷ್ ಅಧಿಕಾರಿ ಜೇಮ್ಸ್ ಸ್ಟಾರ್ಟ್ ಫ್ರೇಸರ್ ತನ್ನ ಸೈನ್ಯದೊಂದಿಗೆ ಮಡಿಕೇರಿಯನ್ನು ಮತ್ತು ರಾಜ ಚಿಕ್ಕವೀರರಾಜನನ್ನು ವಶಕ್ಕೆ ತೆಗೆದುಕೊಂಡ.

ಈ ಹೋರಾಟದಲ್ಲಿ ಬ್ರಿಟಿಷ್ ಸರಕಾರ ತನ್ನ ಇಬ್ಬರು ಉತ್ತಮ ಅಧಿಕಾರಿಗಳಾದ ಕೊಲಿನ್ ಮ್ಯಾಕೆನ್ಜಿ ಮತ್ತು ವಿಲಿಯಂ ಆನ್ಸನ್ ಮ್ಯಾಕ್‌ಕ್ಲೆವರ್ಟಿ ಜೊತೆಗೆ ೨೦೦ ಸೈನಿಕರನ್ನು ಕಳೆದುಕೊಳ್ಳುವಂತಾಯಿತು. ೧೮೩೪ರಲ್ಲಿ ಈಸ್ಟ್ ಇಂಡಿಯಾ ಕಂಪೆನಿ ಕೊಡಗನ್ನು ವಶಪಡಿಸಿಕೊಂಡಿತು. ಕೊಡಗನ್ನು ಸುಪರ್ದಿಗೆ ತೆಗೆದುಕೊಳ್ಳುವ ಮುನ್ನ ಕೊಡವ ದಿವಾನರು ಮತ್ತು ನಾಡಿನ ಮುಖ್ಯಸ್ಥರು ಬ್ರಿಟಿಷರಿಂದ ಉತ್ತಮ ಆಡಳಿತದ ಭರವಸೆಯನ್ನು ಪಡೆದರು. ದೀರ್ಘಕಾಲದ ಅರಾಜಕತೆಯ ಆಡಳಿತಕ್ಕೆ ಬೇಸತ್ತ ಕೊಡಗಿನವರಿಗೆ ಉತ್ತಮ ರೀತಿಯ ಆಳ್ವಿಕೆ ಬೇಕಿತ್ತು. ಗುಡ್ಡಗಾಡುಗಳಲ್ಲಿ ಬದುಕುತ್ತಿದ್ದ, ಶತ್ರುಗಳ ವಿರುದ್ಧ ಹೋರಾಡುತ್ತಿದ್ದ ವೀರರಿಗೆ ಬ್ರಿಟಿಷರ ನಾಗರಿಕತೆಯ ಸಂಪರ್ಕ ಸ್ವಲ್ಪ ಮಟ್ಟಿಗೆ ಹಿತವೆನಿಸಿತು.

## ದಿವಾನ್ ಮಾತಂಡ ಅಪ್ಪಚ್ಚು

ದಿವಾನ್ ಮಾತಂಡ ಅಪ್ಪಚ್ಚು ಎಡೆನಾಲ್ಕುನಾಡಿಗೆ ಸೇರಿದ ಬೆಪ್ಪುನಾಡಿಗೆ ಸೇರಿದವನು. ಅಂದರೆ ಇಂದಿನ ವೀರಾಜಪೇಟೆಗೆ ಸೇರಿದವನು. ಮಾತಂಡ ಕರೀಚ ಇವನ ತಂದೆ. ನಾಲ್ಕು ಜನ ಸಹೋದರರಲ್ಲಿ ದಿವಾನ್ ಅಪ್ಪಚ್ಚು ಹಿರಿಯ ಮಗ. ಕೊಡಗಿನ ಹಾಲೇರಿ ರಾಜ ಚಿಕ್ಕವೀರರಾಜ, ಬ್ರಿಟಿಷರ ವಿರುದ್ಧ ಸೆಣಸಲು ಹೆದರಿ ನಾಲ್ಕುನಾಡು ಅರಮನೆಯಲ್ಲಿ ಬಚ್ಚಿಟ್ಟುಕೊಂಡಾಗ, ನಾಡಿನ ರಕ್ಷಣೆ ಮತ್ತು ಸ್ವಾಮಿನಿಷ್ಠೆಯನ್ನು ಪ್ರದರ್ಶಿಸಿದ ಮಹಾನ್ ವೀರ ಈ ಮಾತಂಡ ಅಪ್ಪಚ್ಚು. ಬ್ರಿಟಿಷರ ಆಧುನಿಕ ಶಸ್ತ್ರಾಸ್ತ್ರಗಳ ನಡುವೆಯೂ ನಾಡ ತುಪಾಕಿಯಿಂದ ತನ್ನ ಸೈನ್ಯದೊಂದಿಗೆ ಪರಕೀಯರ ಕಪಿಮುಷ್ಟಿಗೆ ಕೊಡಗು ಸೇರಬಾರದು ಎಂದು ತನ್ನ ಬಿಸಿರಕ್ತದ ಗುಂಡಿಗೆಯನ್ನು ಪಣಕ್ಕಿಟ್ಟ ಪಡೆವೀರ. ಬ್ರಿಟಿಷರ ನಾಲ್ಕು ತುಕಡಿಯಲ್ಲಿ ಎರಡು ತುಕಡಿಯನ್ನು ಹಾರಂಗಿ ಮತ್ತು ಸೋಮವಾರಪೇಟೆಯಲ್ಲಿ ಎದುರಿಸಿ ಬ್ರಿಟಿಷ್ ಅಧಿಕಾರಿಯರನ್ನೇ ಹಿಮ್ಮೆಟ್ಟಿಸಿದ.



ದಿವಾನ್ ಮಾತಂಡ ಅಪ್ಪಚ್ಚುವಿನ ಹೋರಾಟಕ್ಕೆ ಬ್ರಿಟಿಷರು ನಡುಗಿಬಿಟ್ಟರು. ವೀರಾವೇಶದ ಹೋರಾಟಕ್ಕೆ ಮಾರುಹೋದ ಬ್ರಿಟಿಷರು ತಮ್ಮ ಆಡಳಿತ ವ್ಯವಸ್ಥೆಯಲ್ಲಿ ಒಂದು ಹುದ್ದೆಯನ್ನು ಮಾತಂಡ ಅಪ್ಪಚ್ಚುವಿಗೆ ಕೊಡುವುದಾಗಿ ತಿಳಿಸಿದರು.

ಸ್ವಾಮಿನಿಷ್ಠೆಯ ಪರಾಕ್ರಮಿ ಸ್ವಾಭಿಮಾನವನ್ನು ಬಿಟ್ಟುಕೊಡದೆ, 'ನಾನು ಯಾರ ಕೈಯಾಳು ಆಗಲಾರೆ, ರಾಜನ ಸೇವೆ–ಈ ನಾಡಿನ ರಕ್ಷಣೆಯೇ ನನಗೆ ಮುಖ್ಯ' ಎಂದು ಹೇಳಿದ. ೧೮೩೭ರ ವೇಳೆಗೆ ಬೆಪ್ಪುನಾಡಿನ ಸುಬೇದಾರನಾಗಿ ಅಪ್ಪಚ್ಚುವನ್ನು ನೇಮಕ ಮಾಡಲಾಯ್ತು. ೧೮೭೦ರಲ್ಲಿ ಮುಖ್ಯ ಶಿರಸ್ತೇದಾರನಾಗಿ ಬಡ್ತಿ ಪಡೆದ.

## ಬ್ರಿಟಿಷರ ಆಡಳಿತದಲ್ಲಿ ನಡೆದ ಕೆಲವು ಸುಧಾರಣೆಗಳು

ಕೊಡಗನ್ನು ವಶಪಡಿಸಿಕೊಂಡ ಬ್ರಿಟಿಷ್ ಸರಕಾರದ ಮೊದಲ ಅಧಿಕಾರಿ, ಜೆ.ಎಸ್.ಫ್ರೇಸರ್ ಅವರನ್ನು ಅಧಿಕೃತವಾಗಿ ಪರಿಚಯಿಸಿದ ೧೮೩೪ ಏಪ್ರಿಲ್ ೧೧ರ ಮೊದಲ ಇಸ್ತಿಹಾರ್ ಹೀಗಿದೆ...

Where as the rule and dominion of Raja Virarajendra Wodeyar over the country of Coorg have now definitely & forever closed, it is hereby proclaimed and directed that the whole civil administration of the country shall be conducted as hereafter by the Shanbogs, Hoblidars, Parupathyagar Subedars, Dewans & Karnik as at present employed in their respective stations with the privilege of immediate and direct and appeal form every native of Coorg of whatever rank or degree to Lt. Co. Fraser the political agent of His Excellency the right Honourable the Governor General which be determined under the Authority of the Governor General & upon the model best calculated to secure the future well-being & happiness of the people of the country.

It is hereby further distinctly explained that the administra-

tion of justice will be exercised by the authorities above enumerated only to that extent & degree with which they have been hitherto individually charged to the entire exclusion of that superior power & Jurisdiction which have been severe than simple imprisonment will on & only account whatever takes place without a reference to Col. Fraser & the sanction of the British Govt.

Marcara
sd/-

11th April 1834 J.S. Fraser
Lt.Col. & Political Agent

(ಕೊಡಗಿನ ರಾಜ ವೀರರಾಜೇಂದ್ರನ ಆಡಳಿತ ಇಂದಿಗೆ ಅಧಿಕೃತವಾಗಿ ಕೊನೆಗೊಳ್ಳುತ್ತದೆ ಮತ್ತು ಇಂದಿನಿಂದ ಕೊಡಗಿನ ಆಡಳಿತವನ್ನು ಕೊಡಗಿನವರೇ ಆದ ಶ್ಯಾನುಬೋಗರು, ಹೋಬಳಿದಾರರು, ಪಾರುಪತ್ಯೆಗಾರರು, ಸುಬೇದಾರರು, ಕರಣಿಕರು ಮತ್ತು ದಿವಾನರು ರಾಜರ ಆಳ್ವಿಕೆಯ ಕಾಲದಂತೆ ಅದೇ ಸ್ಥಾನದಲ್ಲಿ ಮುಂದುವರಿಯುತ್ತಾರೆ. ಇಂದಿನಿಂದ ಕೊಡಗು ದೇಶದ ನಿವಾಸಿಗಳಿಂದ ಬರುವ ಮನವಿ, ಕೋರಿಕೆಗಳನ್ನು ಈ ಮೇಲೆ ಸೂಚಿಸಿದ ಅಧಿಕಾರಿಗಳು ನೇರವಾಗಿ ಲೆ॥ಕ॥ ಜೆ.ಎಸ್.ಫ್ರೇಜ಼ರ್‌ರವರಿಗೆ ಸಲ್ಲಿಸತಕ್ಕದ್ದು. ಇದು ಇನ್ನು ಮುಂದೆ ಶಾಶ್ವತ ಸರ್ಕಾರ ಬರುವವರೆಗೆ ಗೌ॥ ಜನರಲ್ ಸುಪರ್ದಿಯಲ್ಲಿ ಇರುತ್ತದೆ. ಇದು ಇಲ್ಲಿನ ಸುಖ, ಶಾಂತಿ, ನೆಮ್ಮದಿ ಮತ್ತು ಮಾದರಿ ಸಮಾಜವಾಗಿ ಬದುಕಲು ಈ ಘೋಷಣೆ ಮಾಡಲಾಗಿದೆ.

ಅಲ್ಲದೆ ಮುಂದಿನ ವಿವರಣೆಯಂತೆ ಆಡಳಿತವು ಈ ಮೇಲಿನ ಅಧಿಕಾರಿಗಳಿಗೆ ಕೆಲವು ಸೀಮಿತ ಅಧಿಕಾರವನ್ನು ಮಾತ್ರ ನೀಡಲಾಗಿದೆ. ಈ ಹಿಂದೆ ಇದ್ದ ವೀರರಾಜೇಂದ್ರ ಒಡೆಯರ ಎಲ್ಲಾ ಅಧಿಕಾರವನ್ನು ಹಿಂಪಡೆಯಲಾಗಿದೆ. ಇನ್ನು ಮುಂದೆ ಯಾರೇ ಅಧಿಕಾರಿಗಳನ್ನು ಕೊಲ್ಲುವ, ಸೆರೆಮನೆವಾಸ ವಿಧಿಸುವ ಅಧಿಕಾರ ಇರುವುದಿಲ್ಲ. ಇದನ್ನು ಅಧಿಕೃತವಾಗಿ ಲೆ॥ ಕ॥ ಜೆ.ಎಸ್. ಫ್ರೇಜ಼ರ್‌ರವರಿಗೆ ತಿಳಿಸಿ ಬ್ರಿಟಿಷ್ ಸರಕಾರದ ಅನುಮತಿ ಇಲ್ಲದೇ ಮಾಡುವ ಹಾಗಿಲ್ಲ.)



ಬ್ರಿಟಿಷ್ ಆಳ್ವಿಕೆಗೆ ಒಳಪಟ್ಟ ಕೊಡಗು ಕೆಲವು ಮಟ್ಟಿಗೆ ಸುಧಾರಣೆಯ ಹಾದಿಯನ್ನು ಕಂಡಿತ್ತು.

ಈ ಸಮಯದಲ್ಲಿ ಇಲ್ಲಿನ ಮುಖ್ಯಸ್ಥರು ನಾಡಿನ ಅಭಿವೃದ್ಧಿಗೆ ಆಗಬೇಕಿರುವ ಸೌಲಭ್ಯಗಳ ಪಟ್ಟಿಯನ್ನು ನೀಡಿರಬಹುದು. ಈ ಮೊದಲೇ ಒಪ್ಪಿಗೆ ಕೊಟ್ಟಂತೆ ಆಯಾ ನಾಡಿನ ಮುಖ್ಯ ಅಧಿಕಾರಿಗಳು ಈ ಕಾರ್ಯವನ್ನು ರೂಪಿಸಿರಬೇಕು. ಈ ಕಾರಣಗಳಿಂದಲೇ ಅಂದು ಲೆ॥ ಕ॥ ಜೆ. ಎಸ್. ಫ್ರೇಜ಼ರ್ ತಮ್ಮದೇ ಸ್ವಂತ ದುಡ್ಡಿನಿಂದ ಶಾಲೆಯನ್ನು ತೆರೆದರು. ಕನ್ನಡ ಮತ್ತು ಇಂಗ್ಲಿಷ್ ಶಾಲೆಗಳು ಬೆಳಕಿಗೆ ಬಂದವು. ಇರ್ಪು ದೇವಸ್ಥಾನ, ಬರಪೊಳೆ ಯೋಜನೆ, ಚಿಕ್ಲಿಹೊಳೆ ಯೋಜನೆಗೆ ನೀಲನಕ್ಷೆ ಸಿದ್ಧವಾಯಿತು. ಅಂದು ಶಾಲೆಗಾಗಿ ಮತ್ತು ನಾಡಿನ ಏಳಿಗೆಗಾಗಿ ಬಹಳಷ್ಟು ಸ್ಥಳೀಯ ದಾನಿಗಳು ಭೂದಾನ ಮಾಡಿದ ನಿದರ್ಶನಗಳು ಸಿಗುತ್ತವೆ. ಬ್ರಿಟಿಷರ ಈ ಸುಧಾರಣೆಯಿಂದ ಕೊಡಗಿನ ಜನತೆಗೆ ಶಿಕ್ಷಣದ ಸೌಲಭ್ಯ ದೊರಕಿತು.

ಬ್ರಿಟಿಷರು ತಮ್ಮ ಆಡಳಿತಕ್ಕೆ ರೂಪಿಸಿದ ಕೆಲವು ಸೌಕರ್ಯಗಳಿಂದಾಗಿ ಕೊಡಗಿನವರಿಗೆ ನಾಡು ಒಂದು ರೀತಿಯಲ್ಲಿ ಪ್ರಗತಿಯತ್ತ ಸಾಗುತ್ತಿದೆ ಎನಿಸಿತು. ಉದಾಹರಣೆಗೆ ರಸ್ತೆಯ ಅಭಿವೃದ್ಧಿ ಮತ್ತು ಮುತ್ತಾರ್ಮುಡಿ ಹೊಳೆಗೆ ನಿರ್ಮಿಸಿದ ಸೇತುವೆ, ಶಾಲೆ ಮತ್ತು ಕೆಲವೊಂದು ಯೋಜನೆಗಳು ಕೊಡವರಿಗೆ ಬ್ರಿಟಿಷ್ ಸರಕಾರದ ಮೇಲೆ ವಿಶ್ವಾಸ ತಳೆದಂತೆ ಕಾಣುತ್ತದೆ. ಹಾಲೇರಿ ಅರಸರ ೨೩೪ ವರ್ಷಗಳ ಆಳ್ವಿಕೆಯ ಸಮಯದಲ್ಲಿ ನಾಡಿನ ರಕ್ಷಣೆಗೆ ಕೊಡಗಿನ ನಿವಾಸಿಗಳನ್ನು ಬಳಸಿಕೊಂಡರೂ ಯಾವುದೇ ಸುಧಾರಣೆ, ಪ್ರಜೆಗಳ ಅಭಿವೃದ್ಧಿ ಈ ನಾಡಿನಲ್ಲಾಗದ್ದನ್ನು ಬ್ರಿಟಿಷ್ ಸರಕಾರದ ಸುಧಾರಣೆಯೊಂದಿಗೆ ಸ್ಥಳೀಯರು ಹೋಲಿಕೆ ಮಾಡಿದರು. ಅದೇ ಬ್ರಿಟಿಷ್ ಸರಕಾರದ ಆಡಳಿತಾವಧಿಯಲ್ಲಿ ಸ್ಥಳೀಯರಿಗೆ ನೀಡಿದ ಲೆಜಿಸ್ಲೇಟಿವ್ ಮೆಂಬರ್ ಆಗುವ ಅವಕಾಶದಿಂದಾಗಿ ಸ್ಥಳೀಯರು ರಾಜಕೀಯವಾಗಿ ಸುಧಾರಣೆಯ ಹಾದಿಯನ್ನು ಅಳವಡಿಸಿಕೊಂಡರು. ಕೆಲವು ಸುಧಾರಣೆಗಳನ್ನು ಕಂಡ ನಾಡಿನ ಜನತೆ ಶಿಕ್ಷಣದತ್ತ ಮುಖ ಮಾಡಿದರು.

ಕೊಡಗಿನವರು ರೈತಾಪಿ ವರ್ಗದವರು. ಈ ಕಾರಣದಿಂದಾಗಿ ಕೃಷಿಕ ಸಮುದಾಯ ಹಸುವನ್ನು ಸಾಕುತ್ತಿದ್ದರು. ಹಸುವಿಗೆ ಕೊಡಗಿನ ಸಂಪ್ರದಾಯದಲ್ಲಿ

ವಿಶೇಷ ಸ್ಥಾನವಿದೆ. ಕೊಡಗಿನಲ್ಲಿ ಅನಾದಿ ಕಾಲದಿಂದಲೂ ಗೋಮಾಂಸ ವರ್ಜ್ಯ. ಇದಕ್ಕೆ ಇಂಬುಕೊಡುವಂತೆ ಶುದ್ಧ ಮಾಂಸಹಾರಿಗಳಾದ ಬ್ರಿಟಿಷ್ ಸರಕಾರ ಕೊಡವರ ಭಾವನೆಗೆ ಬೆಲೆಕೊಟ್ಟು ಗೋಮಾಂಸದ ನಿಷೇಧ ಕಾನೂನು ಜಾರಿಗೆ ತಂದರು. ಇದಕ್ಕೆ ಸಂಬಂಧ ೧ ಲೆ॥ ಕ॥ ಜೆ. ಎಸ್. ಫ್ರೇಜ಼ರ್ ಅವರು ೧೮೩೫ ಜನವರಿ ೧೪ರಂದು ಇಸ್ತಿಹಾರ್ ಹೊರಡಿಸಿದರು.

ಕೊಡವರು ಶಾಂತಿಪ್ರಿಯರು. ಕ್ಷತ್ರಿಯ ಗುಣವಿದ್ದರೂ ಯಾರೊಂದಿಗೂ ತಾವಾಗಿಯೇ ಕಾಲುಕೆರೆದು ಯುದ್ಧಕ್ಕೆ ಹೋಗರು ಎಂಬುದು ಅಂದಿನ ಬ್ರಿಟಿಷ್ ಸರಕಾರಕ್ಕೆ ತಿಳಿದ ವಿಷಯವಾಗಿತ್ತು. ಸದಾ ಗುಡ್ಡಗಾಡು ಪ್ರದೇಶದಲ್ಲಿ ವಾಸಿಸುವ **ಕೊಡವರಿಗೆ ೧೮೬೧ರ ಫೆಬ್ರವರಿ ೨೬ ರಂದು** ಅಂದಿನ ಕೊಡಗಿನ ಕಮೀಷನರ್ ಆಗಿದ್ದ ಜೆನ್. ಕಬ್ಬನ್‌ರವರು ಶಸ್ತ್ರಾಸ್ತ್ರ ವಿನಾಯಿತಿ ಕಾಯಿದೆಯನ್ನು ಜಾರಿಗೊಳಿಸಿದರು. ಅದರಂತೆ ಕೊಡವರು ಕೋವಿಯನ್ನು ಹೊಂದುವ ಹಕ್ಕನ್ನು ಬ್ರಿಟಿಷ್ ಸರಕಾರ ಶಾಶ್ವತವಾಗಿ ನೀಡಿತು. ಅದೇ ರೀತಿ ದೇಶದಾದ್ಯಂತ ಜಾರಿಗೆ ಬಂದ ಶಸ್ತ್ರಾಸ್ತ್ರ ಕಾಯಿದೆಯು ಬೇರೆಯವರಿಂದ ಶಸ್ತ್ರಾಸ್ತ್ರ ಹೊಂದುವ ಹಕ್ಕನ್ನು ಕಸಿದುಕೊಂಡಿತು.

## ಬ್ರಿಟಿಷ್ ಸರಕಾರದ ವಿರುದ್ಧ ಧ್ವನಿ

೧೮೩೪ರಲ್ಲಿ ಕೊಡಗು ಬ್ರಿಟಿಷರ ಕೈವಶವಾದ ನಂತರ ಕೆಲವು ಕಡೆ ಅಸಮಾಧಾನದ ಹೊಗೆ ಆಡತೊಡಗಿತು. ಅದುವರೆಗೆ ಹಾಲೇರಿ ಅರಸರ ಆಳ್ವಿಕೆಗೆ ಒಳಪಟ್ಟಿದ್ದ ಕೊಡಗಿನ ಜನತೆಗೆ, ಹೊಸ ಆಡಳಿತಕ್ಕೆ ಒಗ್ಗಿಕೊಳ್ಳಲು ಸಮಯವೇ ಹಿಡಿದಿರಬಹುದು. ಆಧುನಿಕ ಶಸ್ತ್ರಸಜ್ಜಿತ ಬ್ರಿಟಿಷ್ ಅಧಿಕಾರಿಗಳ ಓಡಾಟ, ಅಂದು ಬ್ರಿಟಿಷ್ ಸರಕಾರದಿಂದ ಉಂಟಾದ ಶೈಕ್ಷಣಿಕ ಕ್ರಾಂತಿಯು **'ನಮ್ಮನ್ನು ಮತಾಂತರ ಮಾಡುವ ಹುನ್ನಾರವಿರಬೇಕು'** ಎಂದು ಅರಿತರು. ಈ ಕಾರಣದಿಂದ ಬಹಳ ಸಮಯದವರೆಗೆ ಶಾಲೆಯತ್ತ ಯಾರೂ ಮುಖ ಮಾಡಲಿಲ್ಲ.

೧೮೫೭ರ ದಂಗೆಯ ನಂತರ ಸ್ವಾತಂತ್ರ್ಯದ ಕಿಚ್ಚು ಕೊಡಗಿನಾದ್ಯಂತ ಭುಗಿಲೆದ್ದರೂ ಎಲ್ಲಿಯೂ ದಾಖಲೆಗಳಿಲ್ಲ. ಅಂದರೆ ೬೦–೮೦ ವರ್ಷ ಈ ನಾಡಿನಲ್ಲಿ ಯಾವುದೇ ಹೋರಾಟವಾಗಿಲ್ಲ ಎಂಬ ಅರ್ಥವಲ್ಲ. ಏಕೆಂದರೆ ೧೮೬೦ರಲ್ಲಿ ದೇಶಾದಾದ್ಯಂತ ಭಾರತದ ಆಡಳಿತವು ಬ್ರಿಟಿಷ್ ಕಂಪೆನಿಯ ಅಧೀನದಿಂದ ಬ್ರಿಟಿಷ್ ರಾಣಿಯ ಅಧೀನಕ್ಕೆ ಒಳಪಟ್ಟಾಗ, ಕೊಡಗಿನ ಆಡಳಿತವೂ



ಬ್ರಿಟಿಷ್ ರಾಣಿಯ ಅಂಕೆಗೆ ಒಳಪಟ್ಟಿತು. ದೇಶದಾದ್ಯಂತ ಕಾನೂನು ಮಾಡುವ ಪ್ರದೇಶಗಳಲ್ಲಿ ಶಾಸನಸಭೆಗಳನ್ನು ರಚಿಸಿಕೊಳ್ಳುವ ಸುಧಾರಣೆಯನ್ನು ಜಾರಿಗೊಳಿಸಲಾಯಿತು. ಈ ಬದಲಾವಣೆಯು ೧೯೦೯ರ ಹೊತ್ತಿಗೆ ಸರ್ಕಾರೇತರ ಸದಸ್ಯರಿಗೆ ತಮ್ಮ ನಾಡಿನ ಬಗ್ಗೆ ಚರ್ಚಿಸುವ ಅಧಿಕಾರವನ್ನು ನೀಡಿತು. ಇದರ ಪರಿಣಾಮವಾಗಿ ಹೊಸ ಸುಧಾರಣೆಯ ಆಶಾಕಿರಣ ಕೊಡಗಿನ ನಿವಾಸಿಗಳ ಪಾಲಿಗೆ ಒಂದು ಹೊಸ ಆಯಾಮವನ್ನೇ ಕೊಟ್ಟಿತು. ಈ ಸುಧಾರಣೆಯನ್ನು ಕೊಡಗಿನಲ್ಲಿ ಜಾರಿಗೊಳಿಸಬೇಕೆಂದು ಪಟ್ಟು ಹಿಡಿದವರು ಕೊಡಗಿನ ನಿವಾಸಿಗಳು.

ತಮ್ಮ ನಾಡಿನ ಏಳಿಗೆ, ಬೇಡಿಕೆಗಳು, ಸರಕಾರದ ನೀತಿ–ನಿಯಮವನ್ನು ಪ್ರಶ್ನಿಸುವಂತೆ ಮತ್ತು ಕೆಲವು ಸುಧಾರಣೆಗಳನ್ನು ತರಬೇಕು ಎಂಬ ಧೋರಣೆ ವಿದ್ಯಾವಂತ ಸಮುದಾಯದಲ್ಲಿ ಚಿಗುರೊಡೆಯಿತು. ಇದರ ಪರಿಣಾಮವಾಗಿ ಕೊಡಗಿನ ಜನರ ಪ್ರತಿನಿಧಿಯಾಗಿ ೧೯೦೯ರಲ್ಲಿ **'ಕೊಡಗು ವ್ಯವಸಾಯಗಾರರ ಸಂಘ'** ಅಸ್ತಿತ್ವಕ್ಕೆ ಬಂತು. ಈ ಸಂಸ್ಥೆಯ ಮೂಲ ಧ್ಯೇಯ ಕೊಡಗಿನ ನಿವಾಸಿಗಳ ಸರ್ವಾಂಗೀಣ ಅಭಿವೃದ್ಧಿಯನ್ನು ಕಾಣುವುದೇ ಆಗಿತ್ತು. ಈ ಸಂಘದ ಸ್ಥಾಪನೆಗೆ ಕಾರಣಕರ್ತರಾದವರು ಬಿದ್ದಂಡ ಗಣಪತಿ ಮತ್ತು ರಾವ್ ಬಹದ್ದೂರ್ ಕೋದಂಡ ಮಾದಯ್ಯನವರು. ಈ ಸಂಸ್ಥೆಯು ೧೯೦೯–೧೯೧೨ ರವರೆಗೆ ಕೊಡಗು **"ವ್ಯವಸಾಯಗಾರರ ಸಂಘ"**ವಾಗಿ ಬಹು ಹುಮ್ಮಸ್ಸಿನಿಂದ ಕಾರ್ಯ ನಿರ್ವಹಿಸಿತು. ತದನಂತರ ಇದನ್ನು 'ಕೊಡಗು ಜಮೀನ್ದಾರರ ಸಂಘ' ಎಂದು ಪುನರ್ನಾಮಕರಣ ಮಾಡಲಾಯಿತು. ಇದರ ಅಧ್ಯಕ್ಷರಾಗಿ ರಾವ್ ಬಹದ್ದೂರ್ ಮನೆಪಂಡ ಮುತ್ತಣ್ಣ, ಕಾರ್ಯದರ್ಶಿಯಾಗಿ ಶ್ರೀ ಬಿದ್ದಂಡ ಗಣಪತಿ ಮತ್ತು ಸಹಕಾರ್ಯದರ್ಶಿಯಾಗಿ ಶ್ರೀ ಸಿ.ವೆಂಕಪ್ಪಯ್ಯ ಆಯ್ಕೆಯಾದರು. ಇವರ ದುಡಿಮೆಯ ಫಲವಾಗಿ ಕೊಡಗು ಜಮೀನ್ದಾರರ ಸಂಘವು ಅಂದು ಕೊಡಗಿನ ಮೂಲೆಮೂಲೆಗಳಲ್ಲಿರುವ ಗ್ರಾಮಗಳಲ್ಲಿ ಅಸ್ತಿತ್ವಕ್ಕೆ ಬಂತು. ಕೊಡಗಿನ ಜನತೆಯ ನವ ಸುಧಾರಣೆಯ ಪಥದ ಸೃಷ್ಟಿಗೆ ಕಾರಣವಾದ ಸಂಸ್ಥೆಯಾಗಿ ಕೊಡಗು ಜಮೀನ್ದಾರರ ಸಂಘ ಬೆಳೆಯಿತು. ಈ ಸಂಘದ ಮೂಲಕ ಅನೇಕ ಮಹನೀಯರು ಕೊಡಗಿನ ಉದ್ದಗಲಕ್ಕೂ ಪರಿಚಯವಾದರು.

ಈ ಸಂಘದ ಏಳಿಗೆಗಾಗಿ ಶ್ರಮಿಸಿದ – ರಾವ್ ಬಹದ್ದೂರ್ ಕೊಡಂದೇರ

ಕುಟ್ಟಯ್ಯ, ಶ್ರೀಪತಿರಾವ್, ಸುಬ್ಬಣ್ಣಯ್ಯ, ಕೇಳಪಂಡ ಅಚ್ಚಯ್ಯ, ಮನೇಪಂಡ ನಾಚಯ್ಯ ಮತ್ತು ಚಿಣ್ಣಪ್ಪ, ಬುಟ್ಟಿಯಂಡ ನಂಜಪ್ಪ, ಬಿದ್ದಂಡ ಸುಬ್ಬಣ್ಣ , ರಾವ್ ಬಹದ್ದೂರ್ ಕೋಡಿಮಣಿಯಂಡ ಸುಬ್ಬಯ್ಯ, ಕೋದಂಡ ಉತ್ತಯ್ಯ, ನಾಗರತ್ನ ಪಿಳ್ಳೈ, ಪುತ್ತಮನೆ ಗಣಪಣ್ಣಯ್ಯ, ಪಾರೊಂಗಡ ಕುಶಾಲಪ್ಪ, ಮುಕ್ಕಾಟ್ಟೀರ ಮಂದಣ್ಣ, ಅಪ್ಪಾರಂಡ ಚಂಗಪ್ಪ, ಬೆಳ್ಳಾರಳ್ಳಿ ಬಸವಣ್ಣಯ್ಯ, ಕೋಟೇರ ಚಿನ್ನಪ್ಪ, ಎಂ.ಎಂ. ಸಿದ್ದೀಕ್, ಬಿದ್ದಂಡ ಕಾರ್ಯಪ್ಪ, ಚಂಗಂಡ ಕುಟ್ಟಪ್ಪ, ನಾಯಡ ಬೆಳ್ಯಪ್ಪ, ಜಮ್ಮಡ ಮಾದಪ್ಪ, ಗುಂಡುಕುಟ್ಟಿ ಮಂಜಯ್ಯ, ಕೆದಂಬಾಡಿ ಸುಬ್ರಾಯ, ಪಾಲೆಕಂಡ ಮೇದಪ್ಪ ಹೀಗೆ ಅನೇಕರು ಇಲ್ಲಿ ಸ್ಮರಣೀಯ. ಅಂದು ಕೊಡಗಿನ ಸ್ವಾತಂತ್ರ್ಯ ಹೋರಾಟಕ್ಕೆ ಹೊಸ ಆಯಾಮವನ್ನು ಕೊಟ್ಟು, ಜನಪರವಾಗಿ ನಿಂತು ನಾಡಿನ ಏಳಿಗೆಗಾಗಿ ಶ್ರಮಿಸಿದ ಏಕೈಕ ಕೊಡಗಿನ ಸಂಘ 'ಕೊಡಗು ಜಮೀನ್ದಾರರ ಸಂಘ'.

### ಲೆಜಿಸ್ಲೇಟಿವ್ ಕೌನ್ಸಿಲ್ ಜಾರಿಯಾಯ್ತು

೧೯೧೯ರಲ್ಲಿ ಮಾಂಟೆಗೋ ಸುಧಾರಣೆಯಂತೆ ದೇಶದಾದ್ಯಂತ ಹಲವಾರು ಸವಲತ್ತುಗಳನ್ನು ಪಡೆಯುವಾಗ, ಸಣ್ಣ ನಾಡು ಕೊಡಗಿಗೆ ಯಾವುದೇ ಸುಧಾರಣೆಯೂ ಜಾರಿಯಾಗದಾಗ, ಕೊಡಗಿನ ಜಮೀನ್ದಾರರ ಸಂಘವು ಕೊಡಗಿನ ಸುಧಾರಣೆಗೆ ದನಿ ಎತ್ತತೊಡಗಿತು. ಸಂಘದ ತೀವ್ರ ಹೋರಾಟದ ಪರಿಣಾಮವಾಗಿ ಕೊಡಗಿಗೆ ೧೯೨೪ರಲ್ಲಿ ಲೆಜಿಸ್ಲೇಟಿವ್ ಕೌನ್ಸಿಲನ್ನು ಸರಕಾರ ಜಾರಿಗೊಳಿಸಿತು. ೧೩ ಸದಸ್ಯರನ್ನು ಒಳಗೊಂಡ ಈ ಕೌನ್ಸಿಲ್‌ನ ನಿರ್ಣಯವು ಚೀಫ್ ಕಮೀಷನರ್‌ನ ಅಧೀನದಲ್ಲಿತ್ತು. ವರ್ಷಕ್ಕೆ ೬ ದಿನ ಮಾತ್ರ ಕಾರ್ಯನಿರ್ವಹಿಸುತ್ತಿತ್ತು. ದೇಶದ ಇತರ ಪ್ರದೇಶಗಳಲ್ಲಿರುವ ರಾಜಕೀಯ ಸುಧಾರಣೆಯಂತೆ ಇದಕ್ಕೆ ಯಾವುದೇ ಹಕ್ಕನ್ನು ನೀಡಿರಲಿಲ್ಲ. ಇಲ್ಲಿ ಆಯ್ಕೆಯಾದ ಸದಸ್ಯರು ರಾಜಕೀಯದಲ್ಲಿ ಮುಂದೆ ಮಂತ್ರಿ ಆಗುವ ಅವಕಾಶವೂ ಇರಲಿಲ್ಲ.

### ಕೊಡಗು ಕಂಪೆನಿ

ಕೊಡಗು ನಾಡಿನ ಆಗುಹೋಗುಗಳ ಅರಿವಿನ ಬಗ್ಗೆ ಒಂದು ಪತ್ರಿಕೆ ಅವಶ್ಯ ಎಂದು ಮನಗಂಡ ಕೋದಂಡ ಮಾದಯ್ಯ, ಕೊಡಂದೇರ ಕುಟ್ಟಯ್ಯ, ಸಿ.ಎನ್.ವೆಂಕಪ್ಪಯ್ಯ, ಎನ್.ಆರ್.ಸುಬ್ಬಣ್ಣಯ್ಯ, ಎಂ.ವಿ.ಕೃಷ್ಣರಾವ್, ಪಾರೊಂಗಡ ಕುಶಾಲಪ್ಪ, ಶ್ರೀಪತಿರಾವ್, ಕೋಡಿಮಣಿಯಂಡ ಸುಬ್ಬಯ್ಯ, ಪಾಡಂಡ ಅಪ್ಪಚ್ಚ, ತೆಕ್ಕಡ ಸುಬ್ಬಯ್ಯ, ಮುಕ್ಕಾಟ್ಟೀರ ಮಂದಣ್ಣ ಇವರೇ ಮೊದಲಾದವರು 'ಕೊಡಗು ಕಂಪೆನಿ'ಯನ್ನು ೧೯೨೧ರಲ್ಲಿ ಆರಂಭಿಸಿದರು. ಕೋಟೇರ ಚಿನ್ನಪ್ಪನವರು ಕಂಪೆನಿಯ ಪ್ರಾಯೋಜಕರಾದರು. ಇದರ ಜೊತೆಜೊತೆಗೆ 'ಕೊಡಗು ಪತ್ರಿಕೆ' ಕೂಡ ಆರಂಭವಾಯಿತು.

### ಕೊಡಗು ಪತ್ರಿಕೆ

ಕೊಡಗಿನಲ್ಲಿ ಬ್ರಿಟಿಷ್ ಸರಕಾರದ ದಾಸ್ಯತ್ವದ ವಿರುದ್ಧ ಜನಸಾಮಾನ್ಯರಲ್ಲಿ ಅರಿವು ಮೂಡಿಸಲು ಕೊಡಗು ಕಂಪೆನಿಯು 'ಕೊಡಗು ಪತ್ರಿಕೆ'ಯನ್ನು ಹೊರತಂದಿತು. ಇದು ವಾರಪತ್ರಿಕೆಯಾಗಿದ್ದು, ಕೊಡಗಿನಲ್ಲಿ ರಾಷ್ಟ್ರೀಯ ಭಾವೈಕ್ಯತೆ ಮತ್ತು ಹೋರಾಟದ ಕಲ್ಪನೆ, ಚಳುವಳಿಯಲ್ಲಿ ಪ್ರಮುಖ ಪಾತ್ರವನ್ನು ವಹಿಸಿತು. 'ಕೊಡಗಿನ ಗಾಂಧಿ' ಎಂದೇ ಪ್ರಖ್ಯಾತರಾಗಿದ್ದ ಪಂದ್ಯಂಡ ಬೆಳ್ಯಪ್ಪನವರು ಕೊಡಗು ಪತ್ರಿಕೆಯ ಸಂಪಾದಕರಾದರು. ಉಪ ಸಂಪಾದಕರಾಗಿ ಬಿ.ಪಿ.ಮುತ್ತಣ್ಣನವರು ಆಯ್ಕೆಯಾದರು. ೧೯೨೧ರಲ್ಲಿ ಜಾರಿಯಾದ ಪತ್ರಿಕೆಯು ಸ್ವಾತಂತ್ರ್ಯ ಹೋರಾಟದಲ್ಲಿ ತನ್ನದೇ ಆದ ಛಾಪನ್ನು ಮೂಡಿಸಿತು. ಈ ಪತ್ರಿಕೆಯು ಮಾಡುತ್ತಿದ್ದ ಜನಜಾಗೃತಿಯು ಬ್ರಿಟಿಷ್ ಸರಕಾರಕ್ಕೆ ತೀರ ತಲೆನೋವಾಗಿ ಪರಿಣಮಿಸಿತು. ಕೊಡಗು ಜಮೀನ್ದಾರರ ಸಂಘ ಮತ್ತು ಕೊಡಗು ಪತ್ರಿಕೆ ಎರಡೂ ಸೇರಿ ಅಂದು ಸ್ವಾತಂತ್ರ್ಯ ಹೋರಾಟಕ್ಕೆ ಹೊಸ ಆಯಾಮವನ್ನೇ ಕೊಟ್ಟಿತು. ಸ್ವಾತಂತ್ರ್ಯ ಸಿಗುವವರೆಗೆ ಅವಿರತ ಪ್ರಯತ್ನವನ್ನು ಮಾಡಿದವು. ಸಮಸ್ತ ಜನರ ಪ್ರತಿನಿಧಿಯಾಗಿ ಸರಕಾರದ ಮುಂದೆ ಜನರ ಬೇಡಿಕೆಗಳು ಮಂಡಿಸಲ್ಪಡುತ್ತಿದ್ದವು. ಇದಕ್ಕೆ ಉದಾಹರಣೆಯಾಗಿ ೧೯೪೪ರ ಕೊಡಗು ಪತ್ರಿಕೆಯ ಪ್ರತಿಯಲ್ಲಿ ಪ್ರಕಟಗೊಂಡ ಜಮೀನ್ದಾರರ ಸಂಘದ ಸಭೆಯ ಕೆಲವು ಚರ್ಚಿತ ವಿಷಯಗಳು ಮತ್ತು ನಡವಳಿಗಳು ಇಂತಿವೆ.

### ೧೯೪೪ರ ಕೊಡಗು ಪತ್ರಿಕೆಯಲ್ಲಿ ಪ್ರಕಟಿತ ಮಾಹಿತಿ

ದಿವಾನ್ ಬಹದ್ದೂರ್ ಕೆ.ಚಂಗಪ್ಪನವರ ಅಧ್ಯಕ್ಷತೆಯಲ್ಲಿ ೧೩.೩.೧೯೪೪ ಮತ್ತು ೧೪.೩.೧೯೪೪ರಲ್ಲಿ ಸಭೆ ನಡೆಯಿತು. ಅದರಂತೆ ೧೯೪೪–೪೫ನೇ ಸಾಲಿನ ಬಜೆಟಿನ ಕರಡು ಪ್ರತಿಯೊಂದಿಗೆ ಚರ್ಚಿಸಲಾಯಿತು. ೧೯೪೪–೪೫ರಲ್ಲಿ ಮಡಿಕೇರಿಯಲ್ಲಿ ಉಪಾಧ್ಯಾಯರ ತರಬೇತಿ ಕೇಂದ್ರವನ್ನು ತೆರೆಯುವುದು, ಮಡಿಕೇರಿಯಲ್ಲಿ ರೂ. ೧೫,೦೦೦ ವೆಚ್ಚದ ಒಂದು ಕ್ಷೀರ

ಕೇಂದ್ರದ ಸ್ಥಾಪನೆ, ವೀರಾಜಪೇಟೆಯ ಮಹಿಳಾ ಸಹಕಾರ ಸಮಾಜದ ಶಿಶುವಿಹಾರ ಕೂಟಕ್ಕೆ ೫೦೦ ರೂಪಾಯಿ ಮೀಸಲಿಡುವುದು, ಕೃಷಿ ಸಾಲಗಾರರಿಗೆ ದೀರ್ಘ ಕಂತಿನ ಸಾಲ ಸೌಲಭ್ಯ ಪರಿಶೀಲನೆಯಲ್ಲಿ ಇರುವುದು, ಲಕ್ಷ್ಮಣತೀರ್ಥ ಹೊಳೆಯ ಅಣೆಕಟ್ಟಿಗೆ ೩,೨೫,೦೦೦ ವೆಚ್ಚದಲ್ಲಿ ನಿರ್ಮಾಣದ ಬಗ್ಗೆ ಅಹವಾಲು, ೧೯೪೪–೪೫ನೇ ಸಾಲಿನ ಖರ್ಚು–ವೆಚ್ಚಗಳ ಬಗ್ಗೆ ಚರ್ಚಿಸಲಾಯಿತು.

ಎರಡನೇ ಪ್ರಪಂಚ ಯುದ್ಧದಲ್ಲಿ ಕೊಡಗು ಕೂಡ ಭಾಗಿಯಾಗಿತ್ತು. ಯುದ್ಧಾನಂತರ ಕೊಡಗಿನ ಅಭಿವೃದ್ಧಿಗೆ ಬ್ರಿಟಿಷ್ ಸರಕಾರಕ್ಕೆ ಅಹವಾಲು ಕೊಡಬೇಕೆಂದು ಕೊಡಗಿನ ವ್ಯವಸಾಯಗಾರರ ಸಂಘದ ಸಭೆಯ ನಡಾವಳಿಯಲ್ಲಿ ಉಲ್ಲೇಖಿಸಲಾಯಿತು. ಸಂಘದ ಪ್ರತಿ ಸದಸ್ಯರಿಂದ ಬಜೆಟಿನ ಲೋಪದೋಷಗಳ ಬಗ್ಗೆ ಚರ್ಚಿಸಲಾಗಿತ್ತು. ಕೊಡಗಿನಲ್ಲಿ ನೀರಾವರಿ ಯೋಜನೆಯ ವಿಷಯಗಳು, ಅದರಲ್ಲೂ ಮುಖ್ಯವಾಗಿ ದಕ್ಷಿಣ ಕೊಡಗಿನ ಲಕ್ಷ್ಮಣತೀರ್ಥ ಹೊಳೆಯ ಅಣೆಕಟ್ಟು, ಮಳೆಯ ಕಾರಣದಿಂದಾಗಿ ಬೆಳೆ ನಷ್ಟಕ್ಕೆ ಪರಿಹಾರ, ವೈಜ್ಞಾನಿಕ ರೀತಿಯಲ್ಲಿ ರೈತರನ್ನು ಕೃಷಿಗೆ ತರಬೇತಿ ನೀಡಬೇಕು ಎನ್ನುವ ಬಗ್ಗೆ, ನಿಗದಿಪಡಿಸಿದ ಕಂದಾಯದ ಆದಾಯವನ್ನು ರೈತರ ನೀರಾವರಿ ಯೋಜನೆಗೆ ಉಪಯೋಗಿಸುವುದು ಇವೆಲ್ಲಾ ಸರಕಾರ ಮಂಜೂರು ಮಾಡಿ ಕಾರ್ಯಗತ ಮಾಡಬೇಕೆಂಬ ಅಹವಾಲನ್ನು ಅಂದು ಕೊಡಗು ಪತ್ರಿಕೆಯಲ್ಲಿ ಪ್ರಕಟಪಡಿಸಿತ್ತು. ಚೀಫ್ ಕಮಿಷನರ್, ಅಧ್ಯಕ್ಷರು ಎಂ.ಎಸ್.ಮಂದಣ್ಣ, ಬಿ.ಬಿ.ಶ್ರೀಪತಿರಾವ್, ಐವರ್ ಬುಲ್, ಶ್ರೀ ಡಿ.ಎಚ್. ದಾಸಪ್ಪ, ಕಮಿಷನರ್ ಚೀಫ್ ಫಾರೆಸ್ಟ್ ಆಫೀಸರ್, ಸಿವಿಲ್ ಸರ್ಜನರು, ಎಗ್ರಿಕಲ್ಚರಲ್ ಆಫೀಸರು, ಜಿಲ್ಲಾ ವೈದ್ಯಾಧಿಕಾರಿಗಳು, ಪಿಡಬ್ಲ್ಯುಡಿ ಡಿವಿಜನಲ್ ಆಫೀಸರ್, ರಿಜಿಸ್ಟ್ರಾರ್ ಮತ್ತು ಶ್ರೀ ಐ.ಪಿ. ಕಾರ್ಯಪ್ಪನವರಿಂದ ಕೂಡಿದ ಒಂದು ಸಮಿತಿಯನ್ನು ನೇಮಿಸಲಾಯಿತು.

ಈ ಸಮಿತಿಯ ಸಭೆಯಲ್ಲಿ ೧೯೪೩ರ ಜನವರಿಯಿಂದ ಡಿಸೆಂಬರಿನವರೆಗೆ ಅಂದಾಜು ೮೧೯ ದನಗಳು ಸತ್ತಿವೆ ಎಂಬ ದಾಖಲೆಗಳು, ಭತ್ತವನ್ನು ಕೊಳ್ಳಲು ಬಂದ ವ್ಯಾಪಾರಸ್ಥ ಸಂಘಗಳ ಬಗ್ಗೆ ಮಾಹಿತಿ, ಸರಕಾರ ರೂಪಿಸಿದ ಬಜೆಟ್‌ನಿಂದ ರೈತರಿಗೆ ಯಾವುದೇ ಉಪಯೋಗವಿಲ್ಲದ್ದು, ವ್ಯವಸಾಯ ಇಲಾಖೆಯಿಂದ ಯಾವುದೇ ಪ್ರಯೋಜನವಾಗದಿರುವುದು, ಅನುಷ್ಠಾನಕ್ಕೆ ತರಬೇಕಾದ ಯೋಜನೆಗಳು, ಹೈಡ್ರೋ ಎಲೆಕ್ಟ್ರಿಕ್ ಶಕ್ತಿ ಉತ್ಪಾದನೆ, ಗೋಣಿಕೊಪ್ಪ ಮತ್ತು ಬಾಳೆಲೆ ರಸ್ತೆಯನ್ನು ಪ್ರತ್ಯೇಕಿಸಲು ಕಲ್ಲು ಹಾಕಬೇಕೆಂದು ಠರಾವು,



ದಕ್ಷಿಣ ಕೊಡಗಿನಿಂದ ಮಲಬಾರಿನವರೆಗೆ ರಸ್ತೆ ಮಾಡುವ ಬಗ್ಗೆ ಪರಿಶೀಲನೆಗೆ ಸರಕಾರ ರೂಪಾಯಿ ೫೦೦೦ ಕೊಡಬೇಕೆಂದು ಕೆ.ಕರುಂಬಯ್ಯನವರ ಠರಾವು, ಹಾಲಿನ ಉತ್ಪಾದನೆಗೆ ಫ್ರೇಜರ್‌ಪೇಟೆಯಲ್ಲಿ ಹಾಲು ಕೇಂದ್ರ ತೆರೆಯುವಂತೆ ಮನವಿ, ಕೊಡಗು ವಿದ್ಯಾ ಇಲಾಖೆಯ ಮೇಲ್ವಿಚಾರಣೆಯನ್ನು ಮತ್ತಷ್ಟು ಯಶಸ್ವಿಗೊಳಿಸಲು ಮತ್ತೊಬ್ಬ ವಿದ್ಯಾಧಿಕಾರಿಯನ್ನು ನೇಮಿಸಲು ಚಿಂತನೆ, ಮಡಿಕೇರಿ ಪಟ್ಟಣದ ಶುಚಿತ್ವ ಮತ್ತು ಅಭಿವೃದ್ಧಿಗೆ ರೂಪಾಯಿ ೧೫೦೦೦ ಬೇಕೆಂಬ ಮನವಿ, ಸಾರ್ವಜನಿಕ ಆರೋಗ್ಯದ ಬಗ್ಗೆ ಕಾಳಜಿ, ಮಲೇರಿಯಾ ನಿರೋಧಕ ಕಾರ್ಯಕ್ರಮ, ದನಗಳ ಸಾಕಾಣಿಕೆ ಕೇಂದ್ರ, ೧೯೩೫ನೇ ಆಕ್ಟ್ ಅನ್ವಯವಾಗದೆ ಪ್ರಾಂತೀಯ ಸ್ವಾಯತ್ತತೆಯನ್ನು ಜಾರಿಗೆ ತರಬೇಕೆಂಬ ಕೋರಿಕೆ. ಸಿಂಧ್ ಮತ್ತು ಇನ್ನಿತರ ಪ್ರಾಂತ್ಯಕ್ಕೆ ಸ್ವಾಯತ್ತತೆಯನ್ನು ಕೊಟ್ಟದ್ದರಿಂದ ಕೇಂದ್ರ ಸರಕಾರದಿಂದ ವಂತಿಗೆ ಪಡೆದಿದ್ದವು. ಹಾಗಾಗಿ ಕೊಡಗಿಗೂ ಕೂಡ ಸ್ವಾಯತ್ತತೆಯನ್ನು ಕೊಡಬೇಕೆಂಬ ಕೋರಿಕೆಯನ್ನು ವ್ಯವಸಾಯಗಾರರ ಸಂಘ ಸರಕಾರದ ಮುಂದಿಟ್ಟಿತು. ಬಜೆಟಿನಲ್ಲಿ ಪ್ರಸ್ತಾಪಿಸಲಾದ ಅನುದಾನವು ಯಾವ ಯಾವ ಕ್ಷೇತ್ರಕ್ಕೆ ಬೇಕೆಂಬ ಅಹವಾಲನ್ನು ಸಭೆಯ ನಡವಳಿಗಳಲ್ಲಿ ಚರ್ಚಿಸಲಾಗುತ್ತಿತ್ತು. ಅದೇ ರೀತಿ ಬಾಕಿ ಉಳಿದ ಕಂದಾಯದ ಭೂಮಿ ವ್ಯವಸಾಯಗಾರರ ಅಂದರೆ ಅಂಜಿಗೇರಿನಾಡಿಗೆ ಸಂಬಂಧಿಸಿದ ಭೂಮಿಯನ್ನು ವಿರಾಜಪೇಟೆಯಲ್ಲಿ ಹರಾಜು ಮಾಡುವ ನಡವಳಿ ತಪ್ಪು, ಇದರಿಂದ ರೈತರಿಗೆ ಹಾನಿಯಾಗುತ್ತದೆ ಎಂಬುದನ್ನು ಮನವರಿಕೆ ಮಾಡಿಕೊಡಲಾಯಿತು. ಅದೇ ರೀತಿ ಬಜೆಟಿನಲ್ಲಿ ಕುಡಿತದ ವಿರುದ್ಧ ಪ್ರಚಾರಮಾಡಲು ರೂ. ೫೦೦೦ ಮೀಸಲಿಡಬೇಕೆಂಬ ಚರ್ಚೆ, ಬಡ ವಿದ್ಯಾರ್ಥಿಗಳಿಗಾಗಿ ಕೊಡಗಿನಲ್ಲಿ ಕಾಲೇಜು ಮತ್ತು ಶಾಲೆಯ ವ್ಯಾಸಂಗಕ್ಕಾಗಿ ಮೊದಲನೇ ಗ್ರೇಡ್ ಕಾಲೇಜನ್ನು ಕೊಡಗಿನಲ್ಲಿ ಸ್ಥಾಪಿಸುವುದರ ಬಗ್ಗೆ ಇವೇ ಮುಂತಾದ ವಿಷಯಗಳ ಬಗ್ಗೆ ಕೊಡಗು ವ್ಯವಸಾಯಗಾರರ ಸಂಘ ತಮ್ಮ ಸಭೆಯಲ್ಲಿ ಚರ್ಚಿಸುತ್ತಿದ್ದರು. ಕೊಡಗು ನಾಡಿನ ಸಮಸ್ತ ಜನರ ಕೋರಿಕೆ ಮತ್ತು ಅಭಿವೃದ್ಧಿಯ ಪ್ರತಿನಿಧಿಯಾಗಿ ಕಾರ್ಯ ನಿರ್ವಹಿಸುತ್ತಿತ್ತು.

## ಅಖಿಲ ಭಾರತ ಕಾಂಗ್ರೆಸ್ ಅಧಿವೇಶನ –ಬೆಳಗಾವಿ

೧೯೨೪ರಲ್ಲಿ ಬೆಳಗಾಂನಲ್ಲಿ ನಡೆದ ಅಖಿಲ ಭಾರತ ಕಾಂಗ್ರೆಸಿನ ಅಧಿವೇಶನಕ್ಕೆ ದಕ್ಷಿಣ ಕೊಡಗು ಸೇರಿದಂತೆ ಒಟ್ಟು ೩೫ ನಾಗರಿಕರು

ಪಾಲ್ಗೊಂಡರು. ಅದರಲ್ಲಿ ಲೆಜಿಸ್ಲೇಟಿವ್ ಕೌನ್ಸಿಲ್‌ನ ೭ ಮಂದಿ ಸದಸ್ಯರು ಭಾಗವಹಿಸಿದ್ದರು. ಮಹಾತ್ಮ ಗಾಂಧೀಜಿಯವರ ಭಾಷಣದಿಂದ ಪ್ರಭಾವಿತರಾಗಿ ಈ ಕಾಂಗ್ರೆಸ್ ಅಧಿವೇಶನದಿಂದ ವಾಪಸಾದವರು ಜನವರಿ ೪, ೧೯೨೫ರಲ್ಲಿ ವಕೀಲ ವೆಂಕಪ್ಪಯ್ಯನವರ ಕಛೇರಿಯಲ್ಲಿ ಸಭೆ ಸೇರಿದರು. ಅಂದು ಕೊಡಗಿನಲ್ಲಿ ಕಾಂಗ್ರೆಸ್ಸಿನ ಸಮಿತಿ ಸ್ಥಾಪನೆಗೆ ಅಡಿಪಾಯ ಹಾಕಲಾಯಿತು. ಇದರ ಅಧ್ಯಕ್ಷರಾಗಿ ಪಾರೊಂಗಡ ಶ್ರೀ ಕುಶಾಲಪ್ಪನವರು ಆಯ್ಕೆಯಾದರು. ಕಾರ್ಯದರ್ಶಿಯಾಗಿ ಶ್ರೀ ವೆಂಕಪ್ಪಯ್ಯ, ಖಜಾಂಜಿಯಾಗಿ ಶ್ರೀ ಎಂ.ಎಂ.ಸಿದ್ದಿಕ್ ಆಯ್ಕೆಯಾದರು. ಕಾಂಗ್ರೆಸ್ ಸಮಿತಿಯ ಪರವಾಗಿ ಫೆಬ್ರವರಿ ೨೫, ೧೯೨೫ರಲ್ಲಿ ಸ್ವದೇಶಿ ವಸ್ತುಗಳಿಗೆ ಪುರಸ್ಕಾರ ನೀಡಲು ಮೊದಲು ಕೈಮಗ್ಗಕ್ಕೆ, ನೂಲು ನೇಯುವಿಕೆಗೆ ಆದ್ಯತೆಯನ್ನು ನೀಡುವ ಸಲುವಾಗಿ ವೀರಾಜಪೇಟೆಯಲ್ಲಿ ಒಂದು ಖಾದಿ ಭಂಡಾರ ಆರಂಭವಾಯಿತು. ಅಂದಿನಿಂದ ನೂಲು ನೇಯ್ದು ಬಟ್ಟೆಯನ್ನು ತಯಾರಿಸಲಾಯಿತು. ನೂಲು ನೇಯುವ ಚರಕವನ್ನು ಕಾಂಗ್ರೆಸಿನಿಂದ ನೀಡಲಾಯಿತು.

## ಕಲ್ಕತ್ತದಲ್ಲಿ ಅಖಿಲ ಭಾರತ ಕಾಂಗ್ರೆಸಿನ ಅಧಿವೇಶನ

೧೯೨೮ರಲ್ಲಿ ಕಲ್ಕತ್ತದಲ್ಲಿ ನಡೆದ ಕಾಂಗ್ರೆಸಿನ ವಾರ್ಷಿಕ ಅಧಿವೇಶನಕ್ಕೆ ಕೊಡಗಿನಿಂದ ೫ ಜನ ಪ್ರತಿನಿಧಿಗಳು ಹೋಗಿದ್ದರು. ಮೋತಿಲಾಲ್ ನೆಹರುರವರ ಅಧ್ಯಕ್ಷತೆಯಲ್ಲಿ ನಡೆದ ಈ ಅಧಿವೇಶನಕ್ಕೆ ಮುಖ್ಯವಾಗಿ ಪಾರೊಂಗಡ ಕುಶಾಲಪ್ಪ, ಸಿ.ವೆಂಕಪ್ಪಯ್ಯ, ಎಮ್.ಎಮ್.ಸಿದ್ದಿಕ್, ಪಂದ್ಯಂಡ ಐ.ಬೆಳ್ಯಪ್ಪ ಮತ್ತು ಕೊಳ್ಳಿಮಾಡ ಕರುಂಬಯ್ಯ, ಇವರಲ್ಲಿ ಸಿ.ವೆಂಕಪ್ಪಯ್ಯನವರು ಕಾಂಗ್ರೆಸ್‌ನ ಪ್ರತಿನಿಧಿಯಾಗಿ ಹೋಗಿದ್ದರೆ, ಪಾರೊಂಗಡ ಕುಶಾಲಪ್ಪ, ಪಂದ್ಯಂಡ ಬೆಳ್ಯಪ್ಪ, ಕೋಟೇರ ಚಿನ್ನಪ್ಪ ಮತ್ತು ಶ್ರೀಪತಿರಾವ್ ವ್ಯವಸಾಯಗಾರರ ಸಂಘದ ಪ್ರತಿನಿಧಿಗಳಾಗಿ ಭಾಗಿಯಾಗಿದ್ದರು. ಇವರು ಅಧಿವೇಶನವನ್ನು ಮುಗಿಸಿ ಹಿಂತಿರುಗಿ ಬರುವಾಗ ಜನವರಿ ೧೧, ೧೯೨೯ರಂದು ಕೊಡಗಿನ ತರುಣ, ಕಾಂಗ್ರೆಸ್‌ನ ಉತ್ಸಾಹಿ ಕಾರ್ಯಕರ್ತ ಪಾರೊಂಗಡ ಕುಶಾಲಪ್ಪನವರು ಮದ್ರಾಸಿನಲ್ಲಿ ತಮ್ಮ ೩೮ನೇ ವಯಸ್ಸಿನಲ್ಲಿ ವಿಧಿವಶರಾದರು. ಅಲ್ಲಿಗೆ ಸ್ವಾತಂತ್ರ್ಯ ಚಳುವಳಿಯ ಅದಮ್ಯ ಚೇತನದ ಒಂದು ಕೊಂಡಿ ಕಳಚಿತು. ಇವರ ಜ್ಞಾಪಕಾರ್ಥ ಪ್ರತಿ ತಿಂಗಳ ಕಡೆಯ ಭಾನುವಾರದಂದು ಪೊನ್ನಂಪೇಟೆಯ ಕುಶಾಲಪುರದಲ್ಲಿ ಧ್ವಜವಂದನೆ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು.



೧೯೨೯ರಲ್ಲಿ ಲಾರ್ಡ್ ಇರ್ವಿನ್ ಕೊಡಗು ಮತ್ತು ಮೈಸೂರು ಪ್ರಾಂತ್ಯಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಸ್ವತಂತ್ರ ಭಾರತದ ಕಲ್ಪನೆಯನ್ನು 'ಸ್ವರಾಜ್ಯವೇ ನಮ್ಮ ಜನ್ಮಸಿದ್ಧ ಹಕ್ಕು' ಎಂಬ ಮೂಲ ಧ್ಯೇಯವಾಕ್ಯದೊಂದಿಗೆ ೧೯೨೯ರ ಮಾರ್ಚ್ ೧೦ರಂದು ಮಡಿಕೇರಿಯಲ್ಲಿ ಕಾಂಗ್ರೆಸಿನ ಧುರೀಣರು ಸಭೆಯನ್ನು ನಡೆಸಿದರು. ಪ್ರತಿವರ್ಷ ಜನವರಿ ೨೬ರಂದು 'ಪೂರ್ಣ ಸ್ವರಾಜ್ಯ' ಎಂಬ ಘೋಷವಾಕ್ಯದೊಂದಿಗೆ ೧೯೩೦ರಿಂದ ೧೯೪೭ರವರೆಗೆ ವಿಶೇಷ ಕಾರ್ಯಕ್ರಮಗಳನ್ನು ಮಾಡುತ್ತಿದ್ದರು. ಸ್ವಾತಂತ್ರ್ಯ ಚಳುವಳಿಯಲ್ಲಿ 'ಸ್ವರಾಜ್ಯ ಕಲ್ಪನೆ' ವಿಶೇಷ ಸ್ಥಾನವನ್ನು ಪಡೆದಿತ್ತು. ಈ ಪರಿಕಲ್ಪನೆ ಗೋಣಿಕೊಪ್ಪ, ಹುದಿಕೇರಿ, ಪೊನ್ನಂಪೇಟೆ ಮತ್ತು ಇರ್ಪು ಕಡೆಗಳಲ್ಲಿ ಸಭೆ ಜರುಗುವಂತೆ ಮಾಡಿತು. ಗೋಣಿಕೊಪ್ಪದಲ್ಲಿ ಸ್ವರಾಜ್ಯ ಎಂಬ ಪರಿಕಲ್ಪನೆಯಲ್ಲಿ ಸಿ. ವೆಂಕಪ್ಪಯ್ಯ, ಮಂಡೇಪಂಡ ಚಿನ್ನಪ್ಪ, ಕೊಳ್ಳಿಮಾಡ ಕರುಂಬಯ್ಯ, ಮಾಚಿಮಂಡ ಮುತ್ತಣ್ಣ ಇವರು ಸಭೆಯನ್ನು ಉದ್ದೇಶಿಸಿ ಮಾತಾಡಿದ್ದರು.

## ಕುಶಾಲಪುರದಲ್ಲಿ ರಾಷ್ಟ್ರಧ್ವಜ ವಂದನೆ

ಪೊನ್ನಂಪೇಟೆಯಲ್ಲಿ ಒಂದು ವಿಶಾಲವಾದ ಮೈದಾನಕ್ಕೆ ಪಾರೊಂಗಡ ಕುಶಾಲಪ್ಪನವರ ಸ್ಮರಣಾರ್ಥ 'ಕುಶಾಲಪುರ' ಎಂದು ನಾಮಕರಣ ಮಾಡಲಾಯಿತು. ಈ ಕುಶಾಲಪುರದಲ್ಲಿ ದಿನಂಪ್ರತಿ ಸ್ವಾತಂತ್ರ್ಯ ಚಳುವಳಿಯ ಸಭೆ, ಸತ್ಯಾಗ್ರಹ ನೆರವೇರುತ್ತಿತ್ತು. ಅಂದು ಮೇ ೨೬, ೧೯೨೯ರಲ್ಲಿ ಮೊಟ್ಟಮೊದಲ ಬಾರಿಗೆ ಅಜ್ಜಿಕುಟ್ಟಿರ ಚಿನ್ನಪ್ಪ ಮತ್ತು ಮಲ್ಲೆಂಗಡ ಚಂಗಪ್ಪನವರು ಭಾರತದ ತ್ರಿವರ್ಣ ಧ್ವಜವನ್ನು ಹಾರಿಸಿ ಧ್ವಜಕ್ಕೆ ವಂದಿಸಿದರು. ಈ ಕಾರ್ಯಕ್ರಮದಲ್ಲಿ ಬಹಳಷ್ಟು ಸಂಖ್ಯೆಯಲ್ಲಿ ಸ್ವಯಂಸೇವಕರು ಭಾಗಿಯಾಗಿದ್ದರು. ರಾಜಕೀಯ ಧುರೀಣ ಬಿ.ಡಿ.ಗಣಪತಿಯವರು ಇದರಲ್ಲಿ ಪಾಲ್ಗೊಂಡಿದ್ದರು. ಈ ಸಭೆಯಲ್ಲಿ ಪ್ರತಿಯೊಬ್ಬರೂ ವಿದೇಶಿ ಬಟ್ಟೆಗಳನ್ನು ತ್ಯಜಿಸಿ ದಹಿಸಿದರು. ಅದರ ಬದಲಾಗಿ ಖಾದಿಯ ಬಟ್ಟೆಯನ್ನು ಧರಿಸಿದರು. ಈ ಸಭೆಯಲ್ಲಿ ಇನ್ನೊಂದು ಪ್ರಮಾಣವನ್ನೂ ಮಾಡಲಾಯಿತು. ಅದಾವುದೆಂದರೆ, ಮದ್ಯಪಾನವನ್ನು ತ್ಯಜಿಸುವುದು. ಇದು ಮುಂದೆ ಸ್ವಾತಂತ್ರ್ಯ ಹೋರಾಟಕ್ಕೆ ಭದ್ರಬುನಾದಿಯನ್ನು ಹಾಕಿತು. ಇದೇ ಸಮಯದಲ್ಲಿ ೧೯೨೯ರಲ್ಲಿ ವೀರಾಜಪೇಟೆಯಲ್ಲಿಯೂ ಸಭೆಯನ್ನು ಆಯೋಜಿಸಲಾಗಿತ್ತು. ಈ ಸಭೆಯಲ್ಲಿ ಮುಖ್ಯವಾಗಿ ಪಂದ್ಯಂಡ ಬೆಳ್ಯಪ್ಪ,

ಕೊಳ್ಳಿಮಾಡ ಕರುಂಬಯ್ಯ, ಜಮ್ಮಡ ಮಾದಪ್ಪ ಮತ್ತು ಇನ್ನಿತರ ಮುಖಂಡರು ಭಾಗವಹಿಸಿದ್ದರು. ಈ ಸಭೆಯಲ್ಲಿ ಅನೇಕ ಸ್ವಯಂಸೇವಕರು ನಾ ಮುಂದು–ತಾ ಮುಂದು ಎಂಬಂತೆ ಕಾಂಗ್ರೆಸ್‌ಗೆ ಸೇರ್ಪಡೆಯಾದರು. ಇವರಲ್ಲಿ ವಿ.ಆರ್.ತಮ್ಮಯ್ಯ ಮಗ್ಗುಲ ಗ್ರಾಮದವರು ಸಂಘಟನಾ ಕಾರ್ಯದಲ್ಲಿ ತೊಡಗಿದರು. ಇದರ ಫಲವಾಗಿ ಕಿತಾಗೇರಿಯಿಂದ ಕಾಳೆಂಗಡ ಚಿನ್ನಪ್ಪ ಮತ್ತು ಹಾತೂರಿನ ಒಕ್ಕಲಿಗರ ಅಣ್ಣಯ್ಯ, ಶ್ರೀಮಂಗಲದಿಂದ ಅಜ್ಜಮಾಡ ಮಾದಪ್ಪ, ಅಜ್ಜಮಾಡ ಅಯ್ಯಮ್ಮ ಮತ್ತು ಅಜ್ಜಿಕುಟ್ಟಿರ ಪೊನ್ನಪ್ಪ, ಪುಲಿಯಂಡ ಸುಬ್ಬಯ್ಯ ಕಾಂಗ್ರೆಸ್‌ಗೆ ಸೇರ್ಪಡೆಯಾದರು.

## ಮಡಿಕೇರಿಯ ಕೋಟೆಯ ಮೇಲೆ ತ್ರಿವರ್ಣ ಧ್ವಜದ ಹಾರಾಟ

ಡಿಸೆಂಬರ್ ೧೭, ೧೯೩೦ರಲ್ಲಿ ಅಖಂಡ ಭಾರತದ ಇತಿಹಾಸದ ಪುಟದಲ್ಲಿ ಎಲ್ಲರೂ ಕೊಡಗಿನತ್ತ ಮುಖ ಮಾಡುವಂತಾಯ್ತು. ಅಂದು ಮಡಿಕೇರಿಯ ಸುತ್ತಮುತ್ತ ಮತ್ತು ಕೋಟೆಯ ಬಳಿ ಬಿಗಿ ಬಂದೋಬಸ್ತ್‌ನಿಂದ ಕೂಡಿದ ಪಹರೆಯೊಂದು ಕಾಯುತ್ತಿತ್ತು. ಇದರ ಮಧ್ಯೆ ಹೋರಾಟದ ಕಲಿಗಳಾದ ಮಲ್ಲೆಂಗಡ ಚಂಗಪ್ಪ, ಬಿ.ಜಿ.ಗಣಪಯ್ಯ, ಮಂಡೇಪಂಡ ಕಾರ್ಯಪ್ಪ ಬ್ರಿಟಿಷ್ ಪಹರೆಯ ಕಣ್ಣುತಪ್ಪಿಸಿ, ಮಡಿಕೇರಿ ಕೋಟೆಯಲ್ಲಿ ವಿರಾಜಮಾನವಾಗಿ ಹಾರಾಡುತ್ತಿದ್ದ ಬ್ರಿಟಿಷರ ಯೂನಿಯನ್ ಜ್ಯಾಕ್ ಧ್ವಜವನ್ನು ಇಳಿಸಿ, ಭಾರತದ ತ್ರಿವರ್ಣ ಧ್ವಜವನ್ನು ಹಾರಿಸಿ ಧ್ವಜವಂದನೆಯನ್ನು ಮಾಡಿದರು. ಸ್ವಾತಂತ್ರ್ಯದ ಹೋರಾಟದ ಪ್ರಮುಖ ಘಟನೆಗಳಲ್ಲಿ ಇದು ಸಾಕ್ಷಿಯಾಗಿ ಕೊಡಗಿನ ಹೊರಭಾಗದ ಚಳುವಳಿಗಾರರ ಮೆಚ್ಚುಗೆಗೆ ಪಾತ್ರವಾಯಿತು. ಹೋರಾಟದ ಕಲಿಗಳನ್ನು ಕಾರಾಗೃಹಕ್ಕೆ ತಳ್ಳಲಾಯಿತು.

## ಪೊನ್ನಂಪೇಟೆ ಜಮೀನ್ದಾರರ ಸಂಘದ ಸಮಾವೇಶ

ಜಮೀನ್ದಾರರ ಸಂಘದ ವಾರ್ಷಿಕ ಸಮಾವೇಶವನ್ನು ೧೯೨೯ರಲ್ಲಿ ಪೊನ್ನಂಪೇಟೆಯಲ್ಲಿ ಆಯೋಜಿಸಲಾಗಿತ್ತು. ಈ ಸಮಾವೇಶಕ್ಕೆ ಅಂದು ಸ್ವಾತಂತ್ರ್ಯ ಹೋರಾಟದಲ್ಲಿ ರಾಷ್ಟ್ರೀಯ ಮಟ್ಟದಲ್ಲಿ ಹೆಸರು ಪಡೆದಿದ್ದ ಗಂಗಾಧರ್ ರಾವ್, ಡಾ.ಎನ್.ಎಸ್.ಹರ್ಡೀಕರ್ ಮತ್ತು ಶ್ರೀನಿವಾಸ ರಾವ್ ಕೌಜಲಗಿ, ಸದಾಶಿವರಾವ್, ಆರ್.ಆರ್.ದಿವಾಕರ್ ಮುಖ್ಯ ಭಾಷಣಕಾರರಾಗಿ ಭಾಗವಹಿಸಿದ್ದರು. ತಮ್ಮ ಭಾಷಣದ ಮೂಲಕ ಎಲ್ಲರಲ್ಲಿ ರಾಷ್ಟ್ರೀಯತೆಯ ಭಾವವನ್ನು ಬಿತ್ತಿದರು. ಈ



ಸಮಾವೇಶದಲ್ಲಿ ಪರದೇಶಿ ಸರಂಜಾಮುಗಳನ್ನು ಬಹಿರಂಗವಾಗಿ ಸುಡಲಾಯಿತು. ಇದೇ ಸಂದರ್ಭದಲ್ಲಿ ಶ್ರೀ ಕೃಷ್ಣಯ್ಯರವರು ತಮ್ಮ ಸರ್ಜ್ ಸೂಟನ್ನು ಅಲ್ಲೇ ಕಳಚಿ ಸುಟ್ಟರು. ಸ್ವಾತಂತ್ರ್ಯ ಸಿಗುವವರೆಗೆ ನಾನು ಖಾದಿಯನ್ನು ಮಾತ್ರ ತೊಡುವೆನು ಎಂದು ಶಪಥ ಮಾಡಿದರು. ಆಲೂರು ವೆಂಕಟರಾವ್, ಮುದವೀಡು ಕೃಷ್ಣರಾವ್, ಕಮಲಾದೇವಿ ಚಟ್ಟೋಪಾಧ್ಯಾಯ ತಮ್ಮ ಭಾಷಣಗಳ ಮೂಲಕ ಹೋರಾಟವನ್ನು ಚುರುಕುಗೊಳಿಸುವಂತೆ ಮಾಡಿದರು. ಈ ಸಮಾವೇಶಕ್ಕೆ ಬಿಸಿರಕ್ತದ ಉತ್ಸಾಹಿ ಯುವಕ ಚಕ್ಕೇರ ಬಿ.ಮೊಣ್ಣಯ್ಯ ಸಾಕ್ಷಿಯಾಗಿದ್ದರು. ಮುಂದೆ ಸ್ವಾತಂತ್ರ್ಯ ಹೋರಾಟಗಾರರ ಹೆಸರಲ್ಲಿ ಇವರ ಹೆಸರು ಅಚ್ಚಳಿಯದಂತೆ ಉಳಿಯಿತು.

## ಹುತ್ತರಿ ಹಬ್ಬವನ್ನು ನಿಲ್ಲಿಸಿದ್ದು

ಕೊಡಗಿನ ಪ್ರಮುಖ ಹಬ್ಬಗಳಲ್ಲಿ ಹುತ್ತರಿ ಹಬ್ಬವೂ ಒಂದು. ಇದು ಒಂದು ಸುಗ್ಗಿ ಹಬ್ಬ. ಹೊಸ ಅಕ್ಕಿಯನ್ನು ಬರಮಾಡಿಕೊಳ್ಳುವ ಹಬ್ಬ. ೧೯೩೦ರ ನವೆಂಬರ್ ೨೮ರಂದು ಕಾಂಗ್ರೆಸ್ ಪಾರ್ಟಿಯು ಆ ವರ್ಷ ಹುತ್ತರಿ ಹಬ್ಬವನ್ನು ಬಿಡಬೇಕೆಂದು ಜನರಲ್ಲಿ ಮನವಿ ಮಾಡಿತು. ಅಮ್ಮತ್ತಿ ನಾಡಿನಲ್ಲಿ ಬಿಳುಗುಂದದ ಐಯಂಡ ಕಾರ್ಯಪ್ಪ ಕಾಂಗ್ರೆಸ್ ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದರು. ಈ ಸಂದರ್ಭದಲ್ಲಿ ಆ ವರ್ಷ ಹುತ್ತರಿ ಹಬ್ಬದ ಆಚರಣೆಯನ್ನು ಬಿಡಬೇಕೆಂದು ಕೋರಿಕೊಳ್ಳಲಾಯಿತು. ಇದರ ಪ್ರಭಾವದಿಂದ ಹುತ್ತರಿ ಹಬ್ಬದ ನಂತರ ಮಾಡುವ ಮಂದ್‌ಗಳಲ್ಲಿ ಕೋಲಾಟವನ್ನು ಬಿಡಲಾಯಿತು. ಅದರ ಬದಲಿಗೆ ಭಾರತದ ತ್ರಿವರ್ಣ ಧ್ವಜವನ್ನು ಹಾರಿಸಿ ಧ್ವಜವಂದನೆಯನ್ನು ಮಾಡುವಂತೆ ಪ್ರೇರೇಪಿಸಲಾಯಿತು. ಸಾವಿರಾರು ಮಂದಿ ಸೇರುವ ಹುತ್ತರಿ ಕೋಲಾಟದ ದಿನದಂದು ನಾಗರಿಕರು ಖಾದಿ ಬಟ್ಟೆಯನ್ನು ತೊಡುವ ಸಂಕಲ್ಪ ಮಾಡಿದರು. ಮಲೆನಾಡು ಬಂದೆ ಇಲ್ಲಿ ೫೦೦೦ಕ್ಕೂ ಹೆಚ್ಚು ಜನ ಸೇರಿದರೂ ಕೋಲಾಟವನ್ನು ಆಡದೆ ಧ್ವಜನಮನ ಮಾಡಿದರು. ಅದೇ ರೀತಿ ಅಂಜಿಗೇರಿ ನಾಡು, ತಾವಳಗೇರಿ, ಹರಿಹರ, ನಾಣಯ್ಯ ಸಾಣೆ, ಪುಟ್ಟ ಬಾಣೆ ಮತ್ತು ಇನ್ನಿತರ ಮಂದಿರಗಳಲ್ಲಿ ಕೋಲಾಟವನ್ನು ನಿಲ್ಲಿಸಲಾಗಿತ್ತು.

## ಮದ್ಯಪಾನ ನಿಷೇಧ ಸತ್ಯಾಗ್ರಹ

೧೯೩೦ರಲ್ಲಿ ಇಡೀ ಭಾರತವನ್ನೇ ನಿಬ್ಬೆರಗಾಗಿಸುವ ಘಟನೆ ಕೊಡಗಿನಲ್ಲಿ

ನಡೆಯಿತು. ಅದಕ್ಕೆ ಕಾರಣ ೧೯೨೮ರಲ್ಲಿ ಮಹಾತ್ಮ ಗಾಂಧಿಯವರು ಮದ್ಯಪಾನವನ್ನು ಸಮಾಜಘಾತುಕ ಶಕ್ತಿ ಎಂದು ಪ್ರಚಾರಪಡಿಸಿದ್ದು. ಸ್ವಾತಂತ್ರ್ಯ ಚಳುವಳಿ ಕೊಡಗಿನಲ್ಲಿ ತೀವ್ರಗತಿಯಲ್ಲಿ ಮುಂದುವರೆದಿದ್ದ ಸಮಯವದು. ಬ್ರಿಟಿಷ್ ಸರಕಾರದ ವಿರುದ್ಧ ಕೊಡಗಿನಲ್ಲಿ ಅಸಹಕಾರ ಚಳುವಳಿ ಭುಗಿಲೆದ್ದಿತು. ೧೯೨೯ರಲ್ಲಿ ಕಾಂಗ್ರೆಸ್ಸಿನ ಸ್ವಯಂಸೇವಕರು ಮದ್ಯ ಸಾರಾಯಿ ಅಂಗಡಿಗಳ ಮುಂದೆ ಪ್ರತಿಭಟನೆ ಮತ್ತು ಪಿಕೆಟಿಂಗ್ ಆರಂಭಿಸಿದರು. ಅದರಲ್ಲೂ ಮುಖ್ಯವಾಗಿ ವೀರಾಜಪೇಟೆ, ಪೊನ್ನಂಪೇಟೆ, ಹುದಿಕೇರಿ, ಗೋಣಿಕೊಪ್ಪದಲ್ಲಿ ಕಾವು ಹೆಚ್ಚಾಗಿತ್ತು. ಕೊಡಗಿನ ಮುಖ್ಯ ಕೇಂದ್ರ ಮಡಿಕೇರಿಯವರೆಗೆ ಹಬ್ಬಿತು. ದಕ್ಷಿಣ ಕೊಡಗಿನಲ್ಲಿ ಕಿಚ್ಚನ್ನು ಹಚ್ಚಿದ ಕಲಿಗಳೇ ಮುಂದುವರಿದು ಮಡಿಕೇರಿಯವರೆಗೆ ಕೊಂಡೊಯ್ದರು. ಏಕೆಂದರೆ ಕೊಡಗಿನಾದ್ಯಂತ ಸತ್ಯಾಗ್ರಹ ಚಳುವಳಿಯನ್ನು ವ್ಯಾಪಿಸುವುದು ಸತ್ಯಾಗ್ರಹಿಗಳ ಉದ್ದೇಶವಾಗಿತ್ತು. ಬ್ರಿಟಿಷ್ ಸರಕಾರದ ವಿರುದ್ಧ ಕೊಡಗಿನಲ್ಲಿ ಪಂದ್ಯಂಡ ಬೆಳ್ಯಪ್ಪ, ಪಾರೊಂಗಡ ಕುಶಾಲಪ್ಪ ಇನ್ನೂ ಅನೇಕರು ಮಾಡು ಇಲ್ಲವೇ ಮಡಿ ಎಂಬ ಧ್ಯೇಯಘೋಷದೊಂದಿಗೆ ಹೋರಾಟದಲ್ಲಿ ನಿರತರಾದರು.

ಕೊರವಂಡ ಪೊನ್ನಪ್ಪನವರ ಅಧ್ಯಕ್ಷತೆಯಲ್ಲಿ ಮದ್ಯಪಾನ ವಿರುದ್ಧ ಹೋರಾಟದ ಸಭೆಯನ್ನು ನಡೆಸಲಾಯಿತು. ೧೯೨೯ರಲ್ಲಿ ಹೋರಾಟ ಆರಂಭವಾದಾಗ ೨೬೪೨ ಗ್ಯಾಲನ್ ಸಾರಾಯಿ ಖರ್ಚಾಗುತ್ತಿತ್ತು. ೧೯೩೦ರ ವೇಳೆಗೆ ಇದು ೨೯ ಗ್ಯಾಲನ್‌ನಷ್ಟಾಗಿತ್ತು. ಒಂದು ಪ್ರಸಂಗವನ್ನು ಇಲ್ಲಿ ನೆನಪಿಸಲೇಬೇಕು. ಕೊಡಗಿನ ಪ್ರಮುಖ ಹಬ್ಬದಲ್ಲಿ ಒಂದಾದ ಕೈಲ್ ಪೋಳ್ದ್ ಹಬ್ಬದಲ್ಲಿ ಕೇರಳದ್ದೂ ಸೇರಿ ೮೦೦ ಗ್ಯಾಲನ್ ಮದ್ಯವನ್ನು ವೀರಾಜಪೇಟೆಗೆ ತಂದಿರಿಸಲಾಗಿತ್ತು. ಆದರೆ ಮದ್ಯಪಾನ ನಿಷೇಧ ಹೋರಾಟದ ಫಲವಾಗಿ, ಇನ್ನೂರು ಗ್ಯಾಲನ್ ಮಾತ್ರ ಖರ್ಚಾಯ್ತು. ಅದೇ ರೀತಿ ಗೋಣಿಕೊಪ್ಪದಲ್ಲಿ ೩೦೦ ಗ್ಯಾಲನ್ ಮದ್ಯದಲ್ಲಿ ೩೬ ಗ್ಯಾಲನ್ ಮಾತ್ರ ಖರ್ಚಾಯ್ತು. ಪೊನ್ನಂಪೇಟೆ ಮತ್ತು ಬಿಟ್ಟಂಗಾಲದಲ್ಲಿ ಗುತ್ತಿಗೆ ತೆಗೆದುಕೊಳ್ಳುವವರು ಗುತ್ತಿಗೆಯನ್ನು ನಿಲ್ಲಿಸಿಬಿಟ್ಟರು. ಇದರ ಪರಿಣಾಮ ಬ್ರಿಟಿಷ್ ಸರಕಾರವು ಕ್ರಮವನ್ನೂ ಕೈಗೊಂಡಿತ್ತು. ಕೊಡಗಿನ ಜನತೆ ಪರದೇಶಿ ಮದ್ಯವನ್ನು ತ್ಯಜಿಸಿದರು. ಮದ್ಯಪಾನ ಮತ್ತು ಅದರಿಂದ ಆಗುವ ದುಷ್ಪರಿಣಾಮದ ಬಗ್ಗೆ ಬಹಳಷ್ಟು ಜನಜಾಗೃತಿಯ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಅಲ್ಲಲ್ಲಿ ಭಿತ್ತಿಚಿತ್ರಗಳು, ಚಳುವಳಿ ಸತ್ಯಾಗ್ರಹಗಳು ನಡೆದವು. ಇದರ ಪರಿಣಾಮವಾಗಿ ಮದ್ಯಪಾನ ಮಾರಾಟಗಾರರು ನಷ್ಟದಿಂದ ಬಳಲಿದರು.



೧೯೩೦ರ ಹೊತ್ತಿಗೆ ವಿರಾಜಪೇಟೆ, ಅಮ್ಮತ್ತಿ, ಶ್ರೀಮಂಗಲ, ಕುಟ್ಟ, ಹುದಿಕೇರಿ ಮತ್ತು ನಾಲ್ಕು ವಿಭಾಗದಲ್ಲಿ ಪಿಕೆಟಿಂಗ್ ನಡೆದವು. ಕುಟ್ಟ ಭಾಗದಲ್ಲಿ ಮದ್ಯದ ಅಂಗಡಿಗಳು ಶಾಶ್ವತವಾಗಿ ಮುಚ್ಚಿದವು.

ಅಂದು ಬ್ರಿಟಿಷ್ ಸರಕಾರವು ತನ್ನ ಆದಾಯದ ಮೂಲವಾಗಿ ಮದ್ಯ ಮಾರಾಟವನ್ನು ಪ್ರೋತ್ಸಾಹಿಸಿತ್ತು. ಇಂದು ಮದ್ಯಪಾನವು ಕೊಡವರ ಸಂಸ್ಕೃತಿಯ ಭಾಗವಾಗಿದೆ ಎಂದು ಹೀಗಳೆಯುವ ಬಹಳಷ್ಟು ಜನರಿದ್ದಾರೆ. ಆದರೆ ಇತಿಹಾಸದ ಪುಟದಲ್ಲಿ ರಕ್ತಚರಿತ್ರೆಯನ್ನು ಬರೆದ ಕೊಡಗಿನ ಚಳುವಳಿ ಮತ್ತು ಸತ್ಯಾಗ್ರಹ ಮದ್ಯಪಾನ ವಿರೋಧಕ್ಕೆ ಉಂಟಾಗಿತ್ತು ಎಂದರೆ ಕೊಡಗಿನಲ್ಲಿ ಮದ್ಯಪಾನಕ್ಕಿದ್ದ ಸ್ಥಾನವನ್ನು ನಾಗರಿಕ ಸಮಾಜ ಇಂದು ಊಹಿಸಬೇಕಾಗಿದೆ. ಸಂತೆ–ಸಂತೆಗಳಲ್ಲಿ ನಿಂತು ಭಿತ್ತಿಚಿತ್ರ, ಉಪವಾಸ ಸತ್ಯಾಗ್ರಹ, ಪಿಕೆಟಿಂಗ್ ನಡೆಯುತ್ತಿದ್ದುದು ಇದೇ ಮದ್ಯಪಾನ ನಿಷೇಧಕ್ಕೆ. ಕೊಡಗಿನಲ್ಲಿ ಮದ್ಯ ಮಾರಾಟದಿಂದ ಬಹಳಷ್ಟು ಲಾಭವನ್ನು ಪಡೆದಿದ್ದ ಬ್ರಿಟಿಷ್ ಸರಕಾರ ಮದ್ಯ ನಿಷೇಧದ ಹೋರಾಟವನ್ನು ನಿರ್ಬಂಧಿಸಲು ಸಾಕಷ್ಟು ಕಾನೂನನ್ನು ಹೋರಾಟ ನಿರತರ ಮೇಲೆ ಹೇರಲಾಯಿತು. ಮದ್ಯಪಾನದ ಹವ್ಯಾಸ ನಾಗರಿಕ ಸಮಾಜವನ್ನು ಹಾಳುಗೆಡವುತ್ತಿತ್ತು. ಬ್ರಿಟಿಷರಿಗೆ ಮದ್ಯ ಮಾರಾಟದಿಂದ ಬಹಳಷ್ಟು ಲಾಭ ಸಿಗುತ್ತಿತ್ತು. ಯಾವುದೇ ಕಾರಣಕ್ಕೂ ಅವರು ಮದ್ಯಪಾನ ನಿಷೇಧ ಮಾಡಲು ಸಾಧ್ಯವಿರಲಿಲ್ಲ. ಇದನ್ನು ಅರಿತ ಸತ್ಯಾಗ್ರಹಿಗಳು ಗ್ರಾಮ–ಗ್ರಾಮ, ಆಟದ ಮೈದಾನ, ಸಂತೆಗಳಲ್ಲಿ ಚಳುವಳಿ, ಧರಣಿ, ಭಾಷಣಗಳ ಮೂಲಕ ಜನಜಾಗೃತಿ ಕಾರ್ಯಕ್ರಮವನ್ನು ಹಮ್ಮಿಕೊಂಡರು.

ತತ್ವಪದಗಳ ಕಲಾವಿದರನ್ನು ಚಳುವಳಿಯಲ್ಲಿ ಭಾಗವಹಿಸಲು ಪ್ರೇರೇಪಿಸಲಾಯಿತು. ಜನವರಿ ೧೪, ೧೯೩೧ರಲ್ಲಿ ವೀರಾಜಪೇಟೆಯಲ್ಲಿ ಮದ್ಯಪಾನ ನಿಷೇಧ ಸತ್ಯಾಗ್ರಹ ಚಳುವಳಿ ನಡೆಯಿತು. ಅದೇ ವರ್ಷ ಮಡಿಕೇರಿಯಲ್ಲಿ ಮದ್ಯಪಾನ ವಿರೋಧಿ ಚಳುವಳಿ ನಡೆಯಿತು, ಗೋಣಿಕೊಪ್ಪದಲ್ಲೂ ಕೂಡ ನಡೆಯಿತು. ಸುಮಾರು ೪೦೦ ಮಹಿಳೆಯರು, ಹೋರಾಟ ನಿರತ ಸತ್ಯಾಗ್ರಹಿಗಳು ಬಂಧನಕ್ಕೆ ಒಳಗಾದರು. ೧೯೩೧ರ ಗಾಂಧೀ–ಇರ್ವಿನ್ ಒಪ್ಪಂದದವರೆಗೆ ಹೋರಾಟ ಉಗ್ರ ಸ್ವರೂಪದಲ್ಲಿತ್ತು. 'ಸರ್ಪಾಸ್ತ್ರ' ಎಂಬ ಹಸ್ತಪ್ರತಿಯ ಪತ್ರಿಕೆಯು ಗುಪ್ತವಾಗಿ ದೇಶಭಕ್ತರ ಜನರಲ್ಲಿ ಜಾಗೃತಿ ಮೂಡಿಸಲು ಪಸರಿಸತೊಡಗಿತು.

ಮಾರ್ಚ್ ೨೯, ೧೯೩೦ರಲ್ಲಿ ಕೊಡಗಿನ ಗಾಂಧಿ ಎಂದೇ ಖ್ಯಾತನಾಮರಾದ ಪಂದ್ಯಂಡ ಬೆಳ್ಯಪ್ಪನವರು ಸೇರಿದಂತೆ ೯ ಮಂದಿ ಸದಸ್ಯರ ಸತ್ಯಾಗ್ರಹ ಸಮಿತಿ ರಚಿಸಲಾಯಿತು. ಮದ್ಯಪಾನ ವಿರೋಧದ ಮುಖ್ಯ ರೂವಾರಿ ಪಂದ್ಯಂಡ ಬೆಳ್ಳಿಯಪ್ಪ ಸರಕಾರಕ್ಕೆ ಮದ್ಯದ ಅಂಗಡಿಯನ್ನು ಮುಚ್ಚಬೇಕೆಂಬ ಸೂಚನೆ ನೀಡಿದರು. ೧೯೩೦ರಲ್ಲಿ ಹೋರಾಟ ಉಗ್ರ ಸ್ವರೂಪವನ್ನು ಪಡೆಯಿತು. ಇದರ ಪರಿಣಾಮವಾಗಿ ಎಚ್.ಆರ್.ಕೃಷ್ಣಯ್ಯ ವಿರಾಜಪೇಟೆಯಲ್ಲಿ ಪಿಕೆಟಿಂಗ್ ಮಾಡುವಾಗ ಬಂಧಿತರಾದರು. ಅದೇ ಸಮಯದಲ್ಲಿ ಬಿಳುಗುಂದದಲ್ಲಿ ಅಬ್ದುಲ್ ಗಫಾರ್ ಖಾನ್ ಅವರು ಕೂಡ ಬಂಧಿತರಾದರು. ಪಂದ್ಯಂಡ ಬೆಳ್ಳಿಯಪ್ಪ ಮತ್ತು ಕೊಳ್ಳಿಮಾಡ ಕರುಂಬಯ್ಯ ವಿರಾಜಪೇಟೆಯಲ್ಲಿ ಬಂಧಿತರಾದರು. ರಾಜಕೀಯವಾಗಿ ಕೊಡಗಿನಲ್ಲಿ ಸ್ವಾತಂತ್ರ್ಯ ಚಳುವಳಿಯಲ್ಲಿ ಆದ ಮೊದಲ ಬಂಧನ ಇದಾಗಿದೆ. ಬಂಧಿತ ಮುಖಂಡರನ್ನು ಆರು ತಿಂಗಳ ಕಠಿಣ ಸಜೆಗೆ ಒಳಪಡಿಸಲಾಯಿತು. ಈ ಸಂದರ್ಭದಲ್ಲಿ ಕೊಡಗು ಪತ್ರಿಕೆಯ ಸಂಪಾದಕತ್ವವನ್ನು ಕೋಟೆರ ಚಂಗಪ್ಪನವರು ನಿರ್ವಹಿಸಿದರು.

ಸ್ವಾತಂತ್ರ್ಯ ಚಳುವಳಿಯಲ್ಲಿ ಮೊದಲ ಬಾರಿಗೆ ದಕ್ಷಿಣ ಕೊಡಗಿನಲ್ಲಿ ಧುಮುಕಿದ ಮಹಿಳಾ ಮುಖಂಡೆ ಎಂದರೆ ಕೋಟೆರ ಅಕ್ಕವ್ವ. ಇವರಿಂದ ಪ್ರೇರಿತರಾದ ಸಹೋದರಿಯರಾದ ಕೋದಂಡ ಚಿತ್ರ ಮತ್ತು ಲತಾ ಎನ್ನುವ ಭರತನಾಟ್ಯ ಕಲಾವಿದರು ಮಡಿಕೇರಿಯಲ್ಲಿ ಸತ್ಯಾಗ್ರಹ ಚಳುವಳಿಯಲ್ಲಿ ಧುಮುಕಿದರು. ಇದರಲ್ಲಿ ಮುಖ್ಯವಾಗಿ ದಕ್ಷಿಣ ಕೊಡಗಿನ ಭಾಗದಲ್ಲಿ ಅಜ್ಜಮಾಡ ಮಾದಪ್ಪ, ಐನಂಡ ಕಾರ್ಯಪ್ಪ, ಶ್ರೀಮತಿ ಕೋಟೇರ ಅಕ್ಕವ್ವ ಮದ್ಯವಿರೋಧಿ ಚಳುವಳಿಯಲ್ಲಿ ಮುಂಚೂಣಿಯಲ್ಲಿದ್ದರು.

## ಹುದಿಕೇರಿಯಲ್ಲಿ ಸತ್ಯಾಗ್ರಹ

ಹುದಿಕೇರಿ ಎಂಬ ಸ್ಥಳ ಪೊನ್ನಂಪೇಟೆಗೆ ಸಮೀಪದಲ್ಲಿದೆ. ಅಂದು ಕೊಡಗಿನ ಬೈಲಹೊಂಗಲವೆಂದೇ ಖ್ಯಾತಿಯನ್ನು ಪಡೆದಿದ್ದ ಸ್ಥಳವಿದು. ಹುದಿಕೇರಿಯಲ್ಲಿ ಹಚ್ಚಿದ ಸತ್ಯಾಗ್ರಹದ ಕಿಚ್ಚು ವ್ಯಾಪಕವಾಗಿ ಹರಡುವಂತೆ ಮಾಡಿದ್ದು ಶ್ರೀ ಪಂದ್ಯಂಡ ಬೆಳ್ಯಪ್ಪ ಮತ್ತು ಕೊಳ್ಳಿಮಾಡ ಸಿ.ಕರುಂಬಯ್ಯನವರು. ಪದೇಪದೇ ಹುದಿಕೇರಿಯಲ್ಲಿ ಸಂತೆ–ಸಂತೆಯಲ್ಲಿ ನಿಂತು ಭಿತ್ತಿಪತ್ರ ಹಂಚಿಕೆ, ಜನಜಾಗೃತಿಯ ಭಾಷಣಗಳನ್ನು ಮಾಡುತ್ತಿದ್ದರು. ಪೊನ್ನಂಪೇಟೆ, ವೀರಾಜಪೇಟೆ, ಗೋಣಿಕೊಪ್ಪ, ಮಡಿಕೇರಿಗಳಲ್ಲಿ ಮದ್ಯಪಾನದ ವಿರುದ್ಧ ಜಾಗೃತಿಯ ಕಾರ್ಯಕ್ರಮ, ಸತ್ಯಾಗ್ರಹ ನಡೆಯುತ್ತಿದ್ದ ಸಮಯ! ಸತ್ಯಾಗ್ರಹಿಗಳ ಸಮಾವೇಶ, ಸ್ವಾತಂತ್ರ್ಯ ಹೋರಾಟದ ಕಲಿಗಳ ಸಭೆ, ಯುವಕರಿಗೆ ತರಬೇತಿ, ಸಂತೆ–ಸಂತೆಗಳಲ್ಲಿ ಜನಜಾಗೃತಿ ಕಾರ್ಯಕ್ರಮ, ಪಿಕೆಟಿಂಗ್, ಸತ್ಯಾಗ್ರಹಗಳು ಅನುದಿನದ ದೃಶ್ಯವಾಗಿದ್ದವು.



ಈ ಸತ್ಯಾಗ್ರಹದಲ್ಲಿ ಮಹಿಳೆಯರು, ಯುವಕ ಯುವತಿಯರು, ವಯೋವೃದ್ಧರು ಬಂದು ಸೇರಿ ಸ್ವಾತಂತ್ರ್ಯ ಹೋರಾಟದ ಮೈನವಿರೇಳುವ ಭಾಷಣಗಳನ್ನು ಆಲಿಸುತ್ತಿದ್ದರು. ಇದರಿಂದ ಪ್ರೇರಿತರಾಗಿ ಅನೇಕರು ಸತ್ಯಾಗ್ರಹದಲ್ಲಿ ಭಾಗಿಯಾಗುತ್ತಿದ್ದರು. ಇದೇ ಊರಿನ ಆಸುಪಾಸಿನಲ್ಲಿ ಇದ್ದ ಕೋಳೇರ ಕಾವೇರಿ ಮತ್ತು ಪೋಡಮಾಡ ಜಾನಕಿ ಎಂಬ ತರುಣಿಯರು ಸತ್ಯಾಗ್ರದ ಭಾಷಣವನ್ನು ಕೇಳಿ ತಾವೂ ಕೂಡ ಹೋರಾಟದ ಭಾಗವಾಗಬೇಕೆಂದು ಬಯಸಿದರು. ಅವರ ವಿವರವನ್ನು ಮುಂದಿನ ಪುಟಗಳಲ್ಲಿ ನೀಡಲಾಗಿದೆ. ದಿನವೂ ಹೋರಾಟದ ಕಿಚ್ಚು ಹಬ್ಬುತ್ತಿತ್ತು. ಇದನ್ನು ಗಾಂಧೀವಾದಿಗಳ ಮೈದಾನ ಎನ್ನುತ್ತಿದ್ದರು. ಮದ್ಯಸೇವನೆಯ ದುಷ್ಪರಿಣಾಮಗಳು, ಅದರ ಬಗ್ಗೆ ಜನಜಾಗೃತಿಗಳು ನಡೆಯುತ್ತಿದ್ದವು. ಇಲ್ಲಿ ನಡೆಯುತ್ತಿದ್ದ ಜಾಗೃತಿಯಿಂದ ಅನೇಕ ಜನರ ಮನಃಪರಿವರ್ತನೆಯಾಯಿತು ಎಂಬುದನ್ನು ಇತಿಹಾಸಜ್ಞ ಸೂರ್ಯನಾಥ್ ಕಾಮತ್ ಅವರು ತಮ್ಮ ಕೃತಿ 'ಸ್ವಾತಂತ್ರ್ಯ ಹೋರಾಟ'ದಲ್ಲಿ ದಾಖಲಿಸಿದ್ದಾರೆ. ಮದ್ಯಪಾನ ನಿಷೇಧ ಸತ್ಯಾಗ್ರಹಕ್ಕೆ ಆಸುಪಾಸಿನ ರೈತರು ಬಂದು ಜಮಾಯಿಸುತ್ತಿದ್ದರು. ಈ ಸಂದರ್ಭದಲ್ಲಿ ತತ್ವಪದಗಳ ಮೂಲಕ ಜನರನ್ನು ಆಕರ್ಷಿಸುತ್ತಿದ್ದವರು ಬೇಲೂರು ಕೇಶವದಾಸರು. ಇವರ ತತ್ವಪದಗಳನ್ನು ಕೇಳಿದ ಬಹಳಷ್ಟು ಜನರ ಮನಃಪರಿವರ್ತನೆಯಾಗಿದ್ದು ಉಲ್ಲೇಖನೀಯ. ಪೊನ್ನಂಪೇಟೆ ಸಮೀಪ ಬಾಳೆಲೆಯ ನಿವಾಸಿ ಹರಿದಾಸ ಗೋಪಾಲದಾಸ್ ಎಂಬುವವರು ರಾಷ್ಟ್ರೀಯ ವಿಚಾರಗಳನ್ನು ಬಿತ್ತಲು ತಮ್ಮ ಹರಿಕಥೆಯನ್ನು ಒಂದು ಮಾಧ್ಯಮವಾಗಿ ಬಳಸುತ್ತಿದ್ದರು.

ಬೇಲೂರು ಕೇಶವದಾಸರು ಹುದಿಕೇರಿಯಲ್ಲಿ ತಮ್ಮ ತತ್ವಪದಗಳ ಮೂಲಕ ಜನಜಾಗೃತಿ ಮೂಡಿಸುತ್ತಿದ್ದುದು ಬ್ರಿಟಿಷರಿಗೆ ತಲೆನೋವಾಗಿ ಪರಿಣಮಿಸಿತು. ಹೇಗಾದರೂ ಮಾಡಿ ಇವರ ತತ್ವಪದವನ್ನು ನಿಲ್ಲಿಸಬೇಕೆಂದು ಇವರಿಗೆ 'ಕಾರ್ಯಕ್ರಮ ನಡೆಸಬಾರದು' ಎಂಬ ಕಾನೂನನ್ನು ಬ್ರಿಟಿಷ್ ಸರಕಾರ ಹೇರಿತು.

ಈ ಸಂದರ್ಭ ಅವರು ಜೈಲುವಾಸವನ್ನು ಅನುಭವಿಸಬೇಕಾಯಿತು. ಅಂದು ೩೩,೦೦೦ ರೂಪಾಯಿ ಆದಾಯವನ್ನು ಮದ್ಯ ಮಾರಾಟದಿಂದ ಪಡೆಯುತ್ತಿದ್ದ ಬ್ರಿಟಿಷ್ ಸರಕಾರ, ಹೋರಾಟದ ಫಲವಾಗಿ ಆದಾಯ ಕೊರತೆ ಎದುರಿಸಿತು. ಅವರ ಆದಾಯ ಕೇವಲ ೧೨,೦೦೦ ರೂಪಾಯಿಗೆ ಇಳಿಯಿತು. ಈ ಸಂಬಂಧ ಪಂದ್ಯಂಡ ಬೆಳ್ಯಪ್ಪ, ಅಜ್ಜಿಕುಟ್ಟಿರ ತಮ್ಮಯ್ಯ ಮುಂತಾದವರು ಆರು ತಿಂಗಳ ಕಠಿಣ ಸಜೆಯನ್ನೂ ಅನುಭವಿಸಬೇಕಾಯಿತು.

### ಕೋಳೇರ ಕಾವೇರಿ

ಕೊಡಗಿನ ಸ್ವಾತಂತ್ರ್ಯ ಹೋರಾಟದಲ್ಲಿ ಮೊದಲ ಬಲಿದಾನ ವೀರ ತರುಣಿ ಕಾವೇರಿ ಅವರದ್ದು. ದಕ್ಷಿಣ ಕೊಡಗಿನ 'ಹುದಿಕೇರಿ' ಎಂಬ ಹೋಬಳಿಯ ಪಕ್ಕದ ಊರು ನಡಿಕೇರಿ. ನಡಿಕೇರಿಯ ಅತಿ ಸಣ್ಣ ರೈತರಾದ ಕೋಳೇರ ಕಾರ್ಯಪ್ಪನವರ ಮಗಳೇ ಕಾವೇರಿ. ಕೊಡಗಿನ ಸತ್ಯಾಗ್ರಹಕ್ಕೆ ಹೋರಾಟದ ರೂಪವನ್ನು ಕೊಟ್ಟ ಮಹಾನ್ ತ್ಯಾಗಿ ಈಕೆ. ಕೋಳೇರ ಕಾವೇರಿಯ ಬಲಿದಾನದಿಂದ ಬಹಳಷ್ಟು ಮಹಿಳೆಯರು ಸ್ವಾತಂತ್ರ್ಯ ಸತ್ಯಾಗ್ರಹದಲ್ಲಿ ಧುಮುಕಿದರು.

ಅಂದು ಕೊಡಗಿನಲ್ಲಿ ಭುಗಿಲೆದ್ದ ಮದ್ಯಪಾನ ನಿಷೇಧ ಚಳುವಳಿಯು ಪೊನ್ನಂಪೇಟೆ, ಹುದಿಕೇರಿ, ಗೋಣಿಕೊಪ್ಪ ಮತ್ತು ವೀರಾಜಪೇಟೆಗಳಲ್ಲಿ ತೀವ್ರಗತಿಯಲ್ಲಿ ಸಾಗಿತ್ತು. ಅಂತೆಯೇ ಚಳುವಳಿಯ ಸ್ವರೂಪ ತೀವ್ರವಾಗುತ್ತಾ ಸಂತೆ–ಸಂತೆಗಳಲ್ಲಿ ಭಿತ್ತಿಚಿತ್ರ, ಸತ್ಯಾಗ್ರಹಗಳು, ಪಿಕೆಟಿಂಗ್‌ಗಳು ಸಾಮಾನ್ಯವಾದ ದೃಶ್ಯವಾಗಿ ಮಾರ್ಪಟ್ಟಿತು. ಅವರಿವರ ಬಾಯಿಂದ ಸತ್ಯಾಗ್ರಹದ ವಿಷಯವನ್ನರಿತ ಕಾವೇರಿಗೆ ಪಂದ್ಯಂಡ ಬೆಳ್ಯಪ್ಪ ಮತ್ತು ಕೆ.ಸಿ. ಕರುಂಬಯ್ಯನವರ ಮೈನವಿರೇಳಿಸುವ ಭಾಷಣಗಳು ದೇಶಪ್ರೇಮದ ಕುಲುಮೆ ಭುಗಿಲೇಳುವಂತೆ ಮಾಡಿತು. ೧೬ರ ಹರೆಯದ ಕನ್ಯೆ ಕಾವೇರಿಗೆ, ಮದ್ಯಪಾನ ಚಳುವಳಿಯ ಸತ್ಯಾಗ್ರಹದಲ್ಲಿ ಭಾಗವಹಿಸಬೇಕೆಂಬ ಆಕಾಂಕ್ಷೆ ಹೆಚ್ಚುತ್ತಾ ಹೋಯಿತು. ಈ ಬಗ್ಗೆ ಅದೊಂದು ದಿನ ತನ್ನ ತಂದೆಯ ಬಳಿ ಹುದಿಕೇರಿಯಲ್ಲಿ ನಡೆಯುವ ಸತ್ಯಾಗ್ರಹಕ್ಕೆ ತಾನು ಹೋಗುವುದಾಗಿ ಹೇಳಿದಳು. ವಿಷಯ ಕೇಳಿದ ಕೋಳೇರ ಕಾರ್ಯಪ್ಪನವರಿಗೆ ಏನು ಹೇಳಬೇಕೆಂದು ತಿಳಿಯಲಿಲ್ಲ. ಎಷ್ಟು ಸಾರಿ ತಿಳಿಹೇಳಿದರೂ ಕಾವೇರಿ ಮಾತ್ರ ಹಿಡಿದ ಪಟ್ಟನ್ನು ಸಡಿಲಿಸಲಿಲ್ಲ. ಊರಿನವರೂ ಕಾರ್ಯಪ್ಪನವರನ್ನು ಬೆಂಬಲಿಸುತ್ತಾ ಕಾವೇರಿಗೆ 'ಅದು ಗಂಡಸರು ಮಾಡುವ ಚಳುವಳಿ, ನೀನು ಹೋಗಬಾರದು' ಎಂದು ತಿಳಿಹೇಳಿದರು. ಅನ್ನ–ನೀರು ತೊರೆದ ಕಾವೇರಿ ಯಾರ ಮಾತಿಗೂ ಪಟ್ಟುಬಿಡದೇ ಉಪವಾಸ ಸತ್ಯಾಗ್ರಹಿಯಾಗಿ ಮನೆಯಲ್ಲಿ ಕುಳಿತಳು. ಆಕೆ ಅಂದು ಸತ್ಯಾಗ್ರಹಕ್ಕೆ ಹೋಗಿದ್ದರೆ, ಅದೆಷ್ಟು ಮಹಿಳೆಯರು ಆಕೆಯನ್ನು ಹಿಂಬಾಲಿಸುತ್ತಿದ್ದರೋ? ಆದರೆ ವಿಧಿಯಾಟ ಬೇರೆಯೇ ಆಗಿತ್ತು. ತೀವ್ರವಾಗಿ ನೊಂದ ಕಾವೇರಿ ಸೆಪ್ಟಂಬರ್ ೧೬ರ ಬೆಳಗ್ಗೆ ಮನೆಯಲ್ಲಿ ಎಲ್ಲೂ ಕಾಣಿಸಲಿಲ್ಲ. ಮನೆಯವರು, ಅಕ್ಕ–ಪಕ್ಕದ ಮನೆಯವರು ಆಕೆ ಸತ್ಯಾಗ್ರಹಕ್ಕೆ ಹೋಗಿರಬಹುದೆಂದು ಊಹಿಸಿದ್ದರು. ಆದರೆ ಮಧ್ಯಾಹ್ನದ ಹೊತ್ತಿಗೆ ಕಾವೇರಿ ಶವವಾಗಿ ಮನೆಯ ಪಕ್ಕದ ಕೆರೆಯಲ್ಲಿ ತಲೆಗೆ ಕಟ್ಟಿದ ಕೊಡವ ವಸ್ತ್ರಧಾರಿಯಾಗಿ ಗೋಚರಿಸಿದಳು. ಸಾಯುವ ಮುನ್ನ ಖಾದಿಯ ಸೀರೆಯನ್ನು ಧರಿಸಿ, ಕೊಡವ ಸಾಂಪ್ರಾದಾಯಿಕ ವಸ್ತ್ರವನ್ನು ಧರಿಸಿ, ಸತ್ತರೂ ಇಡೀ ದೇಹವು ಯಾರಿಗೂ ಗೋಚರಿಸಬಾರದೆಂದು ಸೀರೆ ನೀರಿನಲ್ಲಿ ತೇಲುವಾಗ ದೇಹ ಕಾಣದಿರಲು ಹಗ್ಗವನ್ನು ಗಟ್ಟಿಯಾಗಿ ಬಿಗಿದಿದ್ದಳು. ಮಗಳು ಶವವಾಗಿ ನೀರಿನಲ್ಲಿ ತೇಲುವುದನ್ನು ಕಂಡ ಕಾರ್ಯಪ್ಪ ಕುಸಿದುಹೋದರು.



ಚಳುವಳಿಯಲ್ಲಿ ಭಾಗವಹಿಸಬೇಕೆಂದು ಮಹಾದಾಸೆ ಹೊತ್ತಿದ್ದ ಕಾವೇರಿಯ ಆಸೆ ನೀರಿನಲ್ಲಿ ಬತ್ತಿಹೋಯಿತೇನೋ ನಿಜ, ಆದರೆ ಕಾವೇರಿ ತನ್ನ ಪ್ರಾಣಾರ್ಪಣೆಯನ್ನು ಮಾಡುತ್ತಾ ಇತರ ಮಹಿಳೆಯರನ್ನು ಹೋರಾಟದಲ್ಲಿ ಭಾಗಿಯಾಗುವಂತೆ ಸಂದೇಶವನ್ನು ಬಿತ್ತಿದಳು. ಕಾವೇರಿಯ ಬಲಿದಾನದಿಂದ ಸಹಸ್ರಾರು ಸಂಖ್ಯೆಯಲ್ಲಿ ಮಹಿಳೆಯರು ಸತ್ಯಾಗ್ರಹ ಚಳುವಳಿಯಲ್ಲಿ ಭಾಗವಹಿಸಲು ಮುಂದಾದರು. ಸತ್ಯಾಗ್ರಹಗಳಲ್ಲಿ ಧುಮುಕಿದರು. ಚಳುವಳಿಯ ರೂಪು–ರೇಷೆಗೆ ಹೊಸ ಆಯಾಮ ಕೊಟ್ಟು ಕಾವೇರಿ ಮರೆಯಾಗಿದ್ದಳು. ಗಾಂಧೀಜಿಯವರು ಪೊನ್ನಂಪೇಟೆ–ಹುದಿಕೇರಿಗೆ ಭೇಟಿ ನೀಡಿದ ಸಂದರ್ಭದಲ್ಲಿ ಅವರ ಕಿವಿಗೆ ಕಾವೇರಿಯ ವಿಷಯ ಬಿದ್ದಿತು. ಹುದಿಕೇರಿಗೆ ಹೋಗಿ ಕಾವೇರಿಯ ತಂದೆ ಕೋಳೇರ ಕಾರ್ಯಪ್ಪನವರನ್ನು ಭೇಟಿ ಮಾಡಿ ತೀವ್ರ ಮರುಕಪಟ್ಟು ಸಮಾಧಾನ ಹೇಳಿದರು. ಅಂದಿನಿಂದ ಗಾಂಧೀಜಿಯವರು ತಮ್ಮ ಸತ್ಯಾಗ್ರದ ಸಭೆಯಲ್ಲಿ ಕಾವೇರಿಯ ಬಲಿದಾನವನ್ನು ಸ್ಮರಿಸತೊಡಗಿದರು.

ಚಳುವಳಿಯ ರೂವಾರಿ 'ಕೊಡಗಿನ ಗಾಂಧಿ' ಎಂದೇ ಖ್ಯಾತನಾಮರಾಗಿದ್ದ ಪಂದ್ಯಂಡ ಬೆಳ್ಯಪ್ಪನವರು ಕಾವೇರಿಯನ್ನು ಕುರಿತು "ದುಷ್ಟದಮನಕ್ಕೆ ಬೆನ್ನು ಮೂಳೆಯನ್ನು ಅರ್ಪಿಸಿದ ನಮ್ಮ ಕಾವೇರಿ" ಎಂದು ಹೊಗಳಿದರು.

## ಪೋಡಮಾಡ ಜಾನಕಿ

ಸ್ವಾತಂತ್ರ್ಯದ ಕಾಳ್ಗಿಚ್ಚು ದೇಶದೆಲ್ಲೆಡೆ ಹಬ್ಬಿತ್ತು. ಕೊಡಗಿನಲ್ಲಿ ಬ್ರಿಟಿಷ್ ಸರಕಾರ ಮದ್ಯಪಾನದ ಅಂಗಡಿಗಳಿಂದ ಸಾಕಷ್ಟು ಲಾಭವನ್ನು ಪಡೆಯುತ್ತಿತ್ತು. ಕೊಡಗಿನಲ್ಲಿ ದೇವರ ಆರಾಧನೆಗೆ ಮಾತ್ರ ಸೀಮಿತವಾಗಿದ್ದ ಮದ್ಯವನ್ನು ಕೊಡಗಿನವರು ಸೇವಿಸುವಂತೆ ಪ್ರಚೋದಿಸಿದ ಬ್ರಿಟಿಷ್ ಸರಕಾರ ಅಂದು ಕೊಡಗಿನ ನಿವಾಸಿಗಳನ್ನು ಮದ್ಯವ್ಯಸನಿಗಳನ್ನಾಗಿ ಮಾಡಲು ಶುರುಮಾಡಿತ್ತು. ೧೯೩೦ರ ಸಮಯದಲ್ಲಿ ಮಾರ್ಚ್–ಏಪ್ರಿಲ್ ತಿಂಗಳಲ್ಲಿ ಕೊಡಗಿನಾದ್ಯಂತ ಸ್ವಾತಂತ್ರ್ಯದ ಉಪ್ಪಿನ ಸತ್ಯಾಗ್ರಹದ ತಯಾರಿ ಭರದಿಂದಲೇ ಸಾಗಿತ್ತು. ಸೇಂದಿ, ಸಾರಾಯಿ ಮಾರಾಟದ ವಿರುದ್ಧ ಪಿಕೆಟಿಂಗ್ ನಡೆಸಲು ಸ್ವಾತಂತ್ರ್ಯ ಕಲಿಗಳು ತೀರ್ಮಾನಿಸಿದರು. ತೀರ್ಮಾನಿಸಿದಂತೆ ವೀರಾಜಪೇಟೆಯಲ್ಲಿ ನಾಡಿನ ಮೊದಲ ಪಿಕೆಟಿಂಗ್ ಮೇ ೩೦, ೧೯೩೦ರಲ್ಲಿ ಕೊರವಂಡ ಪೊನ್ನಪ್ಪ ಅವರ ಅಧ್ಯಕ್ಷತೆಯಲ್ಲಿ ನೆರವೇರಿತು. ಈ ಕಾಳ್ಗಿಚ್ಚು ಪಕ್ಕದ ನಾಡುಗಳಾದ ಪೊನ್ನಂಪೇಟೆ, ಹುದಿಕೇರಿ, ಮಡಿಕೇರಿಯವರೆಗೂ ವ್ಯಾಪಿಸಿತು.

ಪೊನ್ನಂಪೇಟೆಯಲ್ಲಿ ಮದ್ಯಪಾನದ ವಿರುದ್ಧ ಪಿಕೆಟಿಂಗ್ ನಡೆಯುವಾಗ, ಪೊನ್ನಂಪೇಟೆ ಸಮೀಪದ ಬಾಳೆಲೆಯ ಉತ್ಸಾಹಿ ಸತ್ಯಾಗ್ರಹಿ ಪೋಡಮಾಡ ಸುಬ್ಬಯ್ಯನವರು, ಅಬ್ದುಲ್ ಗಫಾರ್ ಖಾನ್ ಗೋಣಿಕೊಪ್ಪಕ್ಕೆ ಬಂದಾಗ ತಮ್ಮ ಹೆಂಡತಿ ಮತ್ತು ಹಿರಿಯ ಮಗಳು ಜಾನಕಿಯೊಂದಿಗೆ ಪಿಕೆಟಿಂಗ್‌ನಲ್ಲಿ ಪಾಲ್ಗೊಳ್ಳಲು ಬಂದರು. ೧೬ ವರ್ಷದ ಬಾಲಕಿಯಲ್ಲಿದ್ದ ಸ್ವಾತಂತ್ರ್ಯ ಹೋರಾಟದ ಕಿಚ್ಚು ಪುಟಿದೆದ್ದಿತು. 'ವಂದೇ ಮಾತರಂ' ಎಂದು ಎಲ್ಲರೂ ಸಾಮೂಹಿಕವಾಗಿ ಘೋಷಣೆ ಕೂಗಿದಾಗ ಬಾಲಕಿ ಜಾನಕಿಯು ಅವರ ಜೊತೆ ಸೇರಿ ಘೋಷಣೆಯನ್ನು ಕೂಗಿದಳು. ಇದನ್ನು ಕೇಳಿದ ತಂದೆಯಾದ ಪೋಡಮಾಡ ಸುಬ್ಬಯ್ಯನವರ ಸಂತೋಷಕ್ಕೆ ಪಾರವೇ ಇರಲಿಲ್ಲ. ಮುಂದೆ ಆಕೆ ಕೊಡಗಿನ ಭವಿಷ್ಯದ ಚುಕ್ಕಾಣಿ ಹಿಡಿಯಬಹುದು ಎನಿಸಿತು. ಭಜನೆ, ದೇವರ ಕೀರ್ತನೆಯಲ್ಲಿ ಆಸಕ್ತಿಯನ್ನು ತೋರಿದ್ದ ಬಾಲಕಿಗೆ ತಂದೆ ಹಾರ್ಮೋನಿಯಂ ತಂದುಕೊಟ್ಟರು. ಕಾಂಗ್ರೆಸ್ಸಿನಲ್ಲಿ ಸಕ್ರಿಯವಾಗಿದ್ದ ಸುಬ್ಬಯ್ಯನವರು, ಸಭೆ–ಸಮಾರಂಭಗಳಿಗೆ ಮಗಳನ್ನು ಜೊತೆಯಲ್ಲಿ ಕರೆದುಕೊಂಡು ಹೋಗುತ್ತಿದ್ದರು. ದೇಶಭಕ್ತಿಗೀತೆಗಳ ಮೂಲಕ ಸ್ವಾತಂತ್ರ್ಯದ ಕಿಚ್ಚನ್ನು ಹರಡಿಸತೊಡಗಿದಳು ತರುಣಿ ಪೋಡಮಾಡ



ಜಾನಕಿ. ಖಾದಿಬಟ್ಟೆಯನ್ನು ತೊಟ್ಟಳು. ಮಗಳು ಸಾಗುತ್ತಿದ್ದ ಹಾದಿಯನ್ನು ನೋಡಿ ಆತಂಕಗೊಂಡ ತಂದೆ ಸುಬ್ಬಯ್ಯನವರು ಮಗಳಿಗೆ ಮದುವೆ ಮಾಡಬೇಕೆಂದು ವರನನ್ನು ಗೊತ್ತುಮಾಡಿದರು. ಇದನ್ನು ತೀವ್ರವಾಗಿ ವಿರೋಧಿಸಿದ ಜಾನಕಿ ಮದುವೆಗೆ ತಾನು ಖಾದಿಬಟ್ಟೆಯನ್ನು ಬಿಟ್ಟರೆ ಮದುವೆಯ ಸೀರೆಯನ್ನು ತೊಡಲಾರೆ ಎಂದು ಹಟ ಹಿಡಿದಳು. ಮದುವೆಯ ದಿನವೂ ಸಮೀಪಿಸುತ್ತಿತ್ತು. ಖಾದಿಯುಟ್ಟ ಮದುಮಗಳು ದೇವರ ಕೋಣೆಗೆ ಹೋಗಿ ಅಲ್ಲೇ ನೇತು ಹಾಕಿದ ಕೋವಿಯಿಂದ ತನಗೆ ಗುಂಡು ಹಾರಿಸಿಕೊಂಡಳು. ಸ್ವಾತಂತ್ರ್ಯದ ಚಳುವಳಿಗೆ ತನ್ನ ಪ್ರಾಣಾರ್ಪಣೆ ಮಾಡಿಕೊಂಡಿದ್ದಳು ಪೋಡಮಾಡ ಜಾನಕಿ. ಚಳುವಳಿಯಲ್ಲಿ ಪೋಡಮಾಡ ಜಾನಕಿಯ ಹೆಸರು ಅಜರಾಮರವಾಗಿ ಉಳಿಯಿತು.

## ಮಹನೀಯರ ದಂಡು ಕೊಡಗಿನೆಡೆಗೆ

೧೯೩೦ರಲ್ಲಿ ಕೊಡಗಿನ ಹೋರಾಟವನ್ನು ತೀವ್ರಗೊಳಿಸುವ ಸಲುವಾಗಿ ಕಾಂಗ್ರೆಸ್ಸಿನ ನಾಯಕರಾದ ಆಲೂರು ವೆಂಕಟರಾವ್, ರಾಮರಾವ್ ಹುಕ್ಕೇರಿಕರ್, ಕಮಲಾದೇವಿ ಚಟ್ಟೋಪಾಧ್ಯಾಯ ಕೊಡಗಿಗೆ ಬಂದಿದ್ದರು. ೧೯೩೨ರಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನ ಮಡಿಕೇರಿಯಲ್ಲಿ ನಡೆಯಿತು. ಸಮ್ಮೇಳನಕ್ಕೆ ಆಗಮಿಸಿದ್ದ ಕನ್ನಡದ ಖ್ಯಾತ ಸಾಹಿತಿಗಳಾದ ಡಿ.ವಿ.ಗುಂಡಪ್ಪ, ದ.ರಾ.ಬೇಂದ್ರೆ, ಕುವೆಂಪು, ಮತ್ತು ಮಾಸ್ತಿ ವೆಂಕಟೇಶ್ ಅಯ್ಯಂಗಾರ್ ಇವರೆಲ್ಲರೂ ಚಳುವಳಿ ಮತ್ತು ಸತ್ಯಾಗ್ರಹ ನಡೆಯುತ್ತಿದ್ದ ಸ್ಥಳಕ್ಕೆ ಭೇಟಿ ನೀಡಿ ಸತ್ಯಾಗ್ರಾಹಿಗಳನ್ನು ಪ್ರೋತ್ಸಾಹಿಸಿದರು.

೧೯೩೨ರಲ್ಲಿ ಅರಮೇರಿ ಮತ್ತು ಚೆನ್ನಯ್ಯನ ಕೋಟೆಯಲ್ಲಿ ದಲಿತ ವಿದ್ಯಾರ್ಥಿಗಳಿಗೆ ಶಾಲೆಯನ್ನು ತೆರೆಯಲಾಯಿತು. ಬಡವರಿಗಾಗಿ 'ದೀನ ಸೇವಾಶ್ರಮ'ವನ್ನು ಗೋಣಿಕೊಪ್ಪಲಿನಲ್ಲಿ ಆರಂಭಿಸಲಾಯಿತು. ಇಲ್ಲಿ ಬಡ ಮಹಿಳೆಯರಿಗಾಗಿ ಟೈಲರಿಂಗ್ ತರಬೇತಿ ನೀಡಲಾಗುತ್ತಿತ್ತು. ಶುಚಿತ್ವಕ್ಕೆ ಮೊದಲ ಆದ್ಯತೆಯಿತ್ತು. ಹರಿಕಥೆ, ಭಜನೆಯನ್ನು ಮಾಡಲಾಗುತ್ತಿತ್ತು.

೧೯೩೨ರಲ್ಲಿ ಮಹಾತ್ಮ ಗಾಂಧಿಯವರ ಅಸ್ಪೃಶ್ಯತೆಯನ್ನು ಹೋಗಲಾಡಿಸಬೇಕೆಂಬ ಕರೆಗೆ ಕೊಡಗು ಕೂಡ ಕೈಜೋಡಿಸಿತ್ತು. ಇದರ ಪರಿಣಾಮವಾಗಿ ದಲಿತರು ಸತ್ಯಾಗ್ರಹಿಗಳ ಜೊತೆಗೆ ಊಟವನ್ನು ಮಾಡಿದರು. ಅವರು ಕೂಡ ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿದರು. ಇದರಿಂದ ಕುಪಿತಗೊಂಡ ಬ್ರಿಟಿಷ್

ಸರಕಾರ ಕೊಡಗಿನಾದ್ಯಂತ ಜನವರಿ ೭, ೧೯೩೨ರಂದು ೧೪೪ನೇ ಸೆಕ್ಷನ್ ಜಾರಿಗೊಳಿಸಿತು. ಇದರಲ್ಲಿ ಪಂದ್ಯಂಡ ಬೆಳ್ಯಪ್ಪ, ಕೊಳ್ಳಿಮಾಡ ಕರುಂಬಯ್ಯ, ಐಯಂಡ ಕಾರ್ಯಪ್ಪ, ಅಜ್ಜಿಕುಟ್ಟಿರ ಚಿನ್ನಪ್ಪ, ಚೆಪ್ಪುಡಿರ ಪೂಣಚ್ಚ ಮತ್ತು ಅಬ್ದುಲ್ ಗಫಾರ್ ಖಾನ್ ಅವರ ಮೇಲೆ ಸಾರ್ವಜನಿಕ ಸಭೆ ಮತ್ತು ಹೋರಾಟದಲ್ಲಿ ಭಾಗಿಯಾಗಬಾರದು ಎಂದು ನಿರ್ಬಂಧ ಹೇರಲಾಯಿತು. ಆದರೂ ಸರಕಾರದ ಆದೇಶವನ್ನು ಮೀರಿ ೧೯೩೨ರ ಜನವರಿ ೧೦ರಂದು ಗೋಣಿಕೊಪ್ಪಲಿನಲ್ಲಿ ಈ ಕಲಿಗಳು ಪ್ರತಿಭಟನೆಯನ್ನು ಮಾಡಿದರು. ಜನಸಮೂಹವನ್ನು ಉದ್ದೇಶಿಸಿ ಪಂದ್ಯಂಡ ಬೆಳ್ಯಪ್ಪ ಮತ್ತು ಅಜ್ಜಿಕುಟ್ಟಿರ ಚಿನ್ನಪ್ಪ, ಚೆಪ್ಪುಡಿರ ಪೂಣಚ್ಚ ಮತ್ತು ಅಬ್ದುಲ್ ಗಫಾರ್ ಖಾನ್ ಅವರು ಮಾತನಾಡಿದರು. ಪಂದ್ಯಂಡ ಬೆಳ್ಯಪ್ಪ ಸೇರಿದಂತೆ ಉಳಿದ ಮುಖಂಡರನ್ನು ಅಂದು ಬಂಧಿಸಲಾಯಿತು. ೬ ರಿಂದ ೯ ತಿಂಗಳ ಜೈಲುಶಿಕ್ಷೆಗೆ ಇವರನ್ನೆಲ್ಲಾ ಕೊಣನೂರು ಜೈಲಿಗೆ ಕಳುಹಿಸಲಾಯಿತು. ಮಹಿಳಾ ಸತ್ಯಾಗ್ರಹಿಗಳಾದ ಬಲ್ಯಾರಂಡ ಮುದ್ದಮ್ಮ, ಪಂದ್ಯಂಡ ಸೀತಾ ಬೆಳ್ಯಪ್ಪ, ಮುಕ್ಕಾಟಿರ ಬೋಜಮ್ಮ ಇವರುಗಳು ಭಿತ್ತಿಪತ್ರವನ್ನು ಹಂಚತೊಡಗಿದರು. ಇದರಿಂದ ಕೆರಳಿದ ಬ್ರಿಟಿಷ್ ಸರಕಾರ, ಸತ್ಯಾಗ್ರಹಿಗಳನ್ನು ಬಂಧಿಸತೊಡಗಿದರು. ಮಹಿಳಾ ಹೋರಾಟಗಾರರನ್ನು ಕೂಡ ಬಂಧಿಸಲಾಯಿತು. ಬಂಧಿತ ಮಹಿಳಾ ಹೋರಾಟಗಾರರನ್ನು ಕಾರಾಗೃಹ ವಾಸಕ್ಕೆ ಕಳುಹಿಸಲಾಯಿತು. ಪಂದ್ಯಂಡ ಬೆಳ್ಯಪ್ಪನವರ ಶ್ರೀಮತಿ ಸೀತಾ ಬೆಳ್ಯಪ್ಪನವರು ಗರ್ಭಿಣಿಯಾಗಿದ್ದರು. ಆ ಸಮಯದಲ್ಲಿಯೂ ತಮ್ಮ ಎರಡು ಮಕ್ಕಳೊಡನೆ ಕಾರಾಗೃಹವಾಸಕ್ಕೆ ಹೋದರು.

### ಕರಾಚಿಯಲ್ಲಿ ನಡೆದ 'ಕಾನೂನು ಭಂಗ ಚಳುವಳಿ'

೧೯೩೧ರಲ್ಲಿ ಕರಾಚಿಯಲ್ಲಿ ನಡೆದ ಅಖಿಲ ಭಾರತ ಕಾಂಗ್ರೆಸಿನ ಕಾನೂನುಭಂಗ ಚಳುವಳಿಗೆ ಕೊಡಗಿನಿಂದ ಪಂದ್ಯಂಡ ಬೆಳ್ಯಪ್ಪ ಮತ್ತು ಕೋಳೇರ ಕರುಂಬಯ್ಯ ಪ್ರತಿನಿಧಿಗಳಾಗಿ ಹೋಗಿದ್ದರು. ಅದೇ ವರ್ಷ ಜಮೀನ್ದಾರ ಸಂಘದ ಅಧಿವೇಶನ ಗೋಣಿಕೊಪ್ಪದಲ್ಲಿ ನಡೆಯಿತು. ಅದಕ್ಕೆ ಬಂಗಾಳದ ಹುಲಿ ಸೇನ್‌ಗುಪ್ತ, ಆಂಧ್ರದ ಟಿ. ಪ್ರಕಾಶಂ ಹಾಜರಿದ್ದರು.

### ಕೊಡಗಿಗೆ ಮಹಾತ್ಮ ಗಾಂಧೀಜಿಯವರ ಭೇಟಿ

೧೯೩೧ರ ಫೆಬ್ರವರಿ ೨೧, ೨೨, ೨೩ರಂದು ಮಹಾತ್ಮ



ಗಾಂಧೀಜಿಯವರು ಕೊಡಗಿಗೆ ಭೇಟಿ ನೀಡಿದರು. ಪದ್ಯಂಡ ಬೆಳ್ಯಪ್ಪ ಮತ್ತು ಕೋಳೇರ ಕರುಂಬಯ್ಯನವರು ಗಾಂಧೀಜಿಯವರನ್ನು ಕೊಡಗಿಗೆ ಕರೆತರುವಲ್ಲಿ ಯಶಸ್ವಿಯಾಗಿದ್ದರು. ತಿತಿಮತಿಯ ಮೂಲಕ ಗಾಂಧೀಜಿಯವರು ಕೊಡಗಿನ ಪ್ರಮುಖ ಸ್ಥಳಗಳಾದ ಗೋಣಿಕೊಪ್ಪ, ಪೊನ್ನಂಪೇಟೆ, ಹುದಿಕೇರಿಗೆ ಮೊದಲು ಭೇಟಿ ನೀಡಿದರು. ಆ ಸಮಯದಲ್ಲಿ ದಕ್ಷಿಣ ಕೊಡಗಿನ ಕೈಕೇರಿಯ ದಲಿತಕೇರಿಗೆ ಗಾಂಧೀಜಿಯವರು ಭೇಟಿ ನೀಡಿ ಅಲ್ಲಿನ ಶುಚಿತ್ವ ಮತ್ತು ದಲಿತರಿಗೆ ಇದ್ದ ಸೌಕರ್ಯವನ್ನು ಕಂಡು ಆಶ್ಚರ್ಯಚಕಿತರಾದರು. ಅಂದು ರಾತ್ರಿ ಪೊನ್ನಂಪೇಟೆಯ ರಾಮಕೃಷ್ಣಾಶ್ರಮದಲ್ಲಿ ತಂಗಿದರು. ಆಶ್ರಮದಲ್ಲಿದ್ದ ಸ್ವಾಮಿ ಶಾಂಭವಾನಂದರು (ಪೂರ್ವಾಶ್ರಮದ ಹೆಸರು ತೇಲಪಂಡ ಚೆಂಗಪ್ಪ) ಮಹಾತ್ಮ ಗಾಂಧೀಜಿಗೆ ಒಳ್ಳೆಯ ಆತಿಥ್ಯವನ್ನು ನೀಡಿ ಸತ್ಕರಿಸಿದರು, ಆಶ್ರಮದಲ್ಲಿ ತಂಗಿ ಅಂದು ಸಭೆಯನ್ನು ಉದ್ದೇಶಿಸಿ ಗಾಂಧಿ ಮಾತನಾಡಿದರು. ಈ ಸಭೆಗೆ ದಾಖಲೆಯ ೧೦,೦೦೦ದಷ್ಟು ಜನರು ಹಾಜರಿದ್ದರು ಎಂಬುದು ಇತಿಹಾಸ. ಇಂದಿಗೂ ಮಹಾತ್ಮ ಗಾಂಧೀಜಿಯವರು ಪೊನ್ನಂಪೇಟೆಯಲ್ಲಿ ನಡೆಸಿದ ಸಭೆಯ ಸ್ಥಳಕ್ಕೆ 'ಗಾಂಧಿಗದ್ದೆ' ಎಂದು ಕರೆಯಲಾಗುತ್ತದೆ. ಅದೇ ರೀತಿ ಹುದಿಕೇರಿಯಲ್ಲಿ ಗಾಂಧೀಜಿಯವರು ಭಾಷಣ ಮಾಡಿದ ಸ್ಥಳವೆಂದು 'ಗಾಂಧಿ ಮೈದಾನ'ವಾಗಿದೆ.

ಮರುದಿನ ಗಾಂಧೀಜಿಯವರು ಮಡಿಕೇರಿಗೆ ಭೇಟಿ ನೀಡಿದರು. ದಕ್ಷಿಣ ಕೊಡಗಿನಲ್ಲಿ ನಡೆಸಿದ ಬಹಿರಂಗ ಸಭೆಯಂತೆ ಮಡಿಕೇರಿಯಲ್ಲಿಯೂ ಪಂದ್ಯಂಡ ಬೆಳ್ಯಪ್ಪನವರ ಅಧ್ಯಕ್ಷತೆಯಲ್ಲಿ ಬಹಿರಂಗ ಸಭೆ ಗಾಂಧೀಜಿಯವರಿಗಾಗಿ ಕಾಯುತ್ತಿತ್ತು. ಈ ಸಭೆಯಲ್ಲಿ ಸುಮಾರು ೧೦,೦೦೦ಕ್ಕೂ ಹೆಚ್ಚು ನಿವಾಸಿಗಳು ಪಾಲ್ಗೊಂಡಿದ್ದರು. ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡುವ ಸಂದರ್ಭ ಗಾಂಧೀಜಿಯವರು ಕೊಡಗಿನಲ್ಲಿ ದಲಿತರು ಕೂಡ ದೇವಸ್ಥಾನಕ್ಕೆ ಪ್ರವೇಶ ಮಾಡಬಹುದೆಂಬ ವಿಷಯವನ್ನು ಹೇಳಿ ಕೊಡಗಿನ ಸಾಮರಸ್ಯವನ್ನು ಕೊಂಡಾಡಿದರು. ಗಾಂಧೀಜಿಯವರಿಂದ ಪ್ರಭಾವಿತರಾದ ಬಹಳಷ್ಟು ಮಹಿಳೆಯರು ದಲಿತರ ಅಭಿವೃದ್ಧಿಗೆ ತಮ್ಮ ಒಡವೆ, ಕೂಡಿಟ್ಟಿದ್ದ ಹಣವನ್ನು ಕೊಡುಗೆಯಾಗಿ ಕೊಟ್ಟರು. ಕೊಡಗಿನವರು ಸರ್ವರನ್ನೂ ಸಮಾನವಾಗಿ ಸ್ವೀಕರಿಸುತ್ತಾರೆ ಎಂಬುದಕ್ಕೆ ಇದು ಉದಾಹರಣೆಯಾಗಿದೆ. ಅಂದು ಖ್ಯಾತ ಸಾಹಿತಿ ಕೊಡಗಿನ ಗೌರಮ್ಮನವರ ಮನೆಯಲ್ಲಿ ಉಳಿದ ಗಾಂಧೀಜಿಯವರು ಮರುದಿನ ಮಂಗಳೂರಿಗೆ ಪ್ರಯಾಣ ಬೆಳೆಸಿದರು.

## ಸ್ವಾತಂತ್ರ್ಯ ಹೋರಾಟದ ರೂವಾರಿಗಳು

ಕೊಡಗಿನಲ್ಲಿ ಸ್ವಾತಂತ್ರ್ಯದ ಹೋರಾಟದ ಕಿಚ್ಚು ಹರಡುವಲ್ಲಿ ಪ್ರಮುಖ ಪಾತ್ರ ವಹಿಸಿದವರು ಕುಲ್ಲೇಟಿ ಪೊನ್ನಣ್ಣ, ಬೋನಿರ ಮುತ್ತಣ್ಣ, ಕನ್ನಂಡ ದೊಡ್ಡಯ್ಯ, ಅಪ್ಪಚ್ಚಿ ಮಂದಣ್ಣ, ಪಟ್ಟಚೆರವಂಡ ಬೋಳ್ಕ, ಚೌರಿರ ಚರ್ಮಣ್ಣ, ಮಾತಂಡ ಮಾರೀಚ, ಮಂಡುಂಡ ಅಪ್ಪಯ್ಯ, ತಾತಂಡ ಸುಬ್ಬಯ್ಯ, ಮಂಡೇಪಂಡ ಅಪ್ಪಯ್ಯ, ಕಾಂಗೀರ ಅಪ್ಪಣ್ಣ, ಬಾಳೆಯಡ ಮಾಣೀಚ, ಕೇಟೋಳಿರ ಅಚ್ಚುವಣ್ಣ, ಅಪ್ಪರಂಡ ಬೋಪು, ದಿವಾನ್ ಚೆಪ್ಪುಡಿರ ಪೊನ್ನಪ್ಪ, ಅಳಮಂಡ ಮುದ್ದಯ್ಯ, ಪಳಂಗಂಡ ದೇವಯ್ಯ, ಪಟ್ಟಮಾಡ ಅಪ್ಪಯ್ಯ, ಮುಕ್ಕಾಟ್ಟೀರ ಐಪಣ್ಣ, ಮಂಡೀರ ಉತ್ತಯ್ಯ, ಕೊರವಂಡ ಬಿದ್ದಯ್ಯ, ಇಟ್ಟೀರ ಮಂದಪ್ಪ, ಕಂಜಿತಂಡ ಅಪ್ಪಯ್ಯ, ಕೊಲ್ಲೀರ ಅಚ್ಚಯ್ಯ, ಪಾರುವಂಗಡ ಕುಶಾಲಪ್ಪ, ಪಂದ್ಯಂಡ ಬೆಳ್ಯಪ್ಪ ಇವರೇ ಮುಂತಾದವರು. ಯುವಸಮುದಾಯ ಕೂಡ ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿದ್ದಾರೆ. ಅವರುಗಳಲ್ಲಿ ಅಜ್ಜಿಕುಟ್ಟಿರ ಚಿನ್ನಪ್ಪ, ಮಲ್ಲೆಂಗಡ ಚೆಂಗಪ್ಪ, ಚೆಕ್ಕೇರ ಮೊಣ್ಣಯ್ಯ, ಕಾಕಮಾಡ ನಾಣಯ್ಯ, ಸಿ.ಎಂ.ಪೂಣಚ್ಚ ಪ್ರಮುಖರು.

ಸ್ವಾತಂತ್ರ್ಯ ಚಳುವಳಿಯಲ್ಲಿ ಮಹಿಳೆಯರ ಹೋರಾಟದ ಸಿಂಹಪಾಲು ಇದ್ದೇ ಇದೆ. ಅವರು ಕೋಳೇರ ಕಾವೇರಿ, ಪೋಡಮಾಡ ಜಾನಕಿ, ಪಂದ್ಯಂಡ ಸೀತಾ ಬೆಳ್ಯಪ್ಪ, ಕೋಟೇರ ಅಕ್ಕಮ್ಮ, ಕೋದಂಡ ಚಿತ್ರಾ ಮತ್ತು ಲತಾ ಸಹೋದರಿಯರು, ಬಲ್ಯಾಟಂಡ ಮುದ್ದಮ್ಮ, ಮಾಚಿಮಂಡ ಮುತ್ತಮ್ಮ, ಮುಕ್ಕಾಟ್ಟೀರ ಬೋಜಮ್ಮ, ಅಪ್ಪಂಡೇರಂಡ ಕಾಳಮ್ಮ, ಮಳವಂಡ ಅಕ್ಕಮ್ಮ, ಕೋದಂಡ ಅಕ್ಕವ್ವ, ಮಾಚಿಮಂಡ ಮೇದಕ್ಕ, ಕೋದೆಂಗಡ ಮುದ್ದಮ್ಮ, ಶ್ರೀಮತಿ ಬಿ.ಟಿ.ಜಿ. ಕೃಷ್ಣ, ಕೊಡಗಿನ ಗೌರಮ್ಮ ಮುಂತಾದವರು.

## ವಿದ್ಯಾರ್ಥಿಗಳ ಚಳುವಳಿ

ಕಾಂಗ್ರೆಸ್‌ನ ಹಿರಿಯ ಸದಸ್ಯ ಕೊಳ್ಳಿಮಾಡ ಕರುಂಬಯ್ಯರವರು ಸಿ.ಎಂ.ಪೂಣಚ್ಚ ಅವರನ್ನು ಗುರುತಿಸಿ, ದಲಿತರಲ್ಲಿ ಮದ್ಯಪಾನದಿಂದಾಗುವ ದುಷ್ಪರಿಣಾಮದ ಕುರಿತು ಜನಜಾಗೃತಿಯ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲು ಪ್ರೇರೇಪಿಸಿದರು. ವೀರಾಜಪೇಟೆ, ಪೊನ್ನಂಪೇಟೆ, ಹುದಿಕೇರಿ, ಗೋಣಿಕೊಪ್ಪ ಸೇರಿದಂತೆ ಮಡಿಕೇರಿಯಲ್ಲಿ ಮದ್ಯಪಾನ ನಿಷೇಧ ಸತ್ಯಾಗ್ರಹ–ಚಳುವಳಿ ಆರಂಭವಾಯಿತು. ಇದೇ ಸಮಯದಲ್ಲಿ ಮಡಿಕೇರಿಯ ಸೆಂಟ್ರಲ್ ಹೈಸ್ಕೂಲಿನ ವಿದ್ಯಾರ್ಥಿಗಳು ಬ್ರಿಟಿಷ್ ಸರಕಾರದ ವಿರುದ್ಧ ತಿರುಗಿಬಿದ್ದರು. ಹೋರಾಟದ ತೀವ್ರತೆಯನ್ನು ಮನಗಂಡ ಸರಕಾರ ಹೈಸ್ಕೂಲನ್ನು ಹತ್ತು ದಿನಗಳ ಕಾಲ ಸ್ಥಗಿತಗೊಳಿಸಿದ್ದು ಮಾತ್ರವಲ್ಲದೇ ಇದಕ್ಕೆ ಕಾರಣಕರ್ತರಾದ ವಿದ್ಯಾರ್ಥಿಗಳಾದ ನಾರಾಯಣರಾವ್ (ಭಾರತೀಸುತ) ಮತ್ತು ಸಿ.ಬಿ.ಮೊಣ್ಣಯ್ಯ, ಪೂಜಾರಿ ರಾಮಪ್ಪ ಅವರನ್ನು ಕಾರಾಗೃಹಕ್ಕೆ ಕಳಿಸಿತು.



## ಸರ್ಪಾಸ್ತ್ರ ಪತ್ರಿಕೆ

ಚೆಪ್ಪುಡಿರ ಪೂಣಚ್ಚನವರು ೧೯೩೨ರಲ್ಲಿ ಕೊಡಗು ಕಾಂಗ್ರೆಸ್ ಸಮಿತಿಯ ಕಾರ್ಯದರ್ಶಿಯಾಗಿದ್ದರು. ಈ ಸಂದರ್ಭ ಸ್ವಾತಂತ್ರ್ಯದ ಜನಜಾಗೃತಿಯನ್ನು ಮೂಡಿಸುವ ಸಲುವಾಗಿ ಗೋಣಿಕೊಪ್ಪ ಸಮೀಪದ ತಮ್ಮ ತಂದೆಗೆ ಸೇರಿದ ತೋಟದ ಮಧ್ಯದಲ್ಲಿ ಅಚ್ಚು ಹೊಡೆಯುವ ಯಂತ್ರವನ್ನು ಇಟ್ಟುಕೊಂಡು ಮಧ್ಯರಾತ್ರಿಯಲ್ಲಿ ವಾರಪತ್ರಿಕೆಯ ೧೦೦ ಕಾಪಿಗಳನ್ನು ಅಚ್ಚು ಮಾಡುತ್ತಿದ್ದರು. ಇದನ್ನು ವಾರಕ್ಕೊಮ್ಮೆ ಹಂಚುತ್ತಿದ್ದರು. ಲಾಯರ್ ರಾಮಮೂರ್ತಿಯವರ ಸಹೋದರ ಶಾಲೆಗೆ ಹೋಗುವ ವಿದ್ಯಾರ್ಥಿಯಾಗಿದ್ದ. ಪತ್ರಿಕೆಗಳನ್ನು ಶಾಲೆಯಲ್ಲಿ ವಿದ್ಯಾರ್ಥಿಗಳ ಮೂಲಕ ತಲುಪಿಸಲು ಪ್ರತಿಯೊಬ್ಬರ ಡೆಸ್ಕ್ ಕೆಳಗೆ ಪತ್ರಿಕೆಯನ್ನು ಇಡಲಾಗುತ್ತಿತ್ತು. ಹೀಗೆ ಸರ್ಪಾಸ್ತ್ರ ವಾರಪತ್ರಿಕೆ ಸರಬರಾಜು ಯಶಸ್ವಿಯಾಗಿ ಸಾಗಿತು. ಬ್ರಿಟಿಷರಿಗೆ ಪತ್ರಿಕೆ ಅಚ್ಚಾಗುತ್ತಿರುವ ಸ್ಥಳ ಮತ್ತು ಅಚ್ಚು ಮಾಡುತ್ತಿರುವವರ ಮಾಹಿತಿ ಒಂದು ರೀತಿಯಲ್ಲಿ ಯಕ್ಷಪ್ರಶ್ನೆಯೇ ಆಗಿತ್ತು. ಎಷ್ಟು ಹುಡುಕಿದರೂ, ರಹಸ್ಯ ಬಗೆದರೂ ಪತ್ರಿಕೆಯ ಮೂಲ ತಿಳಿಯಲಿಲ್ಲ. ಆರು ತಿಂಗಳ ನಂತರ ಪತ್ರಿಕೆಗೆ 'ವೀರ ಭಾರತಿ' ಎಂಬ ಹೆಸರನ್ನು ಇಡಲಾಯಿತು. ಕೊನೆಗೊಂದು ದಿನ ಪತ್ರಿಕೆ ಅಚ್ಚಾಗುತ್ತಿರುವ ಸ್ಥಳದಲ್ಲಿ ಯಂತ್ರ ಮತ್ತು ಪತ್ರಿಕೆ ಬ್ರಿಟಿಷರಿಗೆ ಸಿಕ್ಕಿ ಹೋಯಿತು. ಸಿ.ಎಂ.ಪೂಣಚ್ಚನವರನ್ನು ಬಂಧಿಸಿದ ಬ್ರಿಟಿಷ್ ಸರಕಾರ ಕೊಣನೂರಿನಲ್ಲಿ ಒಂಬತ್ತು ತಿಂಗಳು ಕಠಿಣ ಸಜೆಯನ್ನು ನೀಡಿತು.

## ಕ್ವಿಟ್ ಇಂಡಿಯಾ ಚಳುವಳಿ

೧೯೪೨ರ ಆಗಸ್ಟ್ ೯ರಂದು ಮಹಾತ್ಮ ಗಾಂಧೀಜಿಯವರು 'ಬ್ರಿಟಿಷರೆ, ದೇಶ ಬಿಟ್ಟು ತೊಲಗಿ' ಚಳವಳಿ ನಡೆಸಲು ಇಡೀ ದೇಶಕ್ಕೆ ಕರೆ ನೀಡಿದರು. ದೇಶದಾದ್ಯಂತ ಹೋರಾಟದ ಕಿಚ್ಚು ವ್ಯಾಪಿಸಿತ್ತು. ಕೊಡಗಿನ ಉತ್ಸಾಹಿ ಸತ್ಯಾಗ್ರಹಿಗಳು 'ಮಾಡು ಇಲ್ಲವೆ ಮಡಿ' ಎಂದು ಹೋರಾಟದಲ್ಲಿ ಧುಮುಕಿದರು.

ಸಾಮಾನ್ಯವಾಗಿ ಜನವರಿ ೨೬ ರಂದು 'ಸ್ವಾತಂತ್ರ್ಯ ದಿನ' ಎಂದು ಆಚರಿಸುತ್ತಿದ್ದ ಕೊಡಗಿನಲ್ಲಿ ಅಂದು ಲಾಠಿ ಚಾರ್ಜುಗಳಾದವು. ೧೯೪೨ರಲ್ಲಿ ಹೋರಾಟ ತೀವ್ರತೆಯನ್ನು ಪಡೆಯಿತು. ೩೫ ಜನರು ಕೊಡಗಿನಲ್ಲಿ ಬಂಧಿತರಾದರು. ೭೦ರಿಂದ ೮೦ ಹೋರಾಟಗಾರರನ್ನು ಮದರಾಸಿನ ವೆಲ್ಲೂರು ಜೈಲಿಗೆ ಕಳುಹಿಸಲಾಯಿತು. ಅವರಲ್ಲಿ ಮುಖ್ಯವಾಗಿ ಪಂದ್ಯಂಡ ಬೆಳ್ಳಿಯಪ್ಪ, ಕೋಟೆರ ಕರುಂಬಯ್ಯ, ಚೆಕ್ಕೇರ ಮೊಣ್ಣಯ್ಯ, ಕೊಳ್ಳಿಮಾಡ ಕರುಂಬಯ್ಯ ಬಂಧಿತರು. ೧೯೪೨ರ ಆಗಸ್ಟ್ ೧೦ರಂದು ಇವರನ್ನು ಬಂಧಿಸಲಾಯಿತು. ಭಾರತದ ಕಾಂಗ್ರೆಸ್ ಸಮಿತಿಯ ಸದಸ್ಯರಾದ ಸಿ. ಎಂ. ಪೂಣಚ್ಚ ಅವರನ್ನು ೧೯೪೨ರ ಆಗಸ್ಟ್ ೧೫ರಂದು ಭಾರತೀಯ ರಕ್ಷಣಾ ಕಾಯ್ದೆಯ ಅಡಿಯಲ್ಲಿ ಬಂಧಿಸಲಾಯಿತು. ಇನ್ನಿತರ ಬಂಧಿಗಳಲ್ಲಿ ಕೋಳೇರ ಕರುಂಬಯ್ಯ, ಅಜ್ಜಿಕುಟ್ಟಿರ ಚಿನ್ನಪ್ಪ, ಕಾಕಮಾಡ ನಾಣಯ್ಯ, ಬಿದ್ದಂಡ ಕಾರ್ಯಪ್ಪ, ಕೋರನ ದೇವಯ್ಯ, ಮಂಡೇಪಂಡ ಸೋಮಯ್ಯ ಮುಖ್ಯರಾದವರು.

ಈ ಸಂದರ್ಭದಲ್ಲಿ ಹಲವಾರು ವಿದ್ಯಾರ್ಥಿಗಳು, ಮಹಿಳೆಯರು ಕೂಡ 'ಕ್ವಿಟ್ ಇಂಡಿಯಾ ಚಳುವಳಿ'ಯಲ್ಲಿ ಮಡಿಕೇರಿ, ವೀರಾಜಪೇಟೆ ಮತ್ತು ಪೊನ್ನಂಪೇಟೆಯಲ್ಲಿ ಭಾಗವಹಿಸಿದ್ದರು. ಆ ಸಮಯದಲ್ಲಿ ವಿದ್ಯಾರ್ಥಿಗಳಾಗಿದ್ದ ಅಜ್ಜಿಕುಟ್ಟಿರ ಅಪ್ಪಣ್ಣ, ಪಾರುವಂಗಡ ಉತ್ತಣ್ಣ, ಬಿ.ಡಿ.ಸುಬ್ಬಯ್ಯ, ಮಲ್ಚಿರ ಮುತ್ತಣ್ಣ, ಕೋದಂಡ ದೇವಯ್ಯ, ಮನೆಯಪಂಡ ಚಿನ್ನಪ್ಪ, ಸಿಂಗೂರ ಕುಟ್ಟಪ್ಪ, ಐಚೆಟ್ಟಿರ ಬೋಪಣ್ಣ ಮತ್ತು ಕರ್ತಮಾಡ ಸುಬ್ಬಯ್ಯ ಸೇರಿದಂತೆ ಇನ್ನೂ ೯೦ ವಿದ್ಯಾರ್ಥಿಗಳು ಸ್ವಾತಂತ್ರ್ಯ ಹೋರಾಟಗಾರರ ಬಂಧನವನ್ನು ಆಕ್ಷೇಪಿಸಿ 'ಕೊಡಗು ಕಂಪೆನಿ'ಯ ಎದುರು ಕುಳಿತು ಮುಷ್ಕರ ಮಾಡಿದರು. ಈ ವಿದ್ಯಾರ್ಥಿಗಳನ್ನು ಶಾಲೆಯ ಹಾಸ್ಟೆಲಿನಿಂದ ಹೊರದೂಡಲಾಯ್ತು. ಪುಸ್ತಕ ಮತ್ತು ಬಟ್ಟೆಯೊಂದಿಗೆ ಆಶ್ರಯಕ್ಕಾಗಿ ಪರದಾಡುತ್ತಿದ್ದ ವಿದ್ಯಾರ್ಥಿಗಳಿಗೆ ವೀರಾಜಪೇಟೆಯ ಮಾಲೇಟಿರ ಚೋಟು ಅಪ್ಪಣ್ಣನವರು ತಮ್ಮ ಮನೆ 'ಸ್ವರಾಜ್ ಭವನ'ದಲ್ಲಿ ಆಶ್ರಯ ನೀಡಿದರು. ಉಳಿದ ವಿದ್ಯಾರ್ಥಿಗಳು ಮಡಿಕೇರಿಯ ಕೊಡಗು ಪತ್ರಿಕಾ ಕಛೇರಿ ಮತ್ತು ಜಮೀನ್ದಾರರ ಸಂಘದಲ್ಲಿ ಆಶ್ರಯ ಪಡೆದುಕೊಂಡರು.

ಕೊಡಗಿನಾದ್ಯಂತ ೧೪೪ನೇ ಸೆಕ್ಷನ್ ಜಾರಿಯಾಯ್ತು. ಪೊನ್ನಂಪೇಟೆ, ಹುದಿಕೇರಿ, ಗೋಣಿಕೊಪ್ಪ, ವೀರಾಜಪೇಟೆ, ಅಮ್ಮತ್ತಿ, ಮೂರ್ನಾಡು, ಮಡಿಕೇರಿ, ಸುಂಟಿಕೊಪ್ಪ ಇವೇ ಮುಂತಾದ ಸ್ಥಳಗಳಲ್ಲಿ ವಿದ್ಯಾರ್ಥಿಗಳು ಮೆರವಣಿಗೆಯನ್ನು ಮಾಡಿದರು. ಅಂದು ಹೋರಾಟದ ಮುಂಚೂಣಿಯಲ್ಲಿದ್ದ ಬಲ್ಯಾಟಂಡ ಮುದ್ದಮ್ಮನವರನ್ನು ವೀರಾಜಪೇಟೆಯಲ್ಲಿ ಬಂಧಿಸಲಾಯ್ತು. ಪೊನ್ನಂಪೇಟೆ, ವೀರಾಜಪೇಟೆಗಳಲ್ಲಿ ಅಂಚೆಕಚೇರಿಗೆ ಡೈನಾಮೈಟ್ ಸಿಡಿಸಿ ತಮ್ಮ ಸ್ವಾತಂತ್ರ್ಯದ ಕಿಚ್ಚನ್ನು ಕ್ರಾಂತಿಕಾರಿಗಳು ತೋರಿಸಿದರು. ಹಲವಾರು ಸರಕಾರಿ ನೌಕರರು ಕೆಲಸಕ್ಕೆ ರಾಜೀನಾಮೆಯನ್ನು ನೀಡಿದರು.



## ಸ್ವಾತಂತ್ರ್ಯದ ಹಬ್ಬ

ಅಂದು ೧೯೪೭ ಆಗಸ್ಟ್ ೧೫ರಂದು ಇಡೀ ಕೊಡಗಿನಲ್ಲಿ ದೀಪಾವಳಿಯ ಆಚರಣೆ ನಡೆಯಿತು. ಸ್ವಾತಂತ್ರ್ಯದ ಗುರುತಾಗಿ ಮನೆಮನೆಗಳಲ್ಲಿ ಮಣ್ಣಿನ ಜ್ಯೋತಿ ಬೆಳಗಿದವು. ಬೀದಿಬೀದಿ, ನಾಡುಗಳಲ್ಲಿ ತ್ರಿವರ್ಣ ಧ್ವಜವನ್ನು ಹಾರಿಸಲಾಯಿತು. ಸ್ವಾತಂತ್ರ್ಯ ಹೋರಾಟದ ಕಲಿಗಳು ಮೀಸೆ ತಿರುವುತ್ತಾ ತ್ರಿವರ್ಣ ಧ್ವಜವನ್ನು ನೋಡುತ್ತಿದ್ದರೆ, ಮಹಿಳೆಯರು ಕುಣಿದು ಕುಪ್ಪಳಿಸಿದರು. ಮನೆಮನೆಗಳಲ್ಲಿ ಸಿಹಿ ಖಾದ್ಯ, ಕೊಡಗಿನ ಕಡಂಬಿಟ್ಟು ಸಿದ್ಧವಾದವು. ಅವಿರತ ಪ್ರಯತ್ನದ ಫಲವಾಗಿ ಸ್ವಾತಂತ್ರ್ಯದ ಹಕ್ಕಿ ವಿರಾಜಮಾನವಾಗಿ ಹಾರುವುದನ್ನು ಎಲ್ಲರೂ ಕಣ್ತುಂಬಿಕೊಂಡರು.

## ವ್ಯಕ್ತಿ ಪರಿಚಯ

### 'ಹುಬ್ಬಳ್ಳಿಯ ಹುಲಿ' ಚಕ್ಕೇರ ಮೊಣ್ಣಯ್ಯ

ಎಲ್ಲಿಯ ಕೊಡಗು, ಎಲ್ಲಿಯ ಹುಬ್ಬಳ್ಳಿ? ಕೊಡಗಿನ ಚಕ್ಕೇರ ಮೊಣ್ಣಯ್ಯನಿಗೆ 'ಹುಬ್ಬಳ್ಳಿಯ ಹುಲಿ' ಎಂದು ಹೆಸರು ಬರಲು ಕಾರಣವಿದೆ. ಸ್ವಾತಂತ್ರ್ಯ ಹೋರಾಟದ ಕ್ರಾಂತಿಕಾರಿ ಯುವಕ ಈ ಚಕ್ಕೇರ ಮೊಣ್ಣಯ್ಯ. ಹಲವಾರು ಬಾರಿ ಕಠಿಣ ಸಜೆಗೆ ಒಳಗಾದವರು. ಭೂಗತವಾಗಿದ್ದುಕೊಂಡೇ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗಿಯಾದರು. ಶಿವಪುರದ ಸತ್ಯಾಗ್ರಹ ಚಳುವಳಿಯಲ್ಲಿ ಭಾಗಿಯಾಗಿ ಹಿಂತಿರುಗಿ ಬರುವಾಗ ಇವರನ್ನು ಬ್ರಿಟಿಷ್ ಸರಕಾರ ಬಂಧಿಸಿತು. ಎಂಟೂವರೆ ವರ್ಷಗಳವರೆಗೆ ಕಾರಾಗೃಹವಾಸ ಅನುಭವಿಸಿದರು. ಇವರಿಗೆ ೧೯೪೭ರವರೆಗೆ ಗಡಿಪಾರು ಜಾರಿಯಲ್ಲಿತ್ತು. ಒಂದು ಮೊಕದ್ದಮೆಗೆ ಸಂಬಂಧಿಸಿದಂತೆ ಮೈಸೂರಿನ ಕೋರ್ಟಿನಲ್ಲಿ ವಿಚಾರಣೆಯನ್ನು ಇವರು

ಎದುರಿಸುವಾಗ ಮ್ಯಾಜಿಸ್ಟ್ರೇಟರು "Accused No. 1" ಎಂದು ಕರೆದಾಗ, "Don't call me Accused No. 1, address me with respect as patriot No. 1" ಎಂದು ಗುಡುಗಿದರು. ಇವರನ್ನು ೧೯೪೭ರ ವರೆಗೆ ಗಡಿಪಾರು ಮಾಡಲಾಗಿತ್ತು. ಈ ಕಾರಣದಿಂದಲೇ ಇವರು ಭೂಗತವಾಗಿದ್ದುಕೊಂಡೇ ಹುಬ್ಬಳ್ಳಿಯಲ್ಲಿ ಕೊಡಗು ನಾಡಿನ ಸ್ವಾತಂತ್ರ್ಯದ ಚಳುವಳಿಯ ಪ್ರೇರಕರಾಗಿ ಕಾರ್ಯನಿರ್ವಹಿಸಿದರು. ಈ ಕಾರಣದಿಂದಲೇ ಇವರನ್ನು 'ಹುಬ್ಬಳ್ಳಿಯ ಹುಲಿ' ಎಂದು ಕರೆದರು.

## ಪಂದ್ಯಂಡ ಬೆಳ್ಯಪ್ಪ



ಪಂದ್ಯಂಡ ಬೆಳ್ಯಪ್ಪನವರು ಕೊಡಗಿನ ಗಾಂಧಿ ಎಂದೇ ಪ್ರಖ್ಯಾತರಾದವರು. ಅಮ್ಮತ್ತಿನಾಡಿಗೆ ಸೇರಿದವರು. ಕೊಡಗಿನ ಸ್ವಾತಂತ್ರ್ಯ ಚಳುವಳಿಯಲ್ಲಿ ಬಹುಮುಖ್ಯ ಪಾತ್ರವನ್ನು ನಿರ್ವಹಿಸಿದ್ದಾರೆ. ಕೊಡಗಿನಲ್ಲಿ ಮದ್ಯಪಾನ ವಿರೋಧಿ ಚಟುವಟಿಕೆಯಲ್ಲಿ ಸಂಘಟನೆ ಮಾಡಿ ಸತ್ಯಾಗ್ರಹವನ್ನು ಆಚರಿಸಿದರು. ಇವರ ಭಾಷಣಕ್ಕೆ ಪ್ರಭಾವಿತರಾದ ಬಹಳಷ್ಟು ಯುವಕರು ಸ್ವಯಂಸೇವಕರಾಗಿ ದುಡಿದರು.

ಗಾಂಧೀಜಿಯನ್ನು ಕೊಡಗಿಗೆ ಕರೆತರುವಲ್ಲಿ ಇವರ ಪಾತ್ರ ಬಹುದೊಡ್ಡದು. ಮಹಾತ್ಮ ಗಾಂಧಿ, ನೆಹರು ಇನ್ನಿತರ ರಾಷ್ಟ್ರೀಯ ನಾಯಕರ ನೇರ ಸಂಪರ್ಕ ಇವರಿಗಿತ್ತು. ಕೊಡಗಿನಲ್ಲಿ ಬ್ರಿಟಿಷರ ವಿರುದ್ಧ ಚಳುವಳಿ, ಸತ್ಯಾಗ್ರಹಕ್ಕೆ ಇವರೇ ರೂವಾರಿ. ಗರ್ಭಿಣಿಯಾದ ಇವರ ಹೆಂಡತಿ ಸೀತಾ ಬೆಳ್ಯಪ್ಪನವರನ್ನು ಚಳುವಳಿಯಲ್ಲಿ ಭಾಗಿಯಾಗಿಸಿ, ಸೆರೆಮನೆವಾಸ ಅನುಭವಿಸಿದರೂ ದೇಶಕ್ಕಾಗಿ ತಮ್ಮ ಕುಟುಂಬ ಮಾಡುತ್ತಿರುವ ಸೇವೆ ಎಂದು ಭಾವಿಸಿದ ಅಪ್ಪಟ ದೇಶಭಕ್ತ, ಗಾಂಧಿವಾದಿ. ಹಾಗಾಗಿಯೇ ಇಂದಿಗೂ 'ಕೊಡಗಿನ ಗಾಂಧಿ' ಎಂದೇ ಜನಮಾನಸದಲ್ಲಿ ಉಳಿದಿದ್ದಾರೆ. ಅಷ್ಟೇ ಅಲ್ಲದೇ ಕೊಡಗು ಪತ್ರಿಕೆಯ ಸಂಪಾದಕರಾಗಿ ಜನಜಾಗೃತಿಯನ್ನು ಮಾಡುವಲ್ಲಿ ತಮ್ಮದೇ ಆದ ಛಾಪನ್ನು ಮೂಡಿಸಿದರು. ಅಂದು ಇವರಂಥ ನಾಯಕರು ಇಲ್ಲದಿದ್ದಿದ್ದರೆ ಸ್ವಾತಂತ್ರ್ಯ ಹೋರಾಟದಲ್ಲಿ ಕೊಡಗು ಶೂನ್ಯ ಎನಿಸುತ್ತಿತ್ತು. ಇಂದಿಗೂ ಇವರು ಕೊಡಗಿನ ಗಾಂಧಿಯಾಗಿ ಅಜರಾಮರರಾಗಿ ಜನಮಾನಸದಲ್ಲಿ ಉಳಿದಿದ್ದಾರೆ.



## ಪಾರೊಂಗಡ ಕುಶಾಲಪ್ಪ

ಸ್ವಾತಂತ್ರ್ಯ ಹೋರಾಟದಲ್ಲಿ ಕೇಳಿಬರುವ ಮತ್ತೊಂದು ಪ್ರಮುಖ ಹೆಸರು ಪಾರೊಂಗಡ ಕುಶಾಲಪ್ಪನವರದ್ದು. ಇವರು ಯುವ ಸಾಮಾಜಿಕ ಹೋರಾಟಗಾರನಾಗಿ ಕೊಡಗು ವ್ಯವಸಾಯಗಾರರ ಸಂಘದ ಅಧ್ಯಕ್ಷರಾಗಿ ಮತ್ತು ಜಿಲ್ಲಾ ಬೋರ್ಡ್ ಉಪಾಧ್ಯಕ್ಷರಾಗಿ ಕಾರ್ಯನಿರ್ವಹಿಸಿದರು. ಲೆಜಿಸ್ಲೇಟಿವ್ ಕೌನ್ಸಿಲ್‌ನ ಸದಸ್ಯರಾಗಿದ್ದರು. ೧೯೨೮ರಲ್ಲಿ ಕಲ್ಕತ್ತದಲ್ಲಿ ನಡೆದ ಕಾಂಗ್ರೆಸ್‌ನ ಸಮಾವೇಶದಿಂದ ಹಿಂತಿರುಗುವಾಗ ಮದ್ರಾಸಿನಲ್ಲಿ ತಮ್ಮ ೩೮ನೇ ವಯಸ್ಸಿನಲ್ಲಿ ಅಸುನೀಗಿದರು. ಇವರಿಗೆ ಶ್ರದ್ಧಾಂಜಲಿಯನ್ನು ಮಡಿಕೇರಿಯಲ್ಲಿ ವ್ಯವಸಾಯಗಾರರ ಸಂಘದಿಂದ ಆಯೋಜಿಸಲಾಯಿತು. ಇವರ ಜ್ಞಾಪಕಾರ್ಥ ಪೊನ್ನಂಪೇಟೆಯ ಒಂದು ಮೈದಾನದ ಹೆಸರನ್ನು 'ಕುಶಾಲಪುರ' ಎಂದು ನಾಮಕರಣ ಮಾಡಲಾಯಿತು. ಅಂದು ತ್ರಿವರ್ಣ ಧ್ವಜವನ್ನು ಹಾರಿಸಿ, ತಿಂಗಳ ಒಂದು ಭಾನುವಾರ ಧ್ವಜವಂದನಾ ದಿನವನ್ನಾಗಿ ಆಚರಿಸಲು ಸತ್ಯಾಗ್ರಹಿಗಳು ನಿರ್ಧರಿಸಿದರು. ಚಕ್ಕೇರ ಬಿ.ಮೊಣ್ಣಯ್ಯ ಇವರ ಶ್ರದ್ಧಾಂಜಲಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ವಿದ್ಯಾರ್ಥಿಯಾಗಿದ್ದ ಚಕ್ಕೇರ ಬಿ.ಮೊಣ್ಣಯ್ಯ ಸ್ವಾತಂತ್ರ್ಯ ಹೋರಾಟಗಾರನಾಗಿ ಬದಲಾಗಿದ್ದು ಪಾರೊಂಗಡ ಕುಶಾಲಪ್ಪನವರ ಪ್ರಭಾವದಿಂದ. ಕುಶಾಲಪ್ಪನವರ ತ್ಯಾಗಕ್ಕಾಗಿ ಪೊನ್ನಂಪೇಟೆಯಲ್ಲಿ ತಿಂಗಳ ಕೊನೆಯ ಭಾನುವಾರದಂದು ಚಕ್ಕೇರ ಬಿ.ಮೊಣ್ಣಯ್ಯನವರ ನೇತೃತ್ವದಲ್ಲಿ ಭಾರತದ ಬಾವುಟವನ್ನು ಹಾರಿಸಲಾಗುತ್ತಿತ್ತು.

## ಚೆಪ್ಪುಡಿರ ಪೂಣಚ್ಚ



ಚೆಪ್ಪುಡಿರ ಎಮ್. ಪೂಣಚ್ಚ ಯುವ ಉತ್ಸಾಹಿ ಸ್ವಾತಂತ್ರ್ಯ ಹೋರಾಟಗಾರ. ಇವರು ದಕ್ಷಿಣ ಕೊಡಗಿನ ಗೋಣಿಕೊಪ್ಪದ ಸಮೀಪ ಅತ್ತೂರಿಗೆ ಸೇರಿದವರು. ಯುವ ಕಾಂಗ್ರೆಸ್ಸಿನ ಕಾರ್ಯದರ್ಶಿಗಳಾಗಿ ದುಡಿದವರು. ಸ್ವಾತಂತ್ರ್ಯ ಹೋರಾಟದಲ್ಲಿ, ಸತ್ಯಾಗ್ರಹದಲ್ಲಿ ದುಡಿದು

ಹಲವಾರು ಯುವಕರ ಸಂಘಟನೆಯನ್ನು ಮಾಡಿದರು. 'ಸರ್ಪಾಸ್ತ್ರ' ಎಂಬ ಹಸ್ತಪ್ರತಿಯ ವಾರಪತ್ರಿಕೆಯನ್ನು ತಮ್ಮದೇ ತೋಟದಲ್ಲಿ ಮಧ್ಯರಾತ್ರಿಯ ನಂತರ ಅಚ್ಚು ಮಾಡಿಸಿ ಸದ್ದಿಲ್ಲದೆ ಪ್ರಚಾರಪಡಿಸಿದರು. ಹಲವರು ಬಾರಿ ಜೈಲುವಾಸವನ್ನು ಅನುಭವಿಸಿದ ಅಪ್ಪಟ ದೇಶಪ್ರೇಮಿ. ಕೊಡಗು ಪ್ರತ್ಯೇಕ 'ಸಿ' ಸ್ಟೇಟ್ ಆಗಿದ್ದಾಗ ಮುಖ್ಯಮಂತ್ರಿಗಳಾದರು.

### ಅಪ್ಪನೆರವಂಡ ಅಪ್ಪಚ್ಚು



ಕೊಡಗಿನ ಆದ್ಯ ಕವಿ ಅಪ್ಪನೆರವಂಡ ಅಪ್ಪಚ್ಚು. ೧೮೮೫ರಿಂದ ಕೊಡಗಿನಲ್ಲಿ ತಮ್ಮ ಸಾಹಿತ್ಯದ ಮೂಲಕ ಜನಮನ ಸೆಳೆದ ಅದ್ಭುತ ಕವಿ, ನಾಟಕಕಾರ. ೧೮೯೦ರಲ್ಲಿ ಇವರ ಮೊದಲ ನಾಟಕ ಪ್ರಕಟವಾಯಿತು. ಸ್ವಾತಂತ್ರ್ಯ ಹೋರಾಟದ ಕಿಚ್ಚನ್ನು ನಾಟಕದ ಮೂಲಕ ಪ್ರದರ್ಶಿಸಿ ಜನಜಾಗೃತಿಯನ್ನು ಮಾಡಿದರು. ಇವರು 'ಹರದಾಸ ಅಪ್ಪಚ್ಚ ಕವಿ' ಎಂದೇ ಖ್ಯಾತನಾಮರಾಗಿದ್ದಾರೆ. ಕೊಡಗಿನ ಉದ್ದಗಲಕ್ಕೂ ಅಂದು ಓಡಾಡಿ ನಾಟಕಗಳ ಮೂಲಕ ಬ್ರಿಟಿಷ್ ಸರಕಾರದ ವಿರುದ್ಧ ಜನಜಾಗೃತಿಯನ್ನು ಮಾಡಿದ್ದರು. ಇಂದಿಗೂ ಅವರ ಸಾಹಿತ್ಯದ ಚಟುವಟಿಕೆಗಳನ್ನು ನಡೆಸಿಕೊಂಡು ಬರುವ ಮೂಲಕ ಜನರು ಗೌರವ ಸಲ್ಲಿಸುತ್ತಿದ್ದಾರೆ.

### ಮಾತಂಡ ಸಿ.ಮಂದಪ್ಪ

ಸೇವಾದಳದ ಮಾತಂಡ ಸಿ.ಮಂದಪ್ಪ ಹುಬ್ಬಳ್ಳಿಯಲ್ಲಿ ಇರುತ್ತಿದ್ದರು. ಇವರು ಕೊಡಗಿನಲ್ಲಿ ಸೇವಾದಳದ ತರಬೇತಿಯನ್ನು ನೀಡುತ್ತಿದ್ದರು. ಅನೇಕ ಭಾಗಗಳಲ್ಲಿ ಶಿಬಿರವನ್ನು ನಡೆಸಿ ಯುವಕರನ್ನು ತರಬೇತಿಗೊಳಿಸಿದರು. ೧೯೩೧ರಲ್ಲಿ ಮೈಸೂರಿನಲ್ಲಿ ನಡೆದ ಸೇವಾದಳದ ತರಬೇತಿಯಲ್ಲಿ ಕೊಡಗಿನಿಂದ ಅಜ್ಜಿಕುಟ್ಟಿರ ಚಿನ್ನಪ್ಪ, ಚಕ್ಕೇರ ಮೊಣ್ಣಯ್ಯ, ತಮ್ಮಯ್ಯ, ಎಂ.ಪಿ.ಚಂಗಪ್ಪ ಭಾಗವಹಿಸಿದ್ದರು.



### ಸ್ವಾಮಿ ಶಾಂಭವಾನಂದಜಿ



'ರಾಮಕೃಷ್ಣ ಮಿಷನ್ ಆಫ್ ಇಂಡಿಯಾ'ದಲ್ಲಿ ಇದ್ದವರು. ಇವರ ಪೂರ್ವಾಶ್ರಮದ ಹೆಸರು ತೇಲಪಂಡ ಚಂಗಪ್ಪ. ಧಾರ್ಮಿಕ ಕ್ಷೇತ್ರದಲ್ಲಿ ತಮ್ಮನ್ನು ತೊಡಗಿಸಿಕೊಂಡರೂ ದೇಶದ ಒಳಿತಿಗಾಗಿ ಶ್ರಮಿಸಿದವರು. ಜನಪರ ಕಾಳಜಿಯಿಂದ ಮಲೇರಿಯಾ ರೋಗದ ವಿರುದ್ಧ ಸಮರ ಸಾರಿದರು. ಇವರ ಹೋರಾಟದ ಫಲವಾಗಿ ಮಲೇರಿಯಾ ಖಾಯಿಲೆಯ ತಡೆಯುವ ವಿಧಾನಗಳ ಬಗ್ಗೆ ಜನರಲ್ಲಿ ಅರಿವು ಮೂಡಿತು. ಮಲೇರಿಯಾ ರೋಗಕ್ಕೆ ಕಾರಣ ಸೊಳ್ಳೆ ಎಂಬುದನ್ನು 'ಸೊಳ್ಳೆ ಹಾಡು' ರಚಿಸಿ ಪ್ರಚಾರಪಡಿಸಿ ಜನಜಾಗೃತಿ ಮೂಡಿಸಿದ ಹೆಗ್ಗಳಿಕೆ ಇವರದು. ಬ್ರಿಟಿಷರ ವಿರುದ್ಧ ನಿಲ್ಲಬೇಕಾದರೆ ಮೊದಲು ನಾವು ಸ್ವಾವಲಂಬಿಗಳಾಗಬೇಕೆಂದು ಜನರಿಗಾಗಿ 'ಜೇನು ಸಾಕಣೆ ಸಹಕಾರ ಸಂಘ' ತೆರೆದರು. ಗಾಂಧೀಜಿಯವರು ಕೊಡಗಿಗೆ ಬಂದಾಗ, ಪೊನ್ನಂಪೇಟೆ ಮತ್ತು ಹುದಿಕೇರಿಯ ಸಭೆಯನ್ನು ನಡೆಸಿದಾಗ ರಾತ್ರಿ ರಾಮಕೃಷ್ಣಾಶ್ರಮದಲ್ಲಿ ತಂಗಲು ವ್ಯವಸ್ಥೆ ಕಲ್ಪಿಸಿದ್ದರು. ಅಷ್ಟೇ ಅಲ್ಲದೆ ಗಾಂಧೀಜಿಯವರು ಸಾರ್ವಜನಿಕರನ್ನು ಉದ್ದೇಶಿಸಿ ಮಾತನಾಡಲು ಸಾವಿರಾರು ಸಂಖ್ಯೆಯಲ್ಲಿ ಜನರನ್ನು ಸೇರಿಸುವಲ್ಲಿ ಯಶಸ್ವಿಯಾದರು.

### ಎಚ್.ಆರ್.ಕೃಷ್ಣಯ್ಯ

ಇವರು ಬೆಸ್ಗೂರು ಗ್ರಾಮಕ್ಕೆ ಸೇರಿದವರು. ೧೯೨೧ರಲ್ಲಿ ತಮ್ಮ ವಿದ್ಯಾಭ್ಯಾಸಕ್ಕೆ ತಿಲಾಂಜಲಿಯನ್ನಿಟ್ಟು ತಾಯ್ನಾಡಿಗೆ ಹಿಂತಿರುಗಿ ಮತ್ತೂರಿನಲ್ಲಿ ವಾಸ್ತವ್ಯವನ್ನು ಹೂಡಿದರು. ೧೯೨೯ರಲ್ಲಿ ಪೊನ್ನಂಪೇಟೆಯಲ್ಲಿ ನಡೆದ ವಾರ್ಷಿಕ ವ್ಯವಸಾಯಗಾರರ ಸಂಘದ ಸಮಾವೇಶಕ್ಕೆ ತೆರಳಿ ತಮ್ಮ ಬೆಲೆಬಾಳುವ ಸೂಟನ್ನು ಬೆಂಕಿಗೆ ಆಹುತಿ ಮಾಡಿದರು. ಸ್ಥಳದಲ್ಲಿಯೇ ಭಾರತ ಸ್ವತಂತ್ರ ಆಗುವವರೆಗೂ ಖಾದಿಯನ್ನು ತೊಡುವುದಾಗಿ ಶಪಥ ಮಾಡಿದರು. ಇವರು ಮುಂದೆ ಕಾಂಗ್ರೆಸ್ಸಿನ ಪ್ರಾಮಾಣಿಕ ಸೇವಕರಾಗಿ ದುಡಿದರು.

# ಉಲ್ಲೇಖ


- ಪತ್ರಕರ್ತ ಮಾಣಿಪಂಡ ಸಂತೋಷ್ ತಮ್ಮಯ್ಯನವರಿಂದ ಮಾಹಿತಿ.
- ಕರ್ನಾಟಕ ಸಾಹಿತ್ಯ ಅಕಾಡೆಮಿ ನಡೆಸಿದ – ಐಟ್ಟಿರ ಬಿದ್ದಪ್ಪ ಅವರ ಉಪನ್ಯಾಸ (ಸ್ವಾತಂತ್ರ್ಯ ಹೋರಾಟದಲ್ಲಿ ಕೊಡವರು).
- ಮೂಕೊಂಡ ನಿತಿನ್ ಕುಶಾಲಪ್ಪನವರ– Long Ago in Coorg.
- ನಡಿಕೇರಿಯಂಡ ಚಿಣ್ಣಪ್ಪನವರ– ಪಟ್ಟೋಲೆ ಪಳಮೆ.
- ಮೊಣ್ಣಂಡ ಶೋಭಾ ಸುಬ್ಬಯ್ಯನವರು ಕೊಡವ ಭಾಷೆಗೆ ಅನುವಾದಿಸಿದ– ಐ. ಮಾ. ಮುತ್ತಣ್ಣನವರ A tiny model of south India.
- ಅಡ್ಡಂಡ ಕಾರ್ಯಪ್ಪನವರ– ಕೊಡಗಿನೊಡೆಯರು ಕೊಡವರು.
- ಡಾ. ಕಳ್ಳಿಚಂಡ ರಶ್ಮಿ ನಂಜಪ್ಪ ಅವರ–ವೀರಾಜಪೇಟೆ ತಾಲೂಕಿನ ಸ್ಥಳನಾಮಗಳು.
- ಕೂರ್ಗ್ ಗೆಜೆಟಿಯರ್.
- ೧೯೪೪ರ ಕೊಡಗು ಪತ್ರಿಕೆ.
- ಅಂತರ್ಜಾಲದ ಮಾಹಿತಿ.


**ಅಮೃತ ಮಹೋತ್ಸವ ಪ್ರಕಟಣೆ – ೭೫ ಕಿರುಪುಸ್ತಕಗಳ ಪಟ್ಟಿ**
**ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ**

| ಕ್ರಸಂ. | ಪುಸ್ತಕದ ಹೆಸರು | ಲೇಖಕರ ಹೆಸರು | ಬೆಲೆ |
|---|---|---|---|
| ೧. | ತುರುವನೂರು | ಡಾ. ಪಿ. ಯಶೋದಾ ರಾಜಶೇಖರಪ್ಪ | ೩೦/– |
| ೨. | ಚಿತ್ರದುರ್ಗ | ಡಾ. ಬಿ. ರಾಜಶೇಖರಪ್ಪ | ೩೦/– |
| ೩. | ರಾಮಸ್ವಾಮಿ ವೃತ್ತ | ಮಂಜುನಾಥ ಹೆಚ್.ಎಲ್. | ೩೦/– |
| ೪. | ಸುಬ್ಬರಾಯನ ಕೆರೆ | ಡಾ. ಇಂದಿರಾ ಬಿ.ಪಿ. | ೩೦/– |
| ೫. | ಬದನವಾಳು | ಡಾ. ಇಂದಿರಾ ಬಿ.ಪಿ. | ೩೦/– |
| ೬. | ತಗಡೂರು | ಡಾ. ಹೆಚ್.ಎಸ್. ಉಷಾರಾಣಿ | ೩೦/– |
| ೭. | ಶಿವಪುರ | ಡಾ. ಲಿಂಗರಾಜು | ೩೦/– |
| ೮. | ಮಂಡ್ಯ | ಡಾ. ಶಿವರಾಮು ಎಸ್. | ೩೦/– |
| ೯. | ಚಾಮರಾಜನಗರ | ಡಾ. ಸುಂದ್ರೇಶ ಎನ್. | ೩೦/– |
| ೧೦. | ಗುಂಡ್ಲುಪೇಟೆ | ಕವಿತಾ ಎ. | ೩೦/– |
| ೧೧. | ಗೊರೂರು | ಡಾ. ಯೋಗೇಶ್ ಎನ್.ಇ. | ೩೦/– |
| ೧೨. | ಅರಸೀಕೆರೆ | ಡಾ. ಮಂಜುನಾಥ ಜಿ.ಆರ್. | ೩೦/– |
| ೧೩. | ಹೊಸರಿತ್ತಿ | ಡಾ. ಹೇಮಪ್ಪ ಬ. ಕೆಂಚಳ್ಳಿ | ೩೦/– |
| ೧೪. | ಕನ್ನೇಶ್ವರ | ಡಾ. ಚಾಮರಾಜ ಕಮ್ಮಾರ | ೩೦/– |
| ೧೫. | ಚಳ್ಳಕೂಡ್ಲೂರು | ರಾಮಣ್ಣ ಹವಳೆ | ೩೦/– |
| ೧೬. | ನ್ಯಾಷನಲ್ ಹೈಸ್ಕೂಲು | ಟಿ.ಕೆ. ತಿಮ್ಮರಾಜ ಶೆಟ್ಟಿ | ೩೦/– |
| ೧೭. | ಬನಪ್ಪ ಪಾರ್ಕ್ | ರಮೇಶ ದೊಡ್ಡಪುರ | ೩೦/– |

| | | | |
|---|---|---|---|
| ೧೮. | ಮಲ್ಲೇಶ್ವರ | ಕೆ.ಎಲ್. ನಟರಾಜ್ | ೩೦/– |
| ೧೯. | ದಂಡುಪ್ರದೇಶ | ಪ್ರಮೋದ್ ನ. ಗೋ. | ೩೦/– |
| ೨೦. | ದೇವನಹಳ್ಳಿ | ಕೆ.ಆರ್. ನರಸಿಂಹನ್ | ೩೦/– |
| ೨೧. | ದೊಡ್ಡಬಳ್ಳಾಪುರ | ಡಿ.ಎಂ. ಘನಶ್ಯಾಮ | ೩೦/– |
| ೨೨. | ರಾಮನಗರ | ಎಸ್. ಶರತ್ ಚಂದ್ರ | ೩೦/– |
| ೨೩. | ಕನಕಪುರ | ಡಾ. ಎಸ್.ಎಚ್. ಭುವನೇಶ್ವರ | ೩೦/– |
| ೨೪. | ಶ್ರೀನಿವಾಸಪುರ | ಪ್ರೊ. ಕೆ.ಆರ್. ಜಯಶ್ರೀ | ೩೦/– |
| ೨೫. | ಬಂಗಾರಪೇಟೆ | ಪ್ರೊ. ಕೆ.ಆರ್. ಜಯಶ್ರೀ | ೩೦/– |
| ೨೬. | ವಿದುರಾಶ್ವತ್ಥ | ಡಾ. ಎಸ್.ಜಿ. ರಾಮದಾಸ ರೆಡ್ಡಿ | ೩೦/– |
| ೨೭. | ಈಸೂರು | ಮಾರ್ಪಳ್ಳಿ ಆರ್. ಮಂಜುನಾಥ್ | ೩೦/– |
| ೨೮. | ನಗರ(ಬಿದನೂರು) | ಚಿನ್ಮಯ ಎಂ.ಸಿ. | ೩೦/– |
| ೨೯. | ಚನ್ನಗಿರಿ | ಡಾ. ಕೆಳದಿ ವೆಂಕಟೇಶ ಜೋಯಿಸ್ | ೩೦/– |
| ೩೦. | ದಾವಣಗೆರೆ | ಸಹನಾ ಚೇತನ್ | ೩೦/– |
| ೩೧. | ಸಿಂದಗಿ | ಡಾ. ರಮೇಶ ಎಸ್. ಕತ್ತಿ | ೩೦/– |
| ೩೨. | ಮಸಬಿನಾಳ | ಶಂಕರ ಬೈಚಬಾಳ | ೩೦/– |
| ೩೩. | ಸಾರವಾಡ | ಡಾ. ಸೋಮಶೇಖರ ವಾಲಿ | ೩೦/– |
| ೩೪. | ಹಲಸಂಗಿ | ಶ್ರೀ ಸುಮಿತ್ ಮೇತ್ರಿ | ೩೦/– |
| ೩೫. | ನರಗುಂದ | ಡಾ. ನಿಂಗು ಸೊಲಗಿ | ೩೦/– |
| ೩೬. | ಮುಂಡರಗಿ | ಡಾ. ಉಮೇಶ ತಿಮ್ಮಾಪುರ | ೩೦/– |



| | | | |
|---|---|---|---|
| ೩೭. | ಹಲಗಲಿ | ಡಾ. ವಿಜಯಶ್ರೀ ಇಟ್ಟಣ್ಣವರ | ೩೦/– |
| ೩೮. | ಬಿಸನಾಳ | ಡಾ. ವಿನಯಕುಮಾರ್ ಹಿರೇಮಠ | ೩೦/– |
| ೩೯. | ಬಾಗಲಕೋಟೆ | ರಾಮ ಮನಗೂಳಿ | ೩೦/– |
| ೪೦. | ಬಾದಾಮಿ | ಡಾ. ಪ್ರಕಾಶ ಗ. ಖಾಡೆ | ೩೦/– |
| ೪೧. | ಸುರಪುರ | ಶ್ರೀನಿವಾಸ ಜಾಲವಾದಿ | ೩೦/– |
| ೪೨. | ಕೆಂಭಾವಿ | ನಿಂಗನಗೌಡ ಹ. ದೇಸಾಯಿ | ೩೦/– |
| ೪೩. | ರಾಜನಕೋಳೂರು | ರಾಘವೇಂದ್ರ ಜಹಗೀರದಾರ | ೩೦/– |
| ೪೪. | ಭಾಲ್ಕಿ | ಡಾ. ರಘುಶಂಖ ಭಾತಂಬ್ರಾ | ೩೦/– |
| ೪೫. | ಗೋರಟಾ | ಷ.ಬ್ರ. ಡಾ. ರಾಜಶೇಖರ ಶಿವಾಚಾರ್ಯ ಸ್ವಾಮಿಗಳು | ೩೦/– |
| ೪೬. | ಕೇಂದ್ರ ಮೈದಾನ | ಡಾ. ವಸಂತಕುಮಾರ್ ಪೆರ್ಲ | ೩೦/– |
| ೪೭. | ರಾಮಶಾಲಾ ಬಯಲು | ರಾಮಣ್ಣ ಹವಳೆ | ೩೦/– |
| ೪೮. | ಉಳ್ಳಾಲ | ಡಾ. ಜ್ಯೋತಿ ಚೇಳ್ಯಾರು | ೩೦/– |
| ೪೯. | ಅಮರಸುಳ್ಯ | ಸಹನಾ ಕಾಂತಬೈಲು | ೩೦/– |
| ೫೦. | ಅಜ್ಜರಕಾಡು ಮೈದಾನ | ಡಾ. ಪೃಥ್ವೀರಾಜ ಕವತ್ತಾರು | ೩೦/– |
| ೫೧. | ಬಸರೂರು–ಕುಂದಾಪುರ | ಮಂಜುನಾಥ್ ಚಾಂದ್ | ೩೦/– |
| ೫೨. | ಪೊನ್ನಂಪೇಟೆ | ಸೊಮೆಯಂಡ ಕೌಸಲ್ಯ ಸತೀಶ್ | ೩೦/– |
| ೫೩. | ಮಡಿಕೇರಿ | ಪ್ರೊ. ಕೆ.ಆರ್. ದೀಕ್ಷಿತ್ | ೩೦/– |
| ೫೪. | ಅಜ್ಜಂಪುರ | ಚಿ.ಸ. ಪ್ರಭುಲಿಂಗ ಶಾಸ್ತ್ರಿ | ೩೦/– |
| ೫೫. | ಚಿಕ್ಕಮಗಳೂರು | ಚಿ.ಸ. ಪ್ರಭುಲಿಂಗ ಶಾಸ್ತ್ರಿ | ೩೦/– |

| | | | |
|---|---|---|---|
| ೫೬. | ಕಲಬುರಗಿ | ಡಾ. ಶಂಭುಲಿಂಗವಾಣಿ | ೩೦/– |
| ೫೭. | ಮುಧೋಳ–ಸೇಡಂ | ಮುಡಬಿ ಗುಂಡೇರಾವ | ೩೦/– |
| ೫೮. | ಅಂಕೋಲಾ | ಶಾಂತಾರಾಮ ನಾಯಕ | ೩೦/– |
| ೫೯. | ಶಿರಸಿ | ಪದ್ಮಾಕರ ಮಡಗಾಂವಕರ | ೩೦/– |
| ೬೦. | ಕಾರವಾರ | ಡಾ. ಉದಯ ಶಂಕರ ಪುರಾಣಿಕ | ೩೦/– |
| ೬೧. | ಬಳ್ಳಾರಿ | ಡಾ. ಮೃತ್ಯುಂಜಯ ರುಮಾಲೆ | ೩೦/– |
| ೬೨. | ಹೊಸಪೇಟೆ | ಡಾ. ಮೃತ್ಯುಂಜಯ ರುಮಾಲೆ | ೩೦/– |
| ೬೩. | ಕೊಟ್ಟೂರು | ಡಾ. ಮೃತ್ಯುಂಜಯ ರುಮಾಲೆ | ೩೦/– |
| ೬೪. | ಕೂಡ್ಲಿಗಿ | ಡಾ. ಕೆ. ಸತೀಶ | ೩೦/– |
| ೬೫. | ಕಿತ್ತೂರು | ಪ್ರಕಾಶ ಗಿರಿಮಲ್ಲನವರ | ೩೦/– |
| ೬೬. | ಹುದಲಿ | ಪ್ರಕಾಶ ಗಿರಿಮಲ್ಲನವರ | ೩೦/– |
| ೬೭. | ಬೆಳಗಾವಿ | ಪ್ರಕಾಶ ಗಿರಿಮಲ್ಲನವರ | ೩೦/– |
| ೬೮. | ಹುಲಕುಂದ | ಪ್ರಕಾಶ ಗಿರಿಮಲ್ಲನವರ | ೩೦/– |
| ೬೯. | ಬೆಂಗೇರಿ | ಪ್ರಕಾಶ ಗಿರಿಮಲ್ಲನವರ | ೩೦/– |
| ೭೦. | ಕೊಪ್ಪಳ | ಮಹೇಶ ಬಳ್ಳಾರಿ | ೩೦/– |
| ೭೧. | ಗಂಗಾವತಿ | ರಮೇಶ ಸಿ. ಬನ್ನಿಕೊಪ್ಪ | ೩೦/– |
| ೭೨. | ಅಳವಂಡಿ | ಡಾ. ಪ್ರಕಾಶ ಬಳ್ಳಾರಿ | ೩೦/– |
| ೭೩. | ತುಮಕೂರು | ಡಾ. ಬಿ. ನಂಜುಂಡಸ್ವಾಮಿ | ೩೦/– |
| ೭೪. | ಮಧುಗಿರಿ | ಡಾ. ಬಿ. ನಂಜುಂಡಸ್ವಾಮಿ | ೩೦/– |
| ೭೫. | ತಾವರೆಕೆರೆ | ಪ್ರೊ. ಕೆ. ಪುಟ್ಟರಂಗಪ್ಪ | ೩೦/– |